ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 2 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 77 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


G SQUARE 13 YEARS OF BUILDING Trust
G SQUARE GROUP
YOUR HOME. YOUR DREAM. YOUR CHOICE.
PLOTS | VILLAS | APTS.
ಜಿ ಸ್ಕ್ವೇರ್ ಅಲ್ಕೆಮಿ
SHOT AT THE PROJECT LOCATION
I ❤ G SQUARE
35+ ವಿಶ್ವ ದರ್ಜೆಯ ಸೌಲಭ್ಯಗಳು
ಪ್ಲಾಟ್ + ವಿಲ್ಲಾ ಖರೀದಿಸಿ ಮತ್ತು ₹25 ಲಕ್ಷದವರೆಗೆ ಉಳಿಸಿ
BUILD YOUR VILLA AND GET DISCOUNT UP TO ₹5 LAKHS*
OFFICIAL VILLA CONSTRUCTION PARTNER
Brick & Bolt
HOME & COMMERCIAL CONSTRUCTION
EXPERIENCE VILLA LIVING, SPECIALLY CRAFTED FOR YOU
PLOT + 2 BHK VILLA
BUILT UP AREA: 1162 SQ.FT
ಮಾರುಕಟ್ಟೆ ಬೆಲೆ
~~₹1CR~~
ಜಿ ಸ್ಕ್ವೇರ್ ಬೆಲೆ
₹75L
PLOT + 3 BHK VILLA
BUILT UP AREA: 2522 SQ.FT
ಮಾರುಕಟ್ಟೆ ಬೆಲೆ
~~₹1.95CR~~
ಜಿ ಸ್ಕ್ವೇರ್ ಬೆಲೆ
₹1.63CR
PLOT + 4 BHK VILLA
BUILT UP AREA: 3487 SQ.FT
ಮಾರುಕಟ್ಟೆ ಬೆಲೆ
~~₹2.51CR~~
ಜಿ ಸ್ಕ್ವೇರ್ ಬೆಲೆ
₹2.26 CR
350+ ಪ್ಲಾಟ್‌ಗಳು ಮಾರಾಟಗೊಂಡಿದೆ ಮತ್ತು ನೋಂದಣಿ ಯಶಸ್ವಿಯಾಗಿ ಪ್ರಾರಂಭಗೊಂಡಿದೆ!
LAND WANTED IN AND AROUND SOUTH INDIA | 3 TO 300 ACRES | OUTRIGHT | JOINT VENTURE | APPROVED OR UNDER APPROVAL LAYOUTS
FOR ENQUIRY: 99629 83004
Up To 80% Bank Loan Available
Canara Bank
ICICI Bank
HDFC BANK
AXIS BANK
punjab national bank
LIC HFL
G SQUARE BUILD ASSIST
A POST-PURCHASE GUIDANCE PROGRAM
MEMBER CREDAI
CASH NOT ACCEPTED
89397 10006
www.gsquarehousing.com



ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 2 ಗುರುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ- ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 77 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಗೃಹಜ್ಯೋತಿ ದುರುಪಯೋಗಕ್ಕೆ ಬ್ರೇಕ್ ಹಾಕಲು ಸರ್ಕಾರ ನಿರ್ಧಾರ

ಫಲಾನುಭವಿಗಳಿಂದ ದಾಖಲೆ ಸಂಗ್ರಹ ಆರಂಭ



ಬೆಂಗಳೂರು, ಜು.1(ಕೆಎಂಶಿ)– ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಜ್ಯೋತಿ ಸೌಲಭ್ಯದ ದುರುಪಯೋಗಕ್ಕೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಇಂದಿನಿಂದ ಕ್ರಮಕ್ಕೆ ಮುಂದಾಗಿದೆ.

ಈಗಾಗಲೇ ಅನ್ನಭಾಗ್ಯ ಹಾಗೂ ಗೃಹಲಕ್ಷ್ಮೀ ಗ್ಯಾರಂಟಿಗಳಿಗೆ ದೊಡ್ಡ ಪ್ರಮಾಣದಲ್ಲಿ ಕಡಿವಾಣ ಹಾಕಿರುವ ಸರ್ಕಾರ ಇದೀಗ 200 ಯೂನಿಟ್‌ಗಳವರೆಗೆ ನೀಡುತ್ತಿದ್ದ ಉಚಿತ ವಿದ್ಯುತ್‌ಗೂ ಕೊಕ್ಕೆ ಹಾಕಿದೆ.

ಹೊರ ರಾಜ್ಯದವರು, ಸರ್ಕಾರಿ ನೌಕರರು, ಆದಾಯ ತೆರಿಗೆ ಪಾವತಿದಾರರು ಹಾಗೂ ಎಪಿಎಲ್ ಪಡಿತರ ಚೀಟಿ ಹೊಂದಿರುವವರಿಗೆ ಗೃಹಲಕ್ಷ್ಮೀ ಯೋಜನೆ ಸ್ಥಗಿತಗೊಳಿಸಲು ಮುಂದಾಗಿದೆ.

ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಅಧಿಕಾರ ಚುಕ್ಕಾಣಿ ಹಿಡಿದ ಸಂದರ್ಭದಲ್ಲಿ, ವಿಧಾನಸಭಾ ಚುನಾವಣೆ ವೇಳೆ ಮತದಾರರಿಗೆ ನೀಡಿದ ಭರವಸೆಯಂತೆ ಪಂಚ ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತರಲಾಗಿತ್ತು.

ಶಕ್ತಿ ಹಾಗೂ ಗೃಹಲಕ್ಷ್ಮೀ ಯೋಜನೆ ಅನುಷ್ಠಾನ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ನನ್ನ ಹಾಗೂ ಸಚಿವ ಮಹದೇವಪ್ಪ ಕುಟುಂಬ ಸೇರಿದಂತೆ ರಾಜ್ಯದ ಎಲ್ಲಾ ಮಹಿಳೆಯರಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣ, 2 ಸಾವಿರದ ಗೃಹಲಕ್ಷ್ಮೀ ಹಾಗೂ ಗೃಹ ಜ್ಯೋತಿ ಗ್ಯಾರಂಟಿ ಅಡಿ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ■10ನೇ ಪುಟಕ್ಕೆ

ಗೃಹಜ್ಯೋತಿ ಯೋಜನೆ ರದ್ದು ಇಲ್ಲವೇ, ಕಡಿತಗೊಳಿಸಲ್ಲ!

ಚಿಕ್ಕಮಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಜ್ಯೋತಿ ಯೋಜನೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಪರಿಷ್ಕರಣೆ ಮತ್ತು ಅರ್ಹತೆ ಕುರಿತು ಮೂಡಿದ್ದ ಗೊಂದಲಗಳಿಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಸ್ಪಷ್ಟನೆ ನೀಡಿದ್ದಾರೆ.


ಕೆ.ಜೆ. ಜಾರ್ಜ್

ಯೋಜನೆಯನ್ನು ರದ್ದುಪಡಿಸುವ ಅಥವಾ ಕಡಿತಗೊಳಿಸುವ ಯಾವುದೇ ನಿರ್ಧಾರ ಸರ್ಕಾರದ ಮುಂದೆ ಇಲ್ಲ ಎಂದು ಹೇಳಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸರ್ಕಾರ ಯೋಜನೆಯ ಮೂಲ ಸ್ವರೂಪವನ್ನು ಬದಲಾಯಿಸುತ್ತಿಲ್ಲ. ಬದಲಿಗೆ ಯೋಜನೆಯ ಸೌಲಭ್ಯ ನಿಜವಾದ ಅರ್ಹ ಫಲಾನುಭವಿಗಳಿಗೆ ಮಾತ್ರ ತಲುಪುವಂತೆ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಕೈಗೊಳ್ಳುತ್ತಿದೆ. ಈ ಉದ್ದೇಶಕ್ಕಾಗಿ ಶೀಘ್ರದಲ್ಲೇ ಮನೆ ಮನೆಗೆ ಅರ್ಜಿ ನಮೂನೆಗಳನ್ನು ವಿತರಿಸಲಾಗುವುದು. ಆ ವೇಳೆ, ಯೋಜನೆಯ ಅರ್ಹತಾ ಮಾನದಂಡಗಳು ಹಾಗೂ ಅಗತ್ಯ ಮಾಹಿತಿಯನ್ನು ಸಾರ್ವಜನಿಕರಿಗೆ ವಿವರಿಸಲಾಗುವುದು ಎಂದು ತಿಳಿಸಿದರು.

ಇದು ಹೊಸ ಪರಿಷ್ಕರಣೆ ಅಥವಾ ಯೋಜನೆಗೆ ಕತ್ತರಿ ■10ನೇ ಪುಟಕ್ಕೆ

ವಿಬಿ ಜಿ ರಾಮ್ ಜಿ ಉದ್ಯೋಗ ಖಾತ್ರಿ ಯೋಜನೆ ಕರ್ನಾಟಕದಲ್ಲಿ ಕೂಲಿ ದರ ಹೆಚ್ಚಳ





ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎಂ ನರೇಗಾ– ಯೋಜನೆ ವಿಕಸಿತ್ ಭಾರತ್ – ರೋಜ್‌ಗಾರ್ ಮತ್ತು ಆಜೀವಿಕಾ ಮಿಷನ್(ವಿಬಿ ಜಿ ರಾಮ್ ಜಿ) ಯೋಜನೆಯಡಿ) ಬುಧವಾರದಿಂದಲೇ ಜಾರಿಗೊಂಡಿದ್ದು, ಕೂಲಿ ದರವನ್ನು ಕರ್ನಾಟಕದಲ್ಲಿ ಪರಿಷ್ಕರಣೆ ಮಾಡಲಾಗಿದೆ.

ಕೇಂದ್ರದ ಉದ್ಯೋಗ ಖಾತ್ರಿ ಯೋಜನೆಯಡಿ ಪ್ರತಿಯೊಬ್ಬರಿಗೆ ದಿನಕ್ಕೆ ಕನಿಷ್ಠ 370 ಕೂಲಿ ನಿಗದಿಪಡಿಸಲಾಗಿತ್ತು. ಈಗ ಅದನ್ನು 382ಕ್ಕೆ ಏರಿಕೆ ಮಾಡಲಾಗಿದೆ.

ಇದು ಕನಿಷ್ಠ ಕೂಲಿ ದರ ಆಗಿದ್ದು, ಇದರಲ್ಲಿ ಘಟಕದ ಖರ್ಚು ಸೇರಿ ಒಟ್ಟು ಪ್ರತಿ ದಿನಕ್ಕೆ ರೂ 620 ವರೆಗೂ ಪ್ರತಿ ದಿನಕ್ಕೆ ಖರ್ಚಾಗಲಿದೆ. ಕಳೆದ ವರ್ಷ ಎಲ್ಲವೂ ಸೇರಿ 585 ಘಟಕದ ವೆಚ್ಚ ಇತ್ತು.

ಆಯಾ ರಾಜ್ಯದಲ್ಲಿನ ಕೂಲಿ ಪ್ರಮಾಣ, ಕೃಷಿ ಬೇಡಿಕೆಯನ್ನು ನೋಡಿಕೊಂಡು ಕೇಂದ್ರ ಸರ್ಕಾರ ಕೂಲಿ ದರ ನಿಗದಿ ಮಾಡುತ್ತದೆ. ಈ ವರ್ಷದ ದರವನ್ನು ನಿಗದಿ ಮಾಡಲಾಗಿದೆ. ಬುಧವಾರ ದಿಂದಲೇ ಇದು ಜಾರಿಯಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಯಾವ ರಾಜ್ಯಕ್ಕೆ ಎಷ್ಟು: ಕೇಂದ್ರ ಸರ್ಕಾರವೂ ಹಲವು ರಾಜ್ಯಗಳಿಗೆ ಹೊಸ ವೇತನ ದರಗಳನ್ನು ನಿಗದಿಪಡಿಸಿದೆ.

ಗುಜರಾತ್, ಮಣಿಪುರ, ಮಿಜೋರಾಂ, ರಾಜಸ್ಥಾನ, ಒಡಿಶಾ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ಮೇಘಾಲಯ, ಛತ್ತೀಸ್‌ಗಢ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಸಿಕ್ಕಿಂ, ಅಸ್ಸಾಂ, ತ್ರಿಪುರ, ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ, ಉತ್ತರಾಖಂಡ, ಹಿಮಾಚಲ ಪ್ರದೇಶ (ಅನುಸೂಚಿತ ಪ್ರದೇಶಗಳು), ಅರುಣಾಚಲ ಪ್ರದೇಶ, ನಾಗಾಲ್ಯಾಂಡ್ ಈ 21 ರಾಜ್ಯಗಳಿಗೆ ಕೂಲಿ ದರವನ್ನು ಪ್ರತಿದಿನಕ್ಕೆ 300 ನಿಗದಿಪಡಿಸಲಾಗಿದೆ.

ಇತರ ರಾಜ್ಯಗಳಿಗೆ ಕೂಲಿ ದರ: ತೆಲಂಗಾಣಕ್ಕೆ 308, ಆಂಧ್ರಪ್ರದೇಶಕ್ಕೆ 312, ಮಹಾರಾಷ್ಟ್ರಕ್ಕೆ 317, ದಾದ್ರಾ ಮತ್ತು ನಗರ ಹವೇಲಿ ಮತ್ತು ದಮನ್ ಮತ್ತು ಡಿಯುಗೆ 340, ತಮಿಳುನಾಡಿಗೆ 345, ಪುದುಚೇರಿಗೆ 347, ಅಂಡಮಾನ್ ಮತ್ತು ನಿಕೋಬಾರ್ (ಅಂಡಮಾನ್ ಜಿಲ್ಲೆ) ಮತ್ತು ಲಕ್ಷದ್ವೀಪಕ್ಕೆ ತಲಾ 348, ಪಂಜಾಬ್‌ಗೆ 360, ಅಂಡಮಾನ್ ಮತ್ತು ನಿಕೋಬಾರ್ (ನಿಕೋಬಾರ್ ಜಿಲ್ಲೆ) 367, ಹಿಮಾಚಲ ಪ್ರದೇಶ (ನಿಗದಿತ ಪ್ರದೇಶಗಳು) 375, ಕರ್ನಾಟಕಕ್ಕೆ 382 ನಿಗದಿಯಾಗಿದೆ. ಕೇರಳಕ್ಕೆ 401 ಮತ್ತು ಗೋವಾಕ್ಕೆ 406. ಸಿಕ್ಕಿಂನಲ್ಲಿರುವ ಮೂರು ಗ್ರಾಮ ಪಂಚಾಯಿತಿಗಳು – ಗ್ನಾಥಾಂಗ್, ಲಾಚುಂಗ್ ಮತ್ತು ಲಾಚೆನ್ ಗೆ 450 ಸ್ಥಿರ ಕೂಲಿ ನೀಡಲಾಗುತ್ತದೆ.

365 ದಿನವೂ ಉದ್ಯೋಗ ಖಾತ್ರಿಗೆ ಒತ್ತಾಯ: ಈ ಬಾರಿ 100ರಿಂದ 125 ದಿನಕ್ಕೆ ಉದ್ಯೋಗದ ದಿನಗಳನ್ನು ಹೆಚ್ಚಿಸಲಾಗಿದೆ. ಆದರೆ, ಗ್ರಾಮೀಣ ಜನರಿಗೆ ಸುಗ್ಗಿಯ ಕಾಲದಲ್ಲಿ 60 ದಿನಗಳ ಕಾಲ ಉದ್ಯೋಗ ನೀಡುವುದಿಲ್ಲ ಎಂಬುದು ಸರಿಯಲ್ಲ. ಗ್ರಾಮೀಣ ಕುಟುಂಬದ ಜನರು ಉದ್ಯೋಗಕ್ಕೆ ಬೇಡಿಕೆ ಇಟ್ಟಾಗ ಅವರಿಗೆ ಉದ್ಯೋಗ ನೀಡಬೇಕು. ವರ್ಷದ 365 ದಿನವೂ ಉದ್ಯೋಗದ ಖಾತ್ರಿ ನೀಡಬೇಕು ಎನ್ನುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರ ಒತ್ತಾಯ.

ರಾಮ ಮಂದಿರ ಕಾಣಿಕೆ ಕಳ್ಳತನ ಕೇಸ್

ಎಸ್‌ಐಟಿ ತನಿಖೆ ಅವಧಿ 15 ದಿನ ವಿಸ್ತರಿಸಿದ ಸಿಎಂ ಯೋಗಿ ಸರ್ಕಾರ



ಉತ್ತರಪ್ರದೇಶ: ರಾಮ ಮಂದಿರ ಕಾಣಿಕೆ ವಂಚನೆ ಪ್ರಕರಣದಲ್ಲಿ ರಚಿಸಲಾಗಿರುವ ವಿಶೇಷ ತನಿಖಾ ದಳದ (ಎಸ್‌ಐಟಿ) ತನಿಖಾ ಅವಧಿಯನ್ನು ಇನ್ನೂ 15 ದಿನ ವಿಸ್ತರಿಸಿ ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ.


ಯೋಗಿ ಆದಿತ್ಯನಾಥ್

ದೇಣಿಗೆ ಹುಂಡಿಯಲ್ಲಿ 7 ಕೋಟಿ ರೂಪಾಯಿ ಕಾಣಿಕೆ ಕಳ್ಳತನ ಮಾಡಲಾಗಿದೆ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಸಿಎಂ ಯೋಗಿ ಆದಿತ್ಯನಾಥ್ ನೇತೃತ್ವದ ರಾಜ್ಯ ಸರ್ಕಾರ ಈ ಬಗ್ಗೆ ತನಿಖೆ ನಡೆಸಲು ಎಸ್‌ಐಟಿ ರಚಿಸಿದೆ. ತನಿಖೆ ಪೂರ್ಣಗೊಳಿಸಲು ತಂಡದ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ರಾಜ್ಯ ಸರ್ಕಾರದ ವಕ್ತಾರರು ಬುಧವಾರ ತಿಳಿಸಿದ್ದಾರೆ.

ಮೂವರ ನೇತೃತ್ವದಲ್ಲಿ ತನಿಖೆ: ವಕ್ತಾರರು ನೀಡಿದ ಮಾಹಿತಿಯಂತೆ, ದೇವಾಲಯದ ದೇಣಿಗೆ ಹುಂಡಿಯಿಂದ ಕೋಟ್ಯಂತರ ರೂಪಾಯಿ ಕಾಣಿಕೆ ಹಣವನ್ನು ಕಳ್ಳತನ ಮಾಡಲಾಗಿದೆ ಎಂದು ■10ನೇ ಪುಟಕ್ಕೆ

ಶಾಲಾ ಬಸ್‌ನಲ್ಲಿ ಪ್ರಯಾಣಿಸುವ ಮಕ್ಕಳ ಸುರಕ್ಷತೆ ಶಾಲೆಯ ಜವಾಬ್ದಾರಿ



ಬೆಂಗಳೂರು: ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ದಿವ್ಯಜ್ಯೋತಿ ಶಾಲೆ ಆಡಳಿತ ಮಂಡಳಿಯ ವಿರುದ್ಧ ದಾಖಲಾದ ಕ್ರಿಮಿನಲ್ ಪ್ರಕರಣದ ತನಿಖೆಗೆ ಕರ್ನಾಟಕ ಹೈಕೋರ್ಟ್ ಅನುಮತಿ ನೀಡಿದೆ.

ನಾಲ್ಕನೇ ತರಗತಿಯ ವಿದ್ಯಾರ್ಥಿಯೊಬ್ಬ ಶಾಲಾ ಬಸ್‌ನಲ್ಲಿ ಮನೆಗೆ ಹಿಂದಿರುಗುವ ವೇಳೆ ಕೆಲವು ಮಕ್ಕಳು ಹಾರಿಸಿದ ಕಾನ್ಫೆಟ್ಟಿ ಗ್ಲಿಟರ್ ಕಣ್ಣಿಗೆ ಬಿದ್ದ ಪರಿಣಾಮ ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡಿದ್ದು, ದೇಹದ ಒಟ್ಟು ಸಾಮರ್ಥ್ಯದ ಶೇ.40ರಷ್ಟು ಅಂಗವೈಕಲ್ಯ ಬಾಲಕನಿಗೆ ಉಂಟಾಗಿದೆ ಎಂದು ಆರೋಪಿಸಲಾಗಿತ್ತು.

ಈ ಸಂಬಂಧ ಶಾಲೆಯ ವಿರುದ್ಧ ದಾಖಲಾಗಿದ್ದ ಗಂಭೀರ ನಿರ್ಲಕ್ಷ್ಯದ ಪ್ರಕರಣವನ್ನು ರದ್ದುಗೊಳಿಸುವಂತೆ ಶಾಲಾ ಆಡಳಿತ ಮಂಡಳಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯ ಮೂರ್ತಿ ಎಂ. ನಾಗ ಪ್ರಸನ್ನ ತಳ್ಳಿಹಾಕಿದರು.

ಶಾಲಾ ಬಸ್ ಎನ್ನುವುದು ಶಾಲೆಯ ಭಾಗವೇ ಆಗಿದ್ದು, ಅದರ ಚಟುವಟಿಕೆಯ ವಿಸ್ತರಣೆ ಆಗಿದೆ. ಶಾಲೆಯಿಂದ ಹೊರಟ ಮಗು ತನ್ನ ಮನೆಯವರೆಗೆ, ಅದು ಕೊನೆಯ ನಿಲ್ದಾಣವಾಗಿದ್ದರೂ ಸಹ, ಸುರಕ್ಷಿತವಾಗಿ ತಲುಪುವ ಹೊಣೆಗಾರಿಕೆಯಿಂದ ಶಾಲೆ ಕೈತೊಳೆದುಕೊಳ್ಳಲು ಸಾಧ್ಯವಿಲ್ಲ. ಕಾನೂನಿನಲ್ಲಿ ನಿಗದಿಪಡಿಸಿರುವ ಕರ್ತವ್ಯಗಳನ್ನು ಪಾಲಿಸುವ ಜವಾಬ್ದಾರಿಯಿಂದ ಶಾಲೆಗಳು ಹಿಂದೆ ಸರಿಯಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ■10ನೇ ಪುಟಕ್ಕೆ

ಮೋಟಾರು ಅಪಘಾತ ಸಂತ್ರಸ್ತರ ಆದಾಯ ಲೆಕ್ಕಾಚಾರ ಸಂಬಂಧ ಹೊಸ ಮಾರ್ಗಸೂಚಿ



ನವದೆಹಲಿ: ಅಪಘಾತ ಪರಿಹಾರ ಪ್ರಕರಣಗಳಲ್ಲಿ ಮೃತರು ಮತ್ತು ಗಾಯಾಳುಗಳಿಗೆ ನೀಡುವ ಪರಿಹಾರ ಲೆಕ್ಕಾಚಾರದಲ್ಲಿ ಏಕರೂಪತೆ ತರಲು ಸುಪ್ರೀಂಕೋರ್ಟ್ ಹೊಸ ಮಾರ್ಗಸೂಚಿಗಳನ್ನು ಬುಧವಾರ ಹೊರಡಿಸಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಎನ್.ಕೋಟೀಶ್ವರ್ ಅವರಿದ್ದ ಪೀಠವು ರಶ್ಮಿರೇಖಾ ತ್ರಿಪಾಠಿ ಪ್ರಕರಣದ ಅರ್ಜಿಯ ವಿಚಾರಣೆಯ ವೇಳೆ ಮೋಟಾರು ವಾಹನ ಕಾಯ್ದೆಯಡಿ ವಾರ್ಷಿಕ ಆದಾಯವನ್ನು ಲೆಕ್ಕಾಚಾರ ಮಾಡುವುದು ಕಠಿಣವೇನಲ್ಲ. ಸಂಬಳ ಪಡೆಯುವ ಉದ್ಯೋಗಿಗಳು ಮತ್ತು ಸ್ವಯಂ ಉದ್ಯೋಗಿಗಳ ನಡುವೆ ಅವರ ಆದಾಯ ತೆರಿಗೆ ರಿಟರ್ನ್ ಅನ್ನು ಲೆಕ್ಕಾಚಾರ ಮಾಡಿದರೆ ಸಾಕು ಎಂದಿದೆ.

ವಾರ್ಷಿಕ ಆದಾಯದ ಮೌಲ್ಯಮಾಪನಕ್ಕೆ ಬಂದಾಗ ಸಂಬಳ ಪಡೆಯುವ ವ್ಯಕ್ತಿಗಳು ಮತ್ತು ಸ್ವಯಂ ಉದ್ಯೋಗಿ ವ್ಯಕ್ತಿಗಳ ನಡುವೆ ವಿಭಜನೆ ಇರಬೇಕು ಎಂಬ ಹಿರಿಯ ವಕೀಲ ಜೆಆರ್. ಮಿಧಾ ಅವರ ವಾದವನ್ನು ಕೋರ್ಟ್ ಒಪ್ಪಿಕೊಂಡಿತು.

ನ್ಯಾಯಾಲಯಗಳಿಂದ ವಿವಿಧ ನಿಯಮ ಪರಿಶೀಲನೆ: ದೇಶಾದ್ಯಂತ ವಿವಿಧ ನ್ಯಾಯಾಲಯಗಳು ಅನುಸರಿಸುವ ವಿಧಾನಗಳನ್ನು ಗುರುತಿಸಿದ ಪೀಠವು, ಕೆಲವು ನ್ಯಾಯಾಲಯಗಳು ಇತ್ತೀಚಿನ ಐಟಿಆರ್ ಮಾತ್ರ ಪರಿಗಣಿಸಿದ್ದರೆ, ಇನ್ನು ಕೆಲವು ನ್ಯಾಯಾಲಯಗಳು ಹಿಂದಿನ ವರ್ಷಗಳ ಐಟಿಆರ್‌ನಲ್ಲಿನ ಸರಾಸರಿ ಆದಾಯವನ್ನು ಅವಲಂಬಿಸಿ ತೀರ್ಪು ನೀಡಿವೆ ಎಂದಿತು. ■10ನೇ ಪುಟಕ್ಕೆ



ಮುಂಗಾರು ವೈಫಲ್ಯ ಹಿನ್ನೆಲೆ

ಕುಡಿಯುವ ನೀರಿಗೆ ಪ್ರತಿ ಜಿಲ್ಲೆಗೆ 5 ಕೋಟಿ ಬಿಡುಗಡೆ

- ಸದ್ಯ ಮೋಡ ಬಿತ್ತನೆ ಚಿಂತನೆ ಇಲ್ಲ
- ಬರ ನಿರ್ವಹಣೆಯತ್ತ ಮಾತ್ರ ಆದ್ಯತೆ

ಬೆಂಗಳೂರು, ಜು.1(ಕೆಎಂಶಿ)– ಪ್ರಸಕ್ತ ಮುಂಗಾರು ಮಳೆ ವಾಡಿಕೆಗಿಂತ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕುಡಿಯುವ ನೀರು ಸಮಸ್ಯೆ ನಿವಾರಣೆಗೆ ಪ್ರತಿ ಜಿಲ್ಲೆಗೆ 5 ಕೋಟಿ ರೂ. ಮೀಸಲಿಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ.


ಡಾ.ಜಿ.ಪರಮೇಶ್ವರ್

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಕೆಲವೆಡೆ ಬರದ ಛಾಯೆ ಕಾಣಿಸುತ್ತಿದೆ, ಮಳೆ ಕೊರತೆಯಿಂದ ಕುಡಿಯುವ ನೀರು ಪೂರೈಕೆ ಹಾಗೂ ಕೃಷಿ ಚಟುವಟಿಕೆಗಳ ಮೇಲೆ ಉಂಟಾಗಲಿರುವ ಪರಿಣಾಮಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ಜೂನ್‌ನಲ್ಲಿ ವಾಡಿಕೆಯ ಮಳೆ ಬಿದ್ದಿಲ್ಲ. ಅಂತರ್ಜಲ ಮಟ್ಟ ಕುಸಿದಿದೆ. ಮುಂದಿನ ದಿನಗಳಲ್ಲಿ ಸಾಕಷ್ಟು ಮಳೆ ಬಾರದಿದ್ದರೆ ಸಂಕಷ್ಟ ಎದುರಾಗಲಿದೆ. ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮ ಕೈಗೊಂಡು ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಕ್ರಮ ಕೈಗೊಳ್ಳಲಾಗುವುದು.

ಈ ಸಂಬಂಧ ತುರ್ತು ಕಾರ್ಯಯೋಜನೆ ಸಿದ್ಧಪಡಿಸಿಕೊಳ್ಳಲಾಗಿದೆ. ಜಿಲ್ಲಾಧಿಕಾರಿಗಳು ಯೋಜನೆ ಕಾರ್ಯಗತಗೊಳಿಸಲಿದ್ದಾರೆ ಎಂದರು. ಬರಪೀಡಿತ ತಾಲೂಕು ಹಾಗೂ ಜಿಲ್ಲೆ ಘೋಷಣೆಗೆ ಮಾನದಂಡಗಳಿವೆ. ಮಳೆ ಬೀಳದ ಪ್ರದೇಶ, ಬೆಳೆ ನಷ್ಟ ಪ್ರಮಾಣ, ನೀರಿನ ಮಟ್ಟ ಲೆಕ್ಕ ಹಾಕಿ ಬರ ಪ್ರದೇಶವಾಗಿ ಘೋಷಿಸಲಾಗುತ್ತದೆ.

ಬರ ಪೀಡಿತ ಪ್ರದೇಶ ಘೋಷಣೆ ಕುರಿತು ಚರ್ಚೆ ನಡೆದಿಲ್ಲ. ಈಗಲೇ ಮೋಡ ಬಿತ್ತನೆ ಚಿಂತನೆ ಇಲ್ಲ. ಸಂದರ್ಭ ನೋಡಿಕೊಂಡು ನಿರ್ಧರಿಸಲಾಗುವುದು. ಬರ ಪರಿಸ್ಥಿತಿ ಎದುರಾದಾಗಲೆಲ್ಲಾ ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇವೆ, ರಾಜಕೀಯ ದೃಷ್ಟಿಯಿಂದ ಪ್ರತಿಕ್ರಿಯಿಸುತ್ತಿಲ್ಲ. ರಾಜ್ಯದ ಬರ ವರದಿ ■10ನೇ ಪುಟಕ್ಕೆ

ನಾನು ತಪಾಸಣೆಗೆ ಹೋದರೆ ಆಸ್ಪತ್ರೆಗೆ ದಾಖಲು! ಸುಸ್ತಾಗಿ ನಡೆದರೆ ಕುಡಿದಿದ್ದಾರೆಂದು ವರದಿ ಸರಿಯೇ...!?

ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಬೇಸರದ ನುಡಿ


ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಷಣ.

ಬೆಂಗಳೂರು, ಜು.1(ಕೆಎಂಶಿ)– ಪತ್ರಕರ್ತರು ವೃತ್ತಿಯ ತತ್ವ, ನೈತಿಕತೆ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದರೆ ಸಮಾಜಕ್ಕೆ ಒಳಿತಾಗಲಿದೆ. ಫೇಕ್ ನ್ಯೂಸ್ ಜಾಲದಿಂದ ಪತ್ರಿಕಾ ವೃತ್ತಿ ಹೊರಬರಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರೆ ನೀಡಿದ್ದಾರೆ.

ನಿರ್ಭೀತಿಯ ಪತ್ರಿಕಾ ವೃತ್ತಿ ಇಂದಿನ ಸಂದರ್ಭದಲ್ಲಿ ಅತ್ಯಂತ ಸವಾಲಿನ ಕೆಲಸವಾಗಿದ್ದು, ತತ್ವಬದ್ಧ ವೃತ್ತಿಪರತೆಯಿಂದ ಸವಾಲುಗಳನ್ನು ಗೆಲ್ಲಬಹುದು ಎಂದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾನು ಸಹಜವಾಗಿ ಆರೋಗ್ಯ ತಪಾಸಣೆಗೆ ತೆರಳಿದರೆ, ಆಸ್ಪತ್ರೆಗೆ ದಾಖಲಾಗಿದ್ದೇನೆ ಎಂಬುದಾಗಿ ಕೆಲವು ಟಿವಿ ವಾಹಿನಿಗಳು ಪ್ರಸಾರ ಮಾಡಿದವು, ಇದು ತಪ್ಪು ಸುದ್ದಿಯಾಗುತ್ತದೆ ಎಂದರು.

ಮೇಕೆದಾಟು ಪಾದಯಾತ್ರೆ ವೇಳೆ ತಾವು ನಿತ್ರಾಣಗೊಂಡು ಕಾರ್ಯಕರ್ತರ ತಳ್ಳಾಟದಿಂದ ನಡೆದಾಡಲು ಅಡ್ಡಿಯಾದ ಘಟನೆಯನ್ನು 'ಕುಡಿದು ನಡೆದುಕೊಂಡು ಬರುತ್ತಿದ್ದಾರೆ' ಎಂಬ ರೀತಿಯಲ್ಲಿ ಬಿಂಬಿಸಲಾಯಿತು. ಇದು ಜನರಿಗೆ ತಪ್ಪು ಸಂದೇಶ ನೀಡುವ ಉದ್ದೇಶಪೂರ್ವಕ ಪ್ರಯತ್ನವಾಗಿತ್ತು ಎಂದು ಟೀಕಿಸಿದರು. ನಾನು ತಪ್ಪು ಮಾಡಿದರೆ ಬಹಿರಂಗಪಡಿಸಿ, ಆದರೆ ಸುಳ್ಳು ಸುದ್ದಿಗಳನ್ನು ಪ್ರಕಟಿಸಬೇಡಿ. ಪ್ರಸಾರ ಮಾಡಬೇಡಿ. ಸುದ್ದಿ ಪ್ರಕಟವಾಗುವವರೆಗೆ ಪತ್ರಕರ್ತರದ್ದಾಗಿರುತ್ತದೆ. ಪ್ರಕಟಣೆ ನಂತರ ಅದು ಸಮಾಜದ ಆಸ್ತಿಯಾಗುತ್ತದೆ. ಆದ್ದರಿಂದ ಪ್ರತಿಯೊಂದು ಸುದ್ದಿಯಲ್ಲೂ ಸತ್ಯ ಮತ್ತು ಪ್ರಾಮಾಣಿಕತೆ ಇರಬೇಕು. ಮಹಾತ್ಮ ಗಾಂಧಿ ಸೇರಿದಂತೆ ಅನೇಕ ಮಹನೀಯರು ಪತ್ರಕರ್ತರಾಗಿ ಪತ್ರಿಕಾವೃತ್ತಿಯ ಘನತೆ ಎತ್ತಿ ಹಿಡಿದಿದ್ದಾರೆ. ಅಂತಹ ಪರಂಪರೆ ಮುಂದುವರೆಸಿಕೊಂಡು ಹೋಗಬೇಕು ಎಂದು ಕರೆ ನೀಡಿದರು.

ಜು.17, ಜು.24, ಜು.31, ಆ.6ರಂದು ಚಾಮುಂಡಿಬೆಟ್ಟದಲ್ಲಿ ಆಷಾಢ ಪೂಜಾ ಮಹೋತ್ಸವ

ಈ ಸಲ ವಿಐಪಿಗಳಿಗೆ 4 ಗಂಟೆ ಮಾತ್ರ ದೇವಿ ದರ್ಶನ ಭಾಗ್ಯ; ಸಾಮಾನ್ಯ ಭಕ್ತರಿಗೆ ಬೆಳಗ್ಗೆಯಿಂದ ರಾತ್ರಿವರೆಗೂ ಅವಕಾಶ



- ಉಸ್ತುವಾರಿ ಸಚಿವ ಡಾ. ಯತೀಂದ್ರ ಮಾಹಿತಿ
- ಈ ಬಾರಿ ಧರ್ಮ ದರ್ಶನ, 2 ಸಾವಿರ ರೂ. ಟಿಕೆಟ್‌ನಲ್ಲಿ ವಿಶೇಷ ದರ್ಶನಕ್ಕೆ ಮಾತ್ರ ಅವಕಾಶ
- ಯಾವ ಶಿಫಾರಸು ಪತ್ರಗಳಿಗೂ ಮಾನ್ಯತೆ ಇಲ್ಲ

ಮೈಸೂರು, ಜು.1(ಎಂಟಿವೈ)– ಆಷಾಢ ಮಾಸದ ಶುಕ್ರವಾರದಂದು ಚಾಮುಂಡಿಬೆಟ್ಟದಲ್ಲಿ ನಡೆಯುವ ವಿಶೇಷ ಪೂಜಾ ಮಹೋತ್ಸವದಲ್ಲಿ ವಿಐಪಿಗಳಿಗೆ ಸೀಮಿತ ಅವಧಿ ನಿಗಧಿ ಮಾಡಿ, ಸಾಮಾನ್ಯ ಭಕ್ತರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ದಾಸೋಹ ಭವನದಲ್ಲಿ ಆಷಾಢ ಶುಕ್ರವಾರದ ಪೂಜಾ ಮಹೋತ್ಸವದ ಪೂರ್ವಭಾವಿ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಆಷಾಢ ಶುಕ್ರವಾರದ ಪೂಜಾ ಮಹೋತ್ಸವದಂದು ವಿಐಪಿಗಳಿಂದ ಭಕ್ತರಿಗೆ ತೊಂದರೆ ಎಂಬ ಆರೋಪ ಕೇಳಿ ಬಂದಿತ್ತು. ಈ ಹಿನ್ನೆಲೆಯಲ್ಲಿ ಸಾಮಾನ್ಯ ಭಕ್ತರಿಗೆ ತೊಂದರೆಯಾಗುವುದನ್ನು ತಡೆಗಟ್ಟಲು ಈ ಬಾರಿ ವಿಐಪಿಗಳಿಗಾಗಿ ಸೀಮಿತ ಅವಧಿ ನಿಗಧಿ ಮಾಡಲಾಗಿದೆ. ಮುಂಜಾನೆ 5.30ರಿಂದ ಬೆಳಗ್ಗೆ 9.30ರೊಳಗೆ ವಿಐಪಿಗಳು ಚಾಮುಂಡಿಬೆಟ್ಟಕ್ಕೆ ಬಂದು ದರ್ಶನ ಪಡೆಯುವಂತೆ ಮಾಹಿತಿ ನೀಡಲಾಗುತ್ತದೆ. ಬೆಳಗ್ಗೆ 9.30ರಿಂದ ರಾತ್ರಿ 9.30ರವರೆಗೂ ಸಾಮಾನ್ಯ ಭಕ್ತರು ಸುಲಲಿತವಾಗಿ ದೇವರ ದರ್ಶನ ಪಡೆಯಲು ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದರು.

ಬೆಟ್ಟಕ್ಕೆ ಖಾಸಗಿ ವಾಹನ ಪ್ರವೇಶವಿಲ್ಲ

ಆಷಾಢ ಮಾಸದ ಶುಕ್ರವಾರಗಳು ಹಾಗೂ ವರ್ಧಂತಿ ಮಹೋತ್ಸವದೊಂದಿಗೆ ಶನಿವಾರ, ಭಾನುವಾರವೂ ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳಿಗೆ ಪ್ರವೇಶವಿರುವುದಿಲ್ಲ. ಭಕ್ತರು ಲಲಿತಮಹಲ್ ಪ್ಯಾಲೆಸ್ ಮೈದಾನದಲ್ಲಿ ವಾಹನ ನಿಲ್ಲಿಸಿ, ಸಾರಿಗೆ ಸಂಸ್ಥೆಯ ಬಸ್‌ನಲ್ಲಿಯೇ ಬೆಟ್ಟಕ್ಕೆ ಪ್ರಯಾಣಿಸಬೇಕು ಎಂದು ತಿಳಿಸಿದರು.

ಶಿಫಾರಸ್ಸು ಪತ್ರ ತರುವವರಿಗೂ ವಾಹನ ಪ್ರವೇಶವಿಲ್ಲ: ಜನಪ್ರತಿನಿಧಿಗಳು ಸೇರಿದಂತೆ ವಿವಿಧ ಶಿಫಾರಸ್ಸು ಪತ್ರ ತರುವ ಭಕ್ತರು ತಮ್ಮ ಖಾಸಗಿ ವಾಹನಗಳನ್ನು ಲಲಿತಮಹಲ್ ಪ್ಯಾಲೆಸ್ ಮೈದಾನದಲ್ಲಿಯೇ ನಿಲ್ಲಿಸಿ, ಬಸ್‌ನಲ್ಲಿ ಬೆಟ್ಟಕ್ಕೆ ಬರಬೇಕು. ಈ ಬಾರಿ ಕಟ್ಟುನಿಟ್ಟಾಗಿ ಕ್ರಮ ಕೈಗೊಂಡು ಸಾಮಾನ್ಯ ಭಕ್ತರಿಗೆ ವಿಶೇಷ ಆದ್ಯತೆ ನೀಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.


ಚಾಮುಂಡಿಬೆಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಆಷಾಢ ಮಾಸದ ವಿಶೇಷ ಮಹೋತ್ಸವ ಕುರಿತು ಪೂರ್ವಭಾವಿ ಸಭೆ ನಡೆಸಿದರು.

ಜು.17, ಜು.24, ಜು.31, ಆ.6ರಂದು ಆಷಾಢ ಶುಕ್ರವಾರ, ಆ.4ರಂದು ಚಾಮುಂಡೇಶ್ವರಿ ಅಮ್ಮನವರ ವರ್ಧಂತ್ಯೋತ್ಸವ ನಡೆಯಲಿದೆ. ಈ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಭಕ್ತರು ದೇವಿಯ ದರ್ಶನಕ್ಕೆ ಬರುತ್ತಾರೆ. ಅಲ್ಲದೇ ಈ ದಿನದಂದು ದರ್ಶನ ಪಡೆಯಲಾಗದವರು, ಶನಿವಾರ, ಭಾನುವಾರದಂದು ಹೆಚ್ಚಿನ ಪ್ರಮಾಣದಲ್ಲಿ ಬೆಟ್ಟಕ್ಕೆ ಆಗಮಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ ಭಕ್ತಾಧಿಗಳ ಅನುಕೂಲತೆ ದೃಷ್ಟಿಯಿಂದ ಸಿದ್ಧತೆಗಳನ್ನು ಸಮರ್ಪಕವಾಗಿ ಮಾಡಲಾಗುವುದು. ಭಕ್ತರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಮಹಿಷಾಸುರ ಪ್ರತಿಮೆ ಬಳಿಯಿಂದ: ವಿಐಪಿ ಹಾಗೂ ಶಿಷ್ಟಾಚಾರದ ವ್ಯಾಪ್ತಿಗೆ ಬರುವವರಿಗೆ ಬೆಟ್ಟಕ್ಕೆ ಖಾಸಗಿ ಹಾಗೂ ಸರ್ಕಾರಿ ವಾಹನದಲ್ಲಿ ಬಂದರೂ, ಅದನ್ನು ಮಹಿಷಾಸುರ ಪ್ರತಿಮೆಯಿಂದ ಹಿಂದೆಯೇ ನಿಲುಗಡೆ ಮಾಡಬೇಕು. ಯಾವುದೇ ಕಾರಣಕ್ಕೂ ದೇವಾಲಯದವರೆಗೆ ■10ನೇ ಪುಟಕ್ಕೆ

300 ರೂ. ಟಿಕೆಟ್; ಪಾಸ್ ಇಲ್ಲ

ಆಷಾಢ ಶುಕ್ರವಾರದಂದು ತಾಯಿಯ ದರ್ಶನ ಮಾಡಲು ಯಾವುದೇ ರೀತಿಯ ಪಾಸ್ ವ್ಯವಸ್ಥೆ ಇರುವುದಿಲ್ಲ. ಧರ್ಮ ದರ್ಶನ ಹಾಗೂ 2000 ರೂ. ಟಿಕೆಟ್ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ 300 ರೂ. ಟಿಕೆಟ್ ರದ್ದು ಮಾಡಲಾಗಿದೆ. ಆನ್‌ಲೈನ್, ಮೊಬೈಲ್ ಆ್ಯಪ್ ಮೂಲಕ ಹಾಗೂ ಬೆಟ್ಟ ಮತ್ತು ಲಲಿತ ಮಹಲ್ ಪ್ಯಾಲೆಸ್ ಮೈದಾನದ ಪಾರ್ಕಿಂಗ್ ಸ್ಥಳದ ಬಳಿಯೂ 2000 ರೂ. ಮುಖಬೆಲೆಯ ಟಿಕೆಟ್ ಖರೀದಿಸಬಹುದಾಗಿದೆ. ಈ ಟಿಕೆಟ್ ಪಡೆದ ಭಕ್ತರನ್ನು ಹವಾನಿಯಂತ್ರಿತ ಸಾರಿಗೆ ಬಸ್‌ನಲ್ಲಿ ಕರೆದೊಯ್ದು, ನೇರವಾಗಿ ದೇವಾಲಯದಲ್ಲಿ ದರ್ಶನ ಮಾಡಿಸಲು ವ್ಯವಸ್ಥೆ ಮಾಡಲಾಗಿದೆ. ಈ ಟಿಕೆಟ್ ಪಡೆದ ಭಕ್ತರಿಗೆ ಕುಡಿಯುವ ನೀರಿನ ಬಾಟಲ್, ದೇವರ ಪ್ರಸಾದವನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : ಬೊಗಳೋ ನಾಯಿ ಕಚ್ಚೋದಿಲ್ಲ ಯಾಕೆ?

ಸಂತು : ಯಾಕೆಂದರೆ, ಒಂದೇ ಸಮಯದಲ್ಲಿ ಎರಡು ಕೆಲಸ ಮಾಡೋಕೆ ಆಗೋದಿಲ್ಲ ನೋಡಿ! ಅದಕ್ಕೆ!!

ಮೈಸೂರು ಮಿತ್ರ

ಗುರುವಾರ, ಜುಲೈ 2, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬೇರೆಯವರ ಮನಸ್ಸನ್ನು ನೋಯಿಸುವುದು ಸುಲಭ. ಆದರೆ ಅದೇ ಮನಸ್ಸನ್ನು ಖುಷಿ ಪಡಿಸುವುದು ತುಂಬಾ ಕಷ್ಟ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಶಸ್ತ್ರದಿಂದಾದ ಗಾಯ ಮಾಯುತ್ತದೆ, ನಾಲಿಗೆಯಿಂದಾದ ಗಾಯ ಮಾಯುವುದಿಲ್ಲ.

ನಿಮ್ಮ ಪತ್ರಗಳು

ಮುತ್ತತ್ತಿ ದುರಂತ: ಕೆಲವು ಸಲಹೆಗಳು !!

ಮಾನ್ಯರೆ,

ಇತ್ತೀಚೆಗೆ ಹಲಗೂರು ಕಾವೇರಿ ನದಿಯಲ್ಲಿ ಸೆಲ್ಫಿ ತೆಗೆದುಕೊಳ್ಳಲು ಹೋದ ಒಂದೇ ಕುಟುಂಬದ ನಾಲ್ವರು ಹಾಗೂ ಕಾರು ಚಾಲಕ ನೀರಿನಲ್ಲಿ ಮುಳುಗಿ ಜಲಸಮಾಧಿಯಾಗಿರುವ ದುರಂತ ಮಳವಳ್ಳಿ ತಾಲೂಕಿನ ಪ್ರಸಿದ್ಧ ತಾಣ ಮುತ್ತತ್ತಿಯಲ್ಲಿ ನಡೆದಿರುವುದು ನಿಜಕ್ಕೂ ದುರಾದೃಷ್ಟಕರ ಹಾಗೂ ಸ್ವಯಂಕೃತ ಅಪರಾಧ. ಇಂತಹ ಅಪಾಯಕಾರಿ ಘಟನೆ ಪದೇ ಪದೇ ಸಂಭವಿಸುತ್ತಿರುತ್ತವೆ. ಸಾರ್ವಜನಿಕರಿಗೆ ಇದು ಗೊತ್ತಿದ್ದೂ ಪುನಃ ಅದೇ ತಪ್ಪನ್ನು ಮಾಡುತ್ತಿದ್ದಾರೆ. ಜೀವದ ಬಗ್ಗೆ ಭಯವೇ ಇಲ್ಲ. ಅಲ್ಲಿ ದಿನದ 24 ಗಂಟೆ ಪೊಲೀಸ್ ಗಸ್ತನ್ನು ನೇಮಿಸಿ ನದಿಯ ಸಮೀಪ ಯಾರನ್ನೂ ಹೋಗಲು ಬಿಡಬಾರದು. ಇದರ ಜೊತೆಗೆ ಸಾರ್ವಜನಿಕರಿಗೆ ರಕ್ಷಣೆ ಕೊಡಬೇಕು. ಪ್ರತಿ ವರ್ಷ ಮಾರ್ಚ್‌ನಿಂದ ಜೂನ್‌ವರೆಗೆ ಪ್ರವಾಸಿಗರಿಗೆ ಇಲ್ಲಿನ ತಾಣಕ್ಕೆ ನಿಷೇಧ ಹೇರಬೇಕು.

–ಜಿ.ಪಿ.ಸತೀಶ, ಸಮಾಜ ಸೇವಕ, ವಿ.ವಿ.ಮೊಹಲ್ಲಾ, ಮೈಸೂರು

ರೌಡಿ ಪ್ರತಿಬಂಧಕ ದಳ ದಕ್ಷತೆಯಿಂದ ಕಾರ್ಯ ನಿರ್ವಹಿಸಲಿ

ಮಾನ್ಯರೆ,

ಜೂ. 27 ರಂದು 'ಮೈಸೂರು ಮಿತ್ರ'ನ ಬಿಚ್ಚು ನುಡಿಯಲ್ಲಿ ವಿಕ್ರಂ ಮುತ್ತಣ್ಣನವರು ಪ್ರಸ್ತಾಪಿಸಿರುವ ವಿಷಯಗಳು ಗಂಭೀರವಾಗಿವೆ. ಪೊಲೀಸ್ ಇಲಾಖೆ ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕಿದೆ. ಇಂದಿನ ರಾಜಕೀಯ ಪರಿಸ್ಥಿತಿ, ಪೊಲೀಸ್ ಇಲಾಖೆಯ ಹಿನ್ನಲೆಯನ್ನು ಗಮನಿಸಿದಾಗ ಇದು ಹತ್ತರ ಜೊತೆ ಮತ್ತೊಂದು ಎನ್ನುವಂತೆ ಎನ್ನುವ ಅನುಮಾನ ಸಾರ್ವಜನಿಕರನ್ನು ಕಾಡದಿರದು. ಅಂದ ಹಾಗೆ ಹಿಂದೆ ಕೂಡ ರೌಡಿ ಪ್ರತಿಬಂಧಕ ದಳ ಇತ್ತು. ಕೊನೆ ಕೊನೆಗೆ ಇವರು ಕೂಡ ಅವರ ಜೊತೆ ಷಾಮೀಲಾಗಿ ಮಾಮೂಲಿ ವಸೂಲಿ ಮಾಡುವ ದಂಧೆಯಾಗಿ ಪರಿವರ್ತಿತ ವಾದ ಮಾತುಗಳು ಕೇಳಿ ಬಂದಿದ್ದವು. ಈಗ ಕಾದು ನೋಡಬೇಕು. (ಹಳೇ ಬಾಟಲಿ ಹಳೇ ಮದ್ಯ) ಯಾರ ಕೈ ಮೇಲಾಗುತ್ತದೆ ಎಂದು.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ಬಿಡದಿ ಟೌನ್‌ಶಿಪ್ ಬೇಕೇ? ಮತ್ತೊಮ್ಮೆ ಯೋಚಿಸಿ

ಮಾನ್ಯರೆ,

ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಡದಿ ಟೌನ್ ಶಿಪ್ ನಿರ್ಮಾಣ ಮಾಡುವ ಮೊದಲು ಮತ್ತೊಮ್ಮೆ ಅದರ ಸಾಧಕ ಬಾಧಕಗಳ ಬಗ್ಗೆ ಯೋಚಿಸಿ ಮುಂದುವರೆಯುವುದು ಒಳ್ಳೆಯದು. ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಡಿನೋಟಿಫಿಕೇಷನ್ ಮಾಡಿದರು. ಮುಂದುವರೆದು ಮಾಜಿ ಮುಖ್ಯಮಂತಿ ಬಿ.ಎಸ್.ಯಡಿಯೂರಪ್ಪ ಅವರು ಅದನ್ನು ಮುಂದುವರೆಸಿದರು. ನಾನು ಈಗ ಅದನ್ನು ಮುಂದುವರೆಸಿ (ಬಹುಪಾಲು ರೈತರ ವಿರೋಧವಿದ್ದರೂ)ಬಿಡದಿ ಟೌನ್ ಶಿಪ್ ಮಾಡುತ್ತೇನೆ ಎಂದು ಹೇಳಿರುವುದು ರೈತರನ್ನು ವಿಚಲಿತಗೊಳಿಸಿದೆ.

ಬಿಡದಿ ಸುತ್ತಮುತ್ತ ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತಾದ ಭೂಮಿ ಇರುವುದರಿಂದ ರೈತರ ಜೀವನೋಪಾಯಕ್ಕೆ ಹೇಳಿಮಾಡಿಸಿದ ಹಾಗೆ ಇದೆ. ಇದು ದೈವ ಸಂಕಲ್ಪವೇ ಸರಿ. ಸರ್ಕಾರ ಇಲ್ಲಿ ಒಂದು ಎಕರೆ ಜಮೀನಿಗೆ 2 ಕೋಟಿ 40 ಲಕ್ಷ ರೂಪಾಯಿ ಮತ್ತು ಒಂದು ಗುಂಟೆ ಜಮೀನು ಇರುವ ಮಾಲೀಕರಿಗೆ 5 ಲಕ್ಷ ರೂಪಾಯಿ ಪರಿಹಾರ ನೀಡಿದ ನಂತರ ಬಂದ ಹಣ ರೈತರ ಬಳಿ ಎಷ್ಟು ದಿನ ಉಳಿದೀತು? ಜಮೀನು ಕಳೆದುಕೊಂಡ ರೈತರ ಪಾಡೇನು ಅವರು ಜೀವನ ನಡೆಸಲು ಮುಂದೆ ಏನು ಮಾಡಬೇಕು ಎಂಬುದು ಯಕ್ಷಪ್ರಶ್ನೆಯಾಗಿದೆ. ಇನ್ನೂ ಕಾಲ ಮಿಂಚಿಲ್ಲ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸರ್ವಪಕ್ಷಗಳ, ರೈತ ಪ್ರತಿನಿಧಿಗಳ, ಪರಿಸರ ತಜ್ಞರುಗಳ, ಸಾಮಾನ್ಯ ಜನನಾಯಕರ ಸಭೆ ಕರೆದು ಚರ್ಚಿಸಿ ನಂತರ ಒಮ್ಮತದ ತೀರ್ಮಾನಕ್ಕೆ ಬರುವುದು ಎಲ್ಲಾ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಸಿಎಂ ಡಿಕೆಶಿ ಅವರಿಗೆ ಅಭಿನಂದನೆಗಳು

ಮಾನ್ಯರೆ,

'ಮೊಬೈಲು ಬಿಡಿ ಪುಸ್ತಕ ಹಿಡಿ' ಈ ಮಾತು ಮೊಬೈಲು ಅತೀ ಬಳಕೆ ಹಿನ್ನೆಲೆಯಲ್ಲಿ ಎಲ್ಲರ ಕೂಗಾಗಿದೆ. ಪ್ರತಿ ಮನೆಯೂ ಪುಸ್ತಕ ಮನೆಗಳಾಗಬೇಕು. ಮಕ್ಕಳ ಕೈಲಿ ಮೊಬೈಲು ಬದಲು ಪುಸ್ತಕಗಳಿರಲಿ ಅನ್ನುವ ಕೂಗು ಬಹುಶಃ ನಮ್ಮ ಸರ್ಕಾರದ ಕಣ್ತೆರೆಸಿದೆ. ಪುಸ್ತಕ ಪ್ರೇಮಿ ಪದ್ಮಶ್ರೀ ಅಂಕೇಗೌಡರ ಸಂಗ್ರಹದ 20 ಲಕ್ಷ ಪುಸ್ತಕಗಳ ಸಂರಕ್ಷಣೆಗೆ ಸಾರ್ವಜನಿಕ ಬಳಕೆಗೆ ಸುಸಜ್ಜಿತ ಕಟ್ಟಡ ನಿರ್ಮಿಸಲು ಸಹಾಯಧನ ನೀಡಿದ ಸಿಎಂ ಡಿಕೆಶಿ ಅವರಿಗೆ ಕೋಟಿ ನಮನಗಳು. ಭಟ್ಟಂಗಿತನ, ಉತ್ಪ್ರೇಕ್ಷೆ ಖಂಡಿತ ಅಲ್ಲ. ಪ್ರತಿ ಮನೆ ಮನೆಯಲ್ಲೂ ಪುಸ್ತಕ ಗ್ರಂಥಾಲಯ ಇರುವ ಒಂದು ಗ್ಯಾರಂಟಿ ಯೋಜನೆಯನ್ನೂ ರೂಪಿಸಲು ದಿಟ್ಟ ನಿರ್ಧಾರ ತೆಗೆದುಕೊಂಡಿದ್ದೇ ಆದರೆ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ ಭೋಜರಾಜರೇ ತಾವಾಗುತ್ತೀರಿ !

–ಜಿ.ಹೆಚ್.ಸಂಕಪ್ಪ, ಮೈಸೂರು.

ಹೆಚ್ಚು ಸದ್ದು ಮಾಡುತ್ತಿರುವ ಜಿರಲೆಗಳು!

ಮಾನ್ಯರೆ,

ಜಿರಲೆ ಜನತಾ ಪಕ್ಷ (ಸಿಜೆಪಿ) ದಿನೇ ದಿನೆ ದೇಶಾದ್ಯಂತ ಹೆಚ್ಚು ಸದ್ದು ಮಾಡುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಪ್ರಮುಖ ರಾಜಕೀಯ ಪಕ್ಷಗಳ ಅತೃಪ್ತ ನಾಯಕರು, ಸಿಜೆಪಿಯತ್ತ ಒಲವು ತೋರಿಸುತ್ತಿದ್ದಾರೆ. ಇತ್ತೀಚೆಗೆ ಪರಿಸರ ಹೋರಾಟಗಾರ ಸೋನಮ್ ವ್ಯಾಂಗ್ ಚುಕ್ ರವರು ಸಿಜೆಪಿಯು ನೀಟ್ ಪರೀಕ್ಷೆಯಲ್ಲಿ ನಡೆದ ಅವ್ಯವಹಾರಗಳ ನೈತಿಕ ಹೊಣೆಗಾರಿಕೆ ಹೊತ್ತು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ನವದೆಹಲಿಯ ಜಂತರ್ ಮಂಥರ್ ನಲ್ಲಿ ನಡೆಸುತ್ತಿರುವ ಉಪವಾಸ ಸತ್ಯಾಗ್ರಹದಲ್ಲಿ ಸ್ವತಃ ಭಾಗಿಯಾಗುವ ಮೂಲಕ ಜಿರಲೆಗಳಿಗೆ ಶಕ್ತಿ ತುಂಬಿದ್ದಾರೆ. ಈ ಹಿನ್ನಲೆಯಲ್ಲಿ ಜಿರಲೆ ಜನತಾ ಪಕ್ಷ ಮುಂದಿನ ದಿನಗಳಲ್ಲಿ ಒಂದು ಪ್ರಬಲ ಶಕ್ತಿಯಾಗಿ ರೂಪುಗೊಳ್ಳುವ ಸಾಧ್ಯತೆಗಳಿವೆ. ಹೀಗಾಗಿ ಅಯ್ಯೋ ಜಿರಲೆ ತಾನೇ ಎಂದು ಹೀಗಳೆಯದೇ ಅದನ್ನು ಗಂಭೀರವಾಗಿ ಆಡಳಿತಾರೂಢ ಪಕ್ಷಗಳು ಪರಿಗಣಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ದುಡ್ಡು, ಬ್ಲಡ್‌ಗಿಂತ ದೊಡ್ಡದಾ!?



❝ ನಮ್ಮ ದೇಹದಲ್ಲಿ ಸುಮಾರು 5 ಲೀಟರ್ ರಕ್ತ ಇರುತ್ತದೆ. ಅದು ನದಿ ಇದ್ದಂತೆ. ದಿನದ 24 ಗಂಟೆಯೂ ಹರಿಯುತ್ತಿರುತ್ತದೆ. ಹೃದಯದಿಂದ ಕಾಲ್ಬೆರಳವರೆಗೆ, ಮೆದುಳಿನಿಂದ ಚರ್ಮದವರೆಗೆ ಆಕ್ಸಿಜನ್, ಪೋಷಕಾಂಶ ಹೊತ್ತು ತಿರುಗುತ್ತದೆ. ಈ ನದಿ ಹರಿಯುವುದು ನಿಂತರೆ ಜೀವನ ನಿಂತಂತೆ. ಈಗ ಯೋಚಿಸಿ, ಈ ನದಿಯನ್ನು ನಾವು ಬೇರೆಯವರ ಹೊಲಕ್ಕೆ ಹರಿಸಬಹುದಾ? ಹೌದು. ಅದಕ್ಕೆ ಹೆಸರೇ 'ರಕ್ತದಾನ'.



ಉಮೇಶ್ ಬಾಬು ಮಠದ್ (ಉಬಾಮ)

ಕನಕ ಯುವ ಪ್ರಶಸ್ತಿ ಪುರಸ್ಕೃತ ಸಾಹಿತಿ ಹಾಗೂ ಸಾಮಾಜಿಕ ಚಿಂತಕರು– 9606363449

ರಾತ್ರಿ 2 ಗಂಟೆ, ಮಂಜುನಾಥನ ಮೊಬೈಲ್ ರಿಂಗಾಯಿತು. ಅಪರಿಚಿತ ನಂಬರ್. ನಿದ್ದೆಗಣ್ಣಲ್ಲೇ ಕರೆ ಸ್ವೀಕರಿಸಿದರು.

'ಹಲೋ ಸರ್, ನಾನು ವಿನಯ್. ನಿಮ್ಮ ನಂಬರ್ ಬ್ಲಡ್ ಗ್ರೂಪ್ ಲಿಸ್ಟ್‌ನಲ್ಲಿ ಸಿಕ್ತು. ನನ್ನ ಹೆಂಡತಿಗೆ ಡೆಲಿವರಿ. ಓ ನೆಗೆಟಿವ್ ಬ್ಲಡ್ ಬೇಕು. ತುಂಬಾ ಎಮರ್ಜೆನ್ಸಿ. ಪ್ಲೀಸ್ ಸಹಾಯ ಮಾಡ್ತೀರಾ? ಆ ಕಡೆಯ ಧ್ವನಿ ನಡುಗುತ್ತಿತ್ತು.

ಮಂಜುನಾಥನಿಗೆ ಸಿಟ್ಟು ಬಂತು. ರಾತ್ರಿ 2 ಗಂಟೆಗೆ ಫೋನ್ ಮಾಡ್ತೀರಾ, ನನಗೆ ನಾಳೆ ಆಫೀಸ್ ಇದೆ. ಬ್ಲಡ್ ಬ್ಯಾಂಕ್‌ಗೆ ಹೋಗಿ. ದುಡ್ಡು ಕೊಟ್ಟರೆ ಸಿಗುತ್ತೆ ಎಂದು ಫೋನ್ ಕಟ್ ಮಾಡಿದ.

3 ಗಂಟೆಗೆ ಮತ್ತೆ ಕಾಲ್. ಈ ಬಾರಿ ಆಸ್ಪತ್ರೆಯಿಂದ. ಸರ್, ವಿನಯ್ ಅವರ ಪತ್ನಿ ಸ್ಥಿತಿ ಗಂಭೀರ. ಬ್ಲಡ್ ಸಿಗದಿದ್ದರೆ...

ಮಂಜುನಾಥ ಎದ್ದ. ಕಾರ್ ತೆಗೆದು ಆಸ್ಪತ್ರೆಗೆ ಹೋದ. ಬ್ಲಡ್ ಕೊಟ್ಟ. 1 ಗಂಟೆಯಲ್ಲಿ ಮಗು ಹುಟ್ಟಿತು. ತಾಯಿ–ಮಗು ಸೇಫ್.

ವಿನಯ್ ಕಣ್ಣಲ್ಲಿ ನೀರು ತುಂಬಿ ಮಂಜುನಾಥನ ಕೈ ಹಿಡಿದ. ಎಷ್ಟು ದುಡ್ಡು ಬೇಕು ಸರ್? ನಾನು ಕೊಡ್ತೀನಿ.

ಮಂಜುನಾಥನಿಗೆ ಮಾತೇ ಬರಲಿಲ್ಲ. ಜೇಬಿನಲ್ಲಿ 10 ಲಕ್ಷದ ಕ್ರೆಡಿಟ್ ಕಾರ್ಡ್ ಇತ್ತು. ಬ್ಯಾಂಕ್‌ನಲ್ಲಿ ಲಕ್ಷ ಲಕ್ಷ ಇತ್ತು. ಆದರೆ ಅರ್ಧ ಗಂಟೆ ಮೊದಲು ಆ ತಾಯಿಯ ಜೀವ ಉಳಿಸಿದ್ದು ದುಡ್ಡು ಅಲ್ಲ. ಅವನ ದೇಹದಲ್ಲಿದ್ದ 350ml ಬ್ಲಡ್.

ಆ ರಾತ್ರಿ ಮಂಜುನಾಥನಿಗೆ ಅರ್ಥವಾಯಿತು, ಕ್ರೆಡಿಟ್ ಕಾರ್ಡ್‌ನಲ್ಲಿ ಹಣ ಇದ್ದರೂ, ಆಪರೇಷನ್ ಥಿಯೇಟರ್ ಮುಂದೆ ಅದು ಬರೀ ಕಾಗದ. ಆದರೆ ನಿನ್ನ ದೇಹದಲ್ಲಿ ಹರಿಯುವ ಕೆಂಪು ದ್ರವಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ.

ದುಡ್ಡು: ಬದುಕಿನ ಗಾಡಿಗೆ ಇಂಧನ

ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ. ದುಡ್ಡು ಬೇಕು. ಹೊಟ್ಟೆ ತುಂಬಾ ಊಟಕ್ಕೆ, ಮಕ್ಕಳ ಸ್ಕೂಲ್ ಫೀಸ್‌ಗೆ, ತಲೆ ಮೇಲೆ ಸೂರಿಗೆ, ಆಸ್ಪತ್ರೆ ಬಿಲ್ ಕಟ್ಟಲು, ಮದುವೆ–ಮುಂಜಿ, ಸಾವು ಎಲ್ಲದಕ್ಕೂ ದುಡ್ಡು ಬೇಕು.

ಹಿರಿಯರು ಹೇಳುತ್ತಾರೆ – 'ಹಣ ಇಲ್ಲದವನು ಹೆಣಕ್ಕೆ ಸಮಾನ'. ಇದು ನೂರು ಪರ್ಸೆಂಟ್ ಸತ್ಯ. ಕೈಯಲ್ಲಿ ಕಾಸಿಲ್ಲದಿದ್ದರೆ ಆತ್ಮಗೌರವ ಉಳಿಯುವುದಿಲ್ಲ. ಸಾಲಗಾರ ಬಾಗಿಲಿಗೆ ಬಂದರೆ ಮಾನ ಹೋಗುತ್ತದೆ. ಮಕ್ಕಳ ಬಯಕೆ ಈಡೇರಿಸಲು ಆಗದಿದ್ದರೆ ತಂದೆಯ ಕಣ್ಣಲ್ಲಿ ನೀರು ಬರುತ್ತದೆ.

ಹಾಗಾಗಿ ದುಡ್ಡು ಸಂಪಾದಿಸಬೇಕು. ಅದಕ್ಕಾಗಿ ಕಷ್ಟಪಟ್ಟು ದುಡಿಯಬೇಕು, ಬೆವರು ಸುರಿಸಬೇಕು. 'ದುಡಿಮೆಯೇ ದೊಡ್ಡಪ್ಪ' ಎಂದು ನಮ್ಮ ಹಿರಿಯರು ಸುಮ್ಮನೆ ಹೇಳಿಲ್ಲ. ದುಡ್ಡು ಇದ್ದರೆ ಸಮಾಜದಲ್ಲಿ ಗೌರವ. ಮಾತಿಗೆ ಬೆಲೆ. ಸಂಬಂಧಿಕರು ಹತ್ತಿರ ಬರುತ್ತಾರೆ.

ದುಡ್ಡಿನಿಂದ ಕೊಳ್ಳಲಾಗದ 3 ವಸ್ತು

ಒಬ್ಬ ಶ್ರೀಮಂತ ವ್ಯಾಪಾರಿಗೆ ಹಾರ್ಟ್ ಅಟ್ಯಾಕ್ ಆಯಿತು. ಆಸ್ಪತ್ರೆ ಸೇರಿದ. ಡಾಕ್ಟರ್ ಹೇಳಿದರು, ತಕ್ಷಣ ಬೈಪಾಸ್ ಸರ್ಜರಿ ಆಗಬೇಕು. ಆದರೆ ನಿಮದು ಅಪರೂಪದ ೦ ನೆಗೆಟಿವ್ ಬ್ಲಡ್. ನಮ್ಮ ಬ್ಲಡ್ ಬ್ಯಾಂಕ್‌ನಲ್ಲಿ ಸ್ಟಾಕ್ ಇಲ್ಲ. 4 ಯೂನಿಟ್ ಬೇಕು.

ವ್ಯಾಪಾರಿ ಜೇಬಿನಿಂದ ಚೆಕ್ ಬುಕ್ ತೆಗೆದ. ಡಾಕ್ಟ್ರೇ, ಒಂದು ಯೂನಿಟ್‌ಗೆ 1 ಲಕ್ಷ ಕೊಡ್ತೀನಿ. 10 ಲಕ್ಷ ಬೇಕಾದರೆ ಕೊಡ್ತೀನಿ. ಬ್ಲಡ್ ತರಿಸಿ.

ಡಾಕ್ಟರ್ ತಲೆ ಅಲ್ಲಾಡಿಸಿದರು. ಸರ್, ಬ್ಲಡ್ ಫ್ಯಾಕ್ಟರಿ ಯಲ್ಲಿ ತಯಾರು ಮಾಡೋ ವಸ್ತು ಅಲ್ಲ. ಅದು ಮನುಷ್ಯನ ದೇಹದಲ್ಲಿ ಮಾತ್ರ ಸಿಗೋದು. ಯಾರಾ ದರೂ ಬಂದು ಕೊಡಬೇಕು ಇಷ್ಟೇ ಅಂದರು.

ಆ ಶ್ರೀಮಂತನಿಗೆ ಆ ಕ್ಷಣ ಅರ್ಥವಾಯಿತು, ಅವನ ಬಂಗಲೆ, ಕಾರು, ಫ್ಯಾಕ್ಟರಿ, ಬ್ಯಾಂಕ್ ಬ್ಯಾಲೆನ್ಸ್ – ಎಲ್ಲವೂ ಆಸ್ಪತ್ರೆಯ ಹೊರಗೆ ನಿಂತಿವೆ. ಒಳಗೆ ಅವನ ಜೀವ ಉಳಿಸಬಹುದಾದದ್ದು ಒಬ್ಬ ಕುಲ ಗೋತ್ರ ತಿಳಿಯದ ಅಪರಿಚಿತನ ಎರಡು ತೊಟ್ಟು ರಕ್ತ.

ಕೊನೆಗೆ ಅವನ ಕಂಪನಿಯ ವಾಚ್‌ಮ್ಯಾನ್‌ನ ಮಗ ಬಂದು ಬ್ಲಡ್ ಕೊಟ್ಟ. ಅದೇ ೦ ನೆಗೆಟಿವ್. ವ್ಯಾಪಾರಿ ಬದುಕಿ ಉಳಿದ. ಡಿಸ್ಚಾರ್ಜ್ ಆಗುವಾಗ ಆ ಹುಡುಗನಿಗೆ ಚೆಕ್ ಕೊಡಲು ಹೋದ. ಹುಡುಗ ನಕ್ಕು ಹೇಳಿದ–ಸರ್, ನನ್ನ ರಕ್ತಕ್ಕೆ ಬೆಲೆ ಕಟ್ಟಬೇಡಿ.

ದುಡ್ಡಿನಿಂದ ಕೊಳ್ಳಲಾಗದ ಮೂರು ವಸ್ತುಗಳು:

1. ಸಮಯ: ಕಳೆದು ಹೋದ ಒಂದು ಸೆಕೆಂಡ್ ಕೊಳ್ಳಲು ಆಗಲ್ಲ.

2. ಜೀವ: ಉಸಿರು ನಿಂತ ಮೇಲೆ ಕೋಟಿ ಸುರಿದರೂ ಮರಳಿ ಬರಲ್ಲ.

3. ರಕ್ತ: ಇದನ್ನು ಕೃತಕವಾಗಿ ತಯಾರಿಸಲು ಇನ್ನೂ ವಿಜ್ಞಾನಕ್ಕೆ ಸಾಧ್ಯವಾಗಿಲ್ಲ.

ಬ್ಲಡ್: ದೇಹದ ನದಿ, ಜೀವದ ಸೇತುವೆ

ನಮ್ಮ ದೇಹದಲ್ಲಿ ಸುಮಾರು 5 ಲೀಟರ್ ರಕ್ತ ಇರುತ್ತದೆ. ಅದು ನದಿ ಇದ್ದಂತೆ. ದಿನದ 24 ಗಂಟೆಯೂ ಹರಿಯುತ್ತಿರುತ್ತದೆ. ಹೃದಯದಿಂದ ಕಾಲ್ಬೆರಳವರೆಗೆ, ಮೆದುಳಿನಿಂದ ಚರ್ಮದವರೆಗೆ ಆಕ್ಸಿಜನ್, ಪೋಷಕಾಂಶ ಹೊತ್ತು ತಿರುಗುತ್ತದೆ. ಈ ನದಿ ನಿಂತರೆ ಜೀವನ ನಿಂತಂತೆ.

ಈಗ ಯೋಚಿಸಿ, ಈ ನದಿಯನ್ನು ನಾವು ಬೇರೆಯವರ ಹೊಲಕ್ಕೆ ಹರಿಸಬಹುದಾ? ಹೌದು. ಅದರ ಹೆಸರೇ 'ರಕ್ತದಾನ'.

ರಕ್ತದಾನ ಮಾಡಿದರೆ ನಮಗೆ ಏನು ನಷ್ಟ? ವೈದ್ಯರು ಹೇಳುತ್ತಾರೆ 'ಒಬ್ಬ ಆರೋಗ್ಯವಂತ ಮನುಷ್ಯ 3 ತಿಂಗಳಿಗೊಮ್ಮೆ 350 ಎಂಎಲ್ ರಕ್ತದಾನ ಮಾಡಬಹುದು. ದಾನ ಮಾಡಿದ 24 ಗಂಟೆಯಲ್ಲಿ ದೇಹದಲ್ಲಿ ನೀರಿನ ಅಂಶ ತುಂಬಿಕೊಳ್ಳುತ್ತದೆ. 3 ವಾರದಲ್ಲಿ ಹೊಸ ರಕ್ತ ಕಣಗಳು ತಯಾರಾಗುತ್ತವೆ. ಅಂದರೆ ನಾವು ಏನನ್ನೂ ಕಳೆದುಕೊಳ್ಳುವುದಿಲ್ಲ. ಬದಲಾಗಿ ನಮ್ಮ ದೇಹಕ್ಕೆ ಹೊಸ ರಕ್ತ, ಹೊಸ ಚೈತನ್ಯ ಸಿಗುತ್ತದೆ.

ಆದರೆ ನಾವು ಕೊಡುವ ಆ 350 ಎಂಎಲ್ ಯಾರದೋ ಮನೆಯ ದೀಪವಾಗುತ್ತದೆ. ಹೆರಿಗೆ ಸಮಯದಲ್ಲಿ ತಾಯಿ ಬದುಕುತ್ತಾಳೆ. ಆಕ್ಸಿಡೆಂಟ್ ಆದ ಹುಡುಗನಿಗೆ ಮತ್ತೆ ನಡೆಯುವ ಶಕ್ತಿ ಬರುತ್ತದೆ. ಥಲಸ್ಸೆಮಿಯಾ ಕಾಯಿಲೆಯ ಮಗುವಿಗೆ ಇನ್ನೊಂದು ತಿಂಗಳು ನಗಲು ಅವಕಾಶ ಸಿಗುತ್ತದೆ.

ದುಡ್ಡು ದಾನ ಮಾಡಿದರೆ 'ಪುಣ್ಯ' ಸಿಗುತ್ತದೆ ಅಂತಾರೆ. ರಕ್ತದಾನ ಮಾಡಿದರೆ 'ಜೀವ' ಸಿಗುತ್ತದೆ. ಯಾವುದು ದೊಡ್ಡದು ನೀವೇ ಹೇಳಿ.

'ಬ್ಲಡ್ ಬೇಕು' ಬೋರ್ಡ್‌ನ ಹಿಂದಿನ ಕಣ್ಣೀರು

ಯಾವುದಾದರೂ ದೊಡ್ಡ ಆಸ್ಪತ್ರೆಯ ಮುಂದೆ ನಿಂತು ನೋಡಿ. ಗೇಟ್ ಬಳಿ 'ಒಬ್ಬ ತಂದೆ 0+ ಬ್ಲಡ್ ಬೇಕು, ಇನ್ನೊಬ್ಬ ಅಣ್ಣ ೦– ಬ್ಲಡ್ ಅರ್ಜೆಂಟ್' ಎಂದು ಬೋರ್ಡ್ ಹಿಡಿದು ನಿಂತಿರುತ್ತಾನೆ. ಅವನ ಕೈಯ್ಯಲ್ಲಿ ಲಕ್ಷ ದುಡ್ಡಿರಬಹುದು. ಆದರೆ ಅವನ ಕಣ್ಣಲ್ಲಿ ಇರುವುದು ಅಸಹಾಯಕತೆ.

ಯಾಕೆ? ಏಕೆಂದರೆ ರಕ್ತಕ್ಕೆ 'ಅಮೆಜಾನ್ ಡೆಲಿವರಿ' ಇಲ್ಲ. 'ಸ್ವಿಗ್ಗಿ'ಯಲ್ಲಿ ಆರ್ಡರ್ ಮಾಡಲು ಆಗಲ್ಲ. ಅದು 'ಮನುಷ್ಯರಿಂದ ಮನುಷ್ಯರಿಗೆ' ನೇರವಾಗಿ ಸಿಗಬೇಕಾದ ಬಳುವಳಿ.

ಕೋವಿಡ್ ಸಮಯದಲ್ಲಿ ನಾವೆಲ್ಲ ನೋಡಿದ್ದೇವೆ. ಪ್ಲಾಸ್ಮಾ ಬೇಕು ಎಂದು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕಿದರೆ, ಅಪರಿಚಿತರು ಕಾರು ಹತ್ತಿ 100 ಕಿಲೋಮೀಟರ್ ಡ್ರೈವ್ ಮಾಡಿಕೊಂಡು ಬಂದು ಕೊಟ್ಟಿದ್ದಾರೆ. ದುಡ್ಡಿಗಾ? ಇಲ್ಲ. 'ನಾಳೆ ನನ್ನ ಮನೆಗೂ ಬರಬಹುದು' ಎಂಬ ಮಾನವೀಯತೆ.

ಆದರೆ ಈಗ? ಕೋವಿಡ್ ಮುಗಿದಿದೆ. ಮತ್ತೆ ನಾವು 'ನನಗೇಕೆ?' ಎಂದು ಸುಮ್ಮನಾಗಿದ್ದೇವೆ. ವಾಟ್ಸಾಪ್‌ನಲ್ಲಿ 'ಬ್ಲಡ್ ಬೇಕು' ಮೆಸೇಜ್ ಬಂದರೆ ಫಾರ್ವರ್ಡ್ ಮಾಡಿ ಸುಮ್ಮನಾಗುತ್ತೇವೆ. 'ಆಮೇಲೆ ನೋಡೋಣ', 'ಸಮಯ ಇಲ್ಲ' ಅಂತ ಕಾರಣ ಹೇಳುತ್ತೇವೆ.

ನೆನಪಿಡಿ – ಇವತ್ತು ನೀವು ಫಾರ್ವರ್ಡ್ ಮಾಡಿದ ಮೆಸೇಜ್, ನಾಳೆ ನಿಮ್ಮ ಮನೆಯ ಬಾಗಿಲು ತಟ್ಟಬಹುದು. ಆಗ ದುಡ್ಡು ಇದ್ದರೂ, ದಾನ ಮಾಡುವವರು ಇಲ್ಲದಿದ್ದರೆ ಏನು ಮಾಡ್ತೀರಿ?

ದುಡ್ಡು ಮತ್ತು ಬ್ಲಡ್: ಜಗಳ ಅಲ್ಲ, ಜೊತೆಯಾಟ

ನಾನು 'ದುಡ್ಡು ಬೇಡ, ಬ್ಲಡ್ ಮಾತ್ರ ಸಾಕು' ಎಂದು ಹೇಳುತ್ತಿಲ್ಲ. ಎರಡೂ ಬೇಕು.

ದುಡ್ಡು ಇಲ್ಲದಿದ್ದರೆ ಆಸ್ಪತ್ರೆ ಸೇರಲೂ, ಆಪರೇಷನ್ ಮಾಡಿಸಲು, ಔಷಧಿ ತೆಗೆದುಕೊಳ್ಳಲು ಆಗುವುದಿಲ್ಲ. ಹಾಗಾಗಿ ದುಡ್ಡು ಸಂಪಾದಿಸಿ, ಉಳಿಸಿ. ಇನ್ಶೂರೆನ್ಸ್ ಮಾಡಿಸಿ. ಅದು ನಿಮ್ಮ ಕುಟುಂಬದ ಸುರಕ್ಷತೆ.

ಆದರೆ, ದುಡ್ಡು ಮಾತ್ರ ಇದ್ದರೆ ಸಾಲದು. ನಿಮ್ಮ ದುಡ್ಡು ಇನ್ನೊಬ್ಬರ ಜೀವ ಉಳಿಸಬೇಕಾದರೆ, ಆಸ್ಪತ್ರೆಯಲ್ಲಿ 'ರಕ್ತ' ಇರಬೇಕು. ಆ ರಕ್ತ ಬರುವುದು ನನ್ನ–ನಿಮ್ಮಂತಹ ಸಾಮಾನ್ಯ ಜನರಿಂದ. ನಾವು ಕೊಡದಿದ್ದರೆ ಬ್ಲಡ್ ಬ್ಯಾಂಕ್ ಖಾಲಿ. ಬ್ಲಡ್ ಬ್ಯಾಂಕ್ ಖಾಲಿ ಇದ್ದರೆ ನಿಮ್ಮ ಕೋಟಿ ದುಡ್ಡು ಇದ್ದರೂ ವೈದ್ಯರು ಕೈ ಚೆಲ್ಲುತ್ತಾರೆ.

ಹಾಗಾಗಿ ದುಡ್ಡು 'ಸಂಪಾದಿಸಿ', ಬ್ಲಡ್ 'ದಾನ' ಮಾಡಿ. ದುಡ್ಡು ನಿಮ್ಮ 'ಬದುಕಿಗೆ' ಬೇಕು. ಬ್ಲಡ್ ಬೇರೆಯವರ 'ಬದುಕು ಉಳಿಸಲು' ಬೇಕು.

ಕೊನೆಯ ಪ್ರಶ್ನೆ: ನಿಮ್ಮ ನೆತ್ತರಿನ ಬೆಲೆ ಎಷ್ಟು?

ಒಬ್ಬ ಯುವಕ ರಕ್ತದಾನ ಶಿಬಿರಕ್ಕೆ ಬಂದ. 20 ವರ್ಷ. ಫಾರ್ಮ್ ತುಂಬುವಾಗ ಕೇಳಿದ 'ಸರ್, ಬ್ಲಡ್ ಕೊಟ್ಟರೆ ಎಷ್ಟು ದುಡ್ಡು ಕೊಡ್ತೀರಿ?'

ಸ್ವಯಂಸೇವಕ ನಕ್ಕರು. 'ತಮ್ಮಾ, ನಿನ್ನ ರಕ್ತಕ್ಕೆ ನಾವು ಬೆಲೆ ಕಟ್ಟಿದರೆ, ಅದು 'ಮಾರಾಟ' ಆಗುತ್ತದೆ. 'ದಾನ' ಅಲ್ಲ. ಒಂದು ಯೂನಿಟ್ ರಕ್ತಕ್ಕೆ ಸರ್ಕಾರ 1100 ರೂಪಾಯಿ ಖರ್ಚು ಮಾಡುತ್ತದೆ – ಬ್ಯಾಗ್, ಟೆಸ್ಟಿಂಗ್, ಸ್ಟೋರೇಜ್‌ಗೆ. ಆದರೆ ರಕ್ತ ಕೊಡುವ ನಿನಗೆ ನಾವು ದುಡ್ಡು ಕೊಡಲ್ಲ. ಯಾಕೆ ಗೊತ್ತಾ?"

'ಯಾಕೆ ಸರ್?'

ಏಕೆಂದರೆ ನಿನ್ನ 350ಎಂಎಲ್ ರಕ್ತದಿಂದ 3 ಜೀವ ಉಳಿಯಬಹುದು. ಒಂದು ತಾಯಿ, ಒಂದು ಮಗು, ಒಂದು ಅಪಘಾತದ ಕೇಸ್. ಈಗ ಹೇಳು, 3 ಜೀವದ ಬೆಲೆ ಎಷ್ಟು? 1100 ರೂಪಾಯಿಯಾ? 1 ಲಕ್ಷವಾ? 1 ಕೋಟಿಯಾ? ಅದಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಹಾಗಾಗಿ ಅದು 'ಅಮೂಲ್ಯ'. ಅಮೂಲ್ಯವಾದ ವಸ್ತುವನ್ನು 'ದಾನ' ಮಾತ್ರ ಮಾಡಬಹುದು, 'ಮಾರಾಟ' ಮಾಡಬಾರದು.'

ಹುಡುಗನ ಕಣ್ಣು ತೆರೆದುಕೊಂಡಿತು. ಸುಮ್ಮನೆ ರಕ್ತದಾನ ಮಾಡಿದ. ಹೋಗುವಾಗ ಹೇಳಿದ, ಸರ್, ಇವತ್ತಿನಿಂದ ನಾನು 'ದುಡ್ಡು' ಮಾತ್ರ ಸಂಪಾದಿಸಲ್ಲ. 'ಪುಣ್ಯ'ನೂ ಸಂಪಾದಿಸ್ತೀನಿ.

ಗೆಳೆಯರೇ, ನಿಮ್ಮ ಬೈಕ್‌ಗೆ ಪೆಟ್ರೋಲ್ ಹಾಕಿಸಲು ದುಡ್ಡು ಬೇಕು. ಆದರೆ ನಿಮ್ಮ ದೇಹದ ಪೆಟ್ರೋಲ್ ಆದ ರಕ್ತವನ್ನು ಬೇರೆಯವರ ವಾಹನಕ್ಕೆ ಹಾಕಲು ದುಡ್ಡು ಬೇಕಾಗಿಲ್ಲ. ಬೇಕಾಗಿರುವುದು 15 ನಿಮಿಷ ಸಮಯ ಮತ್ತು ನಾನು ಕೊಡುತ್ತೇನೆ ಎಂಬ ಮನಸ್ಸು.

ಕೊನೆಯ ಮಾತು: ಎರಡು ಬ್ಯಾಂಕ್ ಖಾತೆ ಇರಲಿ

ಇಂದಿನಿಂದ ನಿಮ್ಮ ಜೀವನದಲ್ಲಿ ಎರಡು ಬ್ಯಾಂಕ್ ಖಾತೆ ಇಟ್ಟುಕೊಳ್ಳಿ.

1. ಮನಿ ಬ್ಯಾಂಕ್: ಸಂಪಾದಿಸಿ, ಉಳಿಸಿ, ಹೂಡಿಕೆ ಮಾಡಿ. ನಿಮ್ಮ ಕುಟುಂಬದ ಭವಿಷ್ಯಕ್ಕೆ.

2. ಬ್ಲಡ್ ಬ್ಯಾಂಕ್: 3 ತಿಂಗಳಿಗೊಮ್ಮೆ 350 ಎಂಎಲ್ 'ಡೆಪಾಸಿಟ್' ಮಾಡಿ. ಬೇರೆಯವರ ಭವಿಷ್ಯಕ್ಕೆ.

ಮನಿ ಬ್ಯಾಂಕ್‌ನ ಬ್ಯಾಲೆನ್ಸ್ ನಿಮ್ಮ ಮೊಬೈಲ್‌ನಲ್ಲಿ ಕಾಣಿಸುತ್ತದೆ. ಬ್ಲಡ್ ಬ್ಯಾಂಕ್‌ನ ಬ್ಯಾಲೆನ್ಸ್ ದೇವರ ಬಳಿ ಇರುತ್ತದೆ. ಸಾವಿನ ನಂತರ ಮನಿ ಬ್ಯಾಂಕ್ ಇಲ್ಲಿಗೇ ಉಳಿಯುತ್ತದೆ. ಬ್ಲಡ್ ಬ್ಯಾಂಕ್‌ನ ಪುಣ್ಯ ನಿಮ್ಮ ಜೊತೆ ಬರುತ್ತದೆ.

ಹಾಗಾಗಿ ನಿಮ್ಮನ್ನ ಕೇಳಿ ಕೊಳ್ಳಿ ಬದುಕಿಗೆ ಬೇಕಾಗಿದ್ದು ದುಡ್ಡಾ? ಬ್ಲಡ್ಡಾ!?

ಉತ್ತರ: ಬದುಕಲು ದುಡ್ಡು ಬೇಕು. ಬದುಕಿಸಲು ಬ್ಲಡ್ ಬೇಕು.

ನೀವು ಬದುಕಬೇಕು ಅಂದರೆ ದುಡಿಯಿರಿ. ಬೇರೆಯವರು ಬದುಕಬೇಕು ಅಂದರೆ ರಕ್ತದಾನ ಮಾಡಿ. ಏಕೆಂದರೆ ದುಡ್ಡು ನಿಮ್ಮ ಕೈಯ್ಯಲ್ಲಿರ ಬಹುದು, ಆದರೆ ಜೀವ ಬೇರೆಯವರ ಕೈಯ್ಯಲ್ಲಿರುತ್ತದೆ.

ಉಬಾಮನ ಲಾಸ್ಟ್ ಲೈನ್ಸ್ : ನಾಳೆ ಬೆಳಿಗ್ಗೆ ಪೇಪರ್ ನೋಡಿ. 'ರಕ್ತದಾನ ಶಿಬಿರ' ಎಲ್ಲಿ ಇದೆ ಅಂತ ಹುಡುಕಿ. ಹೋಗಿ. 15 ನಿಮಿಷ ಕೊಡಿ. ಬರುವಾಗ ನಿಮ್ಮ ಎದೆಯ ಮೇಲೆ ಒಂದು ಸ್ಟಿಕ್ಕರ್ ಇರುತ್ತದೆ, ನಾನು ಹೀರೋ, ಆ ಸ್ಟಿಕ್ಕರ್‌ಗೆ ಬೆಲೆ ಕಟ್ಟಲು ಯಾವ ATMಗೂ ಆಗಲ್ಲ!

ಮೈಸೂರು ಪಾಲಿಕೆಯು ಸ್ವಚ್ಛತಾ ಕಾರ್ಯಕ್ಕೆ 3.63 ಕೋಟಿ ವೆಚ್ಚದ ಪರಿಕರ ಖರೀದಿ



3.63 ಕೋಟಿ ವೆಚ್ಚದಲ್ಲಿ ಸ್ವಚ್ಛತಾ ವಾಹನ ಸೇರಿದಂತೆ ಇತರೆ ಪರಿಕರಗಳನ್ನು ಸ್ವಚ್ಛತಾ ಸೇವೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹಾಗೂ ಕರ್ನಾಟಕ ರಾಜ್ಯ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ನೇತೃತ್ವದಲ್ಲಿ ಇತರರು ಬುಧವಾರ ಲೋಕಾರ್ಪಣೆಗೊಳಿಸಿದರು.

ಮೈಸೂರು, ಜು.1(ಎಸ್‌ಪಿಎನ್)– ಮೈಸೂರು ನಗರ ಪಾಲಿಕೆ ಆವರಣದಲ್ಲಿ ಬರೋಬ್ಬರಿ 3.63 ಕೋಟಿ ವೆಚ್ಚದಲ್ಲಿ ಸ್ವಚ್ಛತಾ ವಾಹನ ಸೇರಿದಂತೆ ಇತರೆ ಪರಿಕರಗಳನ್ನು ಸ್ವಚ್ಛತಾ ಸೇವೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಬುಧವಾರ ಲೋಕಾರ್ಪಣೆಗೊಳಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮೈಸೂರು ನಗರ ಪಾಲಿಕೆ ಆಡಳಿತಾಧಿಕಾರಿ ನಿತೇಶ್ ಪಾಟೀಲ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಉಪ ಆಯುಕ್ತ(ಆಡಳಿತ) ದಾಸೇಗೌಡ, ಉಪ ಆಯುಕ್ತ (ಕಂದಾಯ) ಸೋಮಶೇಖರ್ ಜಿಣಗಿ, ಸ್ವಚ್ಛತಾ ನೋಡಲ್ ಅಧಿಕಾರಿ ಕೆ.ಎಸ್.ಮೃತ್ಯುಂಜಯ ಉಪಸ್ಥಿತರಿದ್ದರು.

3.63 ಕೋಟಿ ಅನುದಾನದಲ್ಲಿ ಖರೀದಿ: ಮೈಸೂರು ನಗರ ಪಾಲಿಕೆಯು 2.83 ಕೋಟಿ, ಎಸ್‌ಬಿಐ ಬ್ಯಾಂಕ್‌ನ ಸಿಎಸ್‌ಆರ್ ಅನುದಾನದಡಿ 85 ಲಕ್ಷ ರೂ. ಒಟ್ಟು 3.63 ಕೋಟಿ ರೂ. ವೆಚ್ಚದಲ್ಲಿ ಸ್ವಚ್ಛತಾ ವಾಹನ ಹಾಗೂ ಇತರೆ ಯಂತ್ರೋಪಕರಣಗಳನ್ನು ಖರೀದಿ ಮಾಡಲಾಗಿದೆ.

ಮಳೆ ನೀರು ಕಾಲುವೆಗಳ ಸ್ವಚ್ಛತೆ ಮತ್ತು ಹೂಳೆತ್ತುವ ಕಾಮಗಾರಿಗಳಿಗಾಗಿ 93.81 ಲಕ್ಷ ರೂ.ಗಳಿಗೆ ಮೂರು ಎಸ್ಕಲೇಟರ್ ವಾಹನ, ಎಸ್‌ಬಿಐ ಫೌಂಡೇಶನ್ ಸಿಎಸ್‌ಆರ್ ಅನುದಾನದಡಿ 99 ಲಕ್ಷ ರೂ.ಗಳಿಗೆ ರಸ್ತೆ ಸ್ವಚ್ಛತಾ ಯಂತ್ರ ಹಾಗೂ ಕಟ್ಟಡ ತ್ಯಾಜ್ಯ ನಿರ್ವಹಣಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು 70 ಲಕ್ಷ ರೂ.ಗಳಲ್ಲಿ ರಾಕ್ ಬ್ರೇಕರ್ ಬ್ಯಾಕ್ ಹೋ ಲೋಡರ್ ವಾಹನ ಖರೀದಿಸಲಾಗಿದೆ.

ಪೌರಕಾರ್ಮಿಕರಿಗೆ ಆರೋಗ್ಯ ವಿಮೆ: ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣೆ ವ್ಯವಸ್ಥೆಯ ಸುಧಾರಣೆಗಾಗಿ 75 ಲಕ್ಷ ವೆಚ್ಚದಲ್ಲಿ ಪೋರ್ಟಬಲ್ ಕಾಂಪ್ಯಾಕ್ಟರ್ ವಾಹನ ಖರೀದಿಸಲಾಗಿದೆ. ಪೌರಕಾರ್ಮಿಕ ಆರೋಗ್ಯ ಭದ್ರತೆಯನ್ನು ಖಚಿತಪಡಿಸುವ ಉದ್ದೇಶದಿಂದ 2.5 ಲಕ್ಷ ರೂ.ಗಳ ಆರೋಗ್ಯ ವಿಮೆ ಕಾರ್ಡ್, ಸ್ವಚ್ಛತಾ ಕಾರ್ಯಗಳಿಗಾಗಿ ಅವಶ್ಯವಿರುವ ಸುರಕ್ಷತಾ ಪರಿಕರಗಳನ್ನು ಖರೀದಿಸಲಾಗಿದೆ.

ರೈನ್‌ಕೋಟ್ ವಿತರಣೆ: ಸ್ಯೆಂಟ್ ಡಿಎಲ್‌ಎಂ ಹಾಗೂ ಸ್ಯೆಂಟ್ ಫೌಂಡೇಶನ್‌ನ ಸಿಎಸ್‌ಆರ್ ಅನುದಾನದಡಿ 10 ಲಕ್ಷ ರೂ ವೆಚ್ಚದಲ್ಲಿ ಸ್ವಚ್ಛತಾ ಕಾರ್ಮಿಕರಿಗೆ ರೈನ್‌ಕೋಟ್‌ಗಳನ್ನು ಸಾಂಕೇತಿಕವಾಗಿ ವಿತರಿಸಲಾಯಿತು. ಜತೆಗೆ ಖಾಯಂ ಪೌರ ಕಾರ್ಮಿಕರಿಗೆ ವಿಮೆ ಸೌಲಭ್ಯದ ಪ್ರಮಾಣ ಪತ್ರವನ್ನು ನೀಡಲಾಯಿತು.

ಅಂಕಗಳಿಗೀಗ ಮಾನ್ಯತೆ ಇಲ್ಲ; ಈಗೇನಿದ್ದರೂ ವಿಶೇಷ ಜ್ಞಾನಕ್ಕೆ ಮನ್ನಣೆ

ಮೈಸೂರು ವಿವಿ ಕುಲಪತಿ(ಮೌಲ್ಯಮಾಪನ) ಪ್ರೊ.ನಾಗರಾಜು ಅಭಿಮತ



ಪ್ರೊ.ಎನ್.ನಾಗರಾಜು ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಜು.1(ವಿಹೆಚ್)– ಅಂಕಗಳಿಗೆ ಮಾನ್ಯತೆ ನೀಡುತ್ತಿದ್ದ ಕಾಲಘಟ್ಟ ಮರೆಯಾಗಿ ಬಹುಕಾಲವಾಗಿದೆ. ನಿಮ್ಮಲ್ಲಿರುವ ವಿಶೇಷ ಜ್ಞಾನಕ್ಕೆ ಮಾತ್ರ ಇಂದಿನ ದಿನ ಮನ್ನಣೆ ಎಂದು ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್. ನಾಗರಾಜು ಅಭಿಪ್ರಾಯಿಸಿದರು.

ನಗರದ ಮೈಸೂರು ನಗರದ ಜ್ಞಾನಬುತ್ತಿ ಸಂಸ್ಥೆಯಲ್ಲಿ ಕೆ–ಸೆಟ್ ಮತ್ತು ಯುಜಿಸಿ ನೆಟ್ ಪರೀಕ್ಷಾ ಉಚಿತ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಪದವಿಯ ಅಂಕಗಳು ಈಗ ಉದ್ಯೋಗಕ್ಕೆ ಮಾನದಂಡವಾಗಿ ಉಳಿದಿಲ್ಲ. ಬದಲಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹತೆಯಾಗಿದೆ. ಕಠಿಣ ಪರಿಶ್ರಮ ಮತ್ತು ನಿರಂತರ ಪ್ರಯತ್ನದಿಂದ ಅಸಾಧ್ಯವಾದುದನ್ನು ಸಾಧಾರಣ ವಿದ್ಯಾರ್ಥಿಗಳು ಸಾಧಿಸಬಹುದು. ಪರೀಕ್ಷೆಗೆ ಪೂರ್ಣಪ್ರಮಾಣದಲ್ಲಿ ತಯಾರಾಗಬೇಕು. ನಿಗದಿತ ಪಠ್ಯಪುಸ್ತಕಗಳನ್ನು ಪ್ರತಿಸಾಲು ಬಿಡದಂತೆ ಓದಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ನಿಮ್ಮನ್ನು ನೀವು ಉತ್ತೇಜಿಸಿಕೊಂಡು ಪರೀಕ್ಷೆಗಳನ್ನು ಎದುರಿಸಿ ಜೀವನದಲ್ಲಿ ಯಶಸ್ಸು ಗಳಿಸಿ ಎಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಬದುಕೆಂಬುದು ಚೈನಿನ ಸರಪಳಿ ಇದ್ದ ಹಾಗೆ. ಪ್ರತಿ ಕೊಂಡಿಯೂ ಗಟ್ಟಿಯಾಗಿರಬೇಕು. ಕೊಂಡಿಗಳ ನಡುವೆ ಬಿರುಕು ಬಿಟ್ಟಾಗ ಗಟ್ಟಿಯಾದ ಬೆಸುಗೆಗಳನ್ನು ನಿರಂತರವಾಗಿ ಹಾಕುತ್ತಿರಬೇಕು. ನಮ್ಮ ದೌರ್ಬಲ್ಯಗಳನ್ನು ಮೆಟ್ಟಿನಿಂತು; ಆದಮ್ಯ ಆತ್ಮವಿಶ್ವಾಸದಿಂದ ನಮ್ಮ ಶಕ್ತಿ ಮತ್ತು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಸ್ಮಾರ್ಟ್ ಆಗಿ ಪರೀಕ್ಷೆ ಎದುರಿಸಿ ಮತ್ತು ಜೀವನದ ಸಮಸ್ಯೆಗಳನ್ನು ಸ್ಟೈಲ್ ಮುಖಭಾವದಿಂದ ಎದುರಿಸಿ ಎಂದು ತಿಳಿಸಿದರು.

ಕೆ–ಸೆಟ್, ಯುಜಿಸಿ–ನೆಟ್ ಪರೀಕ್ಷೆಗೆ ಉಚಿತ ಕಾರ್ಯಾಗಾರಗಳು ಸಿಗುವುದು ತೀರಾ ವಿರಳ. ಇಂತಹ ತರಬೇತಿ ಶಿಬಿರಗಳ ಸದುಪಯೋಗಪಡಿಸಿಕೊಂಡು ಜೀವನ ಕಟ್ಟಿಕೊಳ್ಳಿ ಎಂದು ಸಲಹೆ ನೀಡಿದರು.

ಹಿರಿಯ ಶಿಕ್ಷಣತಜ್ಞ ಪ್ರೊ.ಮಲ್ಲಿ ಕಾರ್ಜುನ ಶಾಸ್ತ್ರಿ, ಪ್ರೊ.ಆರ್.ಎನ್.ಪದ್ಮನಾಭ್, ವೈ.ಎನ್. ಶಂಕರೇಗೌಡ, ಪ್ರಾಂಶುಪಾಲ ಮಹದೇವ ನಾಯಕ್, ಡಾ.ಕೃ.ಪ.ಗಣೇಶ, ಡಾ.ಸಿ.ಪುಟ್ಟರಾಜು, ಡಾ.ಶೈಲೇಶ್ ರಾಜೇ ಅರಸ್, ಜೈನಹಳ್ಳಿ ಸತ್ಯನಾರಾಯಣ ಗೌಡ, ಡಾ.ಹೊನ್ನಯ್ಯ, ಕಾರ್ಯದರ್ಶಿ ಎಚ್.ಬಾಲಕೃಷ್ಣ, ಪ್ರೊ.ಕಿರಣ್ ಕೌಶಿಕ್ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರಿನಲ್ಲಿ ಇನ್–ಲ್ಯಾಂಡ್ ಇನ್ಫ್ರಾಸ್ಟ್ರಕ್ಚರ್ ಕಾಂಪ್ಲೆಕ್ಸ್‌ಗೆ ಶಿಲಾನ್ಯಾಸ



ಮೈಸೂರು, ಜು.1(ಬಿಎಲ್‌ಯು)– ಮಂಗಳೂರು ಮೂಲದ ಇನ್–ಲ್ಯಾಂಡ್ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ ಸಾಂಸ್ಕೃತಿಕ ನಗರಿ ಮೈಸೂರಿನ ಹಿನಕಲ್‌ನ ಹುಣಸೂರು ರಸ್ತೆಯಲ್ಲಿ ನೂತನ ವಾಣಿಜ್ಯ ಯೋಜನೆಗೆ ಶಿಲಾನ್ಯಾಸ ನೆರವೇರಿಸಿದೆ.

ಈ ವೇಳೆ ಮಾತನಾಡಿದ ಸಂಸ್ಥೆಯ ಅಧ್ಯಕ್ಷರೂ ಆದ ವ್ಯವಸ್ಥಾಪಕ ನಿರ್ದೇಶಕ ಸಿರಾಜ್ ಅಹ್ಮದ್ ಅವರು, ಮೈಸೂರಿನಲ್ಲಿ ನಮ್ಮ ಸಂಸ್ಥೆಯ ಪ್ರವೇಶವನ್ನು ಈ ಯೋಜನೆ ಪ್ರತಿಬಿಂಬಿಸುತ್ತದೆ. ಜನರಿಗೆ ಅನುಕೂಲವಾಗುವ ಗುಣಮಟ್ಟದ ವಸತಿ ಹಾಗೂ ವಾಣಿಜ್ಯ ಕಟ್ಟಡ ನಿರ್ಮಿಸುವುದು ನಮ್ಮ ಮೂಲ ಧ್ಯೇಯವಾಗಿದೆ ಎಂದು ಭರವಸೆ ನೀಡಿದರು.

ಇತ್ತೀಚಿನ ವರ್ಷದಲ್ಲಿ ಮೈಸೂರಿನಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರ ಗಮನಾರ್ಹ ಬೆಳವಣಿಗೆ ದಾಖಲಿಸಿದೆ. ಇದರಿಂದ ಹೂಡಿಕೆದಾರರು, ಉದ್ಯಮಿಗಳನ್ನು ಮೈಸೂರು ಆಕರ್ಷಿಸುತ್ತಿದೆ ಎಂದು ಸಿರಾಜ್ ಅಹ್ಮದ್ ಅಭಿಪ್ರಾಯಪಟ್ಟರು.

ಸಂಸ್ಥೆಯ ನಿರ್ದೇಶಕರಾದ ಮೆರಾಜ್ ಯೂಸುಫ್, ವಹಾಜ್ ಯೂಸುಫ್ ಹಾಜರಿದ್ದರು. ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಎಂ.ಅನಿತಾ, ಎಲ್.ಕೆ.ಮಂಜುನಾಥ್ ಹಾಗೂ ಕುಟುಂಬಸ್ಥರು ಉಪಸ್ಥಿತರಿದ್ದರು.

ಮೈಸೂರು ದಸರಾ ವೇಳೆ ಕಂಬಳ: ಮರು ಚಿಂತಿಸಿ

● ಸರ್ಕಾರಕ್ಕೆ ಸಂಸದ ಯದುವೀರ್ ಆಗ್ರಹ ● ಕರಾವಳಿ ಕರ್ನಾಟಕದ ಸಾಂಪ್ರದಾಯಿಕ ಆಚರಣೆಯ ವಾಣಿಜ್ಯ ದೃಷ್ಟಿಯಿಂದ ನೋಡಬಾರದು...

ಮೈಸೂರು, ಜು.1(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಅ.18 ಮತ್ತು 19ರಂದು ನಡೆಸಲು ಉದ್ದೇಶಿಸಿರುವ 'ಮೈಸೂರು ಕಂಬಳ' ಆಯೋಜನೆ ಕುರಿತು ಸರ್ಕಾರ ಮರುಚಿಂತನೆ ಮಾಡುವಂತೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಲಹೆ ನೀಡಿದ್ದಾರೆ.

ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಮೈಸೂರು ಕಂಬಳ ನಡೆಸಲು ಉದ್ದೇಶಿಸಲಾಗಿದ್ದು, ಅದಕ್ಕಾಗಿ ಮೈಸೂರಿನ ಸಾತಗಳ್ಳಿ ಬಳಿ, ವಿಟಿಯು ಸಮೀಪದ 23 ಎಕರೆ ಭೂಮಿಯಲ್ಲಿ ಬೆಳೆದಿದ್ದ ಮುಳ್ಳಿನ ಗಿಡಗಳನ್ನು ತೆರವು ಮಾಡಿ, ಸ್ವಚ್ಛಗೊಳಿಸುವ ಕಾರ್ಯ ಆರಂಭಿಸಲಾಗಿದೆ. ಈ ನಡುವೆ ಪರಿಸರವಾದಿಗಳು ಮೈಸೂರು ಕಂಬಳ ವಿರೋಧಿಸಿ, ಅಲ್ಲಿನ ಗಿಡ–ಮರಗಳನ್ನು ತೆರವುಗೊಳಿಸದಂತೆ ಮನವಿ ಮಾಡಿದ್ದರು. ಇದೀಗ ರಾಜವಂಶಸ್ಥರೂ ಆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಮೈಸೂರು ಕಂಬಳ ಕುರಿತಂತೆ ಮರುಚಿಂತನೆ ಮಾಡುವಂತೆ ಆಗ್ರಹಿಸಿದ್ದಾರೆ.


ಯದುವೀರ್ ಒಡೆಯರ್

ಮೈಸೂರು ದಸರಾ ಮಹೋತ್ಸವದಲ್ಲಿ ಕಂಬಳ ನಡೆಸುವ ಕುರಿತು ಚರ್ಚೆ ನಡೆಯುತ್ತಿದೆ. ಕಂಬಳವು ಕರಾವಳಿ ಕರ್ನಾಟಕದ ಮಣ್ಣು, ಸಂಸ್ಕೃತಿ ಮತ್ತು ಜನಜೀವನದೊಂದಿಗೆ ಹಾಸುಹೊಕ್ಕಾಗಿದ್ದು, ಶತಮಾನಗಳ ಇತಿಹಾಸ, ಪವಿತ್ರ ಪರಂಪರೆಯೂ ಆಗಿದೆ. ಇದು ತನ್ನದೇ ಆದ ಸಾಂಪ್ರದಾಯಿಕ ಮತ್ತು ಧಾರ್ಮಿಕ ಮೌಲ್ಯವನ್ನು ಹೊಂದಿದ್ದು, ಇದನ್ನು ಕೇವಲ ವಾಣಿಜ್ಯೀಕರಣ ಅಥವಾ ಮನರಂಜನೆಯ ದೃಷ್ಟಿಕೋನದಿಂದ ನೋಡಿ ಅದರ ಘನತೆಯನ್ನು ಕುಂದಿಸಬಾರದು. ನಿರ್ದಿಷ್ಟ ಪರಿಸರ ಮತ್ತು ಪ್ರಾದೇಶಿಕ ನಂಬಿಕೆಗೆ ಸೀಮಿತವಾಗಿರುವ ಇಂತಹ ವಿಶಿಷ್ಟ ಆಚರಣೆಯನ್ನು ಅದರ ಮೂಲ ನೆಲದಿಂದ ಬೇರ್ಪಡಿಸುವುದು ಅದರ ಆಂತರಿಕ ಪಾವಿತ್ರ್ಯತೆಗೆ ಧಕ್ಕೆ ತರುವ ಅಪಾಯ ಎನಿಸಿದೆ ಎಂದು ಯದುವೀರ್ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.


ಸಂಗ್ರಹ ಚಿತ್ರ

ನಮ್ಮೆಲ್ಲರ ಗಮನ ಮೈಸೂರು ದಸರಾ ಮಹೋತ್ಸವದ ಮೂಲ ಸ್ವರೂಪವನ್ನು ಮತ್ತಷ್ಟು ಬಲಪಡಿಸುವುದರ ಕಡೆಗೆ ಇರಬೇಕಾಗಿದೆ. ಪ್ರಸ್ತುತ ದಸರಾ ಮಹೋತ್ಸವದ ಆಯೋಜನೆಯಲ್ಲಿ ಹಲವು ಆಡಳಿತಾತ್ಮಕ ಲೋಪದೋಷ, ಮೂಲ ಸೌಕರ್ಯಗಳ ಕೊರತೆ ಹಾಗೂ ವ್ಯವಸ್ಥಿತ ಸವಾಲುಗಳು ಎದುರಾಗುತ್ತಿವೆ. ಸರ್ಕಾರ ಮತ್ತು ದಸರಾ ಉನ್ನತ ಮಟ್ಟದ ಸಮಿತಿಯು ಮೊದಲು ಈ ಆಂತರಿಕ ಸವಾಲುಗಳನ್ನು ಬಗೆಹರಿಸಲು ಮೊದಲ ಆದ್ಯತೆ ನೀಡಬೇಕಾಗಿದೆ ಎಂದು ಸಲಹೆ ನೀಡಿದ್ದಾರೆ.

ಸಾಂಪ್ರದಾಯಿಕ ವಿಧಿ–ವಿಧಾನದಂತೆಯೇ ಕಂಬಳ ಏರ್ಪಡಿಸುತ್ತೇವೆ...

● ಕಂಬಳ ಸಮಿತಿ ಕಾರ್ಯಾಧ್ಯಕ್ಷ ಮುರುಳೀಧರ್ ರೈ ಸಮರ್ಥನೆ ● ಮೈಸೂರು ಸಂಸ್ಥಾನಕ್ಕೂ, ಮೂಲ್ಕಿ ಸಂಸ್ಥಾನಕ್ಕೂ ನಿಕಟ ಸಂಬಂಧವಿದೆ ● ಅಲ್ಲಿ ಏರ್ಪಡಿಸುತ್ತಿದ್ದ ಕಂಬಳ ನೋಡಲು ಮೈಸೂರಿಂದ ಬಹಳಷ್ಟು ಜನ ಬರುತ್ತಿದ್ದರು

ಮೈಸೂರು,ಜು.1(ಎಂಟಿವೈ)–ಕಂಬಳಕ್ಕೂ ಮೈಸೂರು ರಾಜಮನೆತನಕ್ಕೂ ಅವಿನಾಭಾವ ಸಂಬಂಧವಿದ್ದು, ಪರಿಸರಕ್ಕೆ ಹಾನಿಯಾಗದಂತೆ 'ಮೈಸೂರು ದಸರಾ ಕಂಬಳ' ನಡೆಸುತ್ತೇವೆ ಎಂದು ಕಂಬಳ ಸಮಿತಿ ಕಾರ್ಯಾಧ್ಯಕ್ಷ ಮುರುಳೀಧರ್ ರೈ ತಿಳಿಸಿದ್ದಾರೆ.


ಕಂಬಳಕ್ಕೂ ಭೂಮಿಗೂ ನಿಕಟ ಸಂಬಂಧವಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿಯ ಒಡೆಯ ನಾಗಾರಾಧನೆ ಮಾಡುವ ಮೂಲಕ ಕಂಬಳ ಮಾಡುತ್ತೇವೆ. ಎಲ್ಲಿ ಕಂಬಳ ಮಾಡಬೇಕಾದರೂ ಸುಬ್ರಹ್ಮಣ್ಯ ದೇವಾಲಯಕ್ಕೆ ಹೋಗಿ ಪ್ರಸಾದ ಕೇಳಿದ ಬಳಿಕ ಕಂಬಳ ನಡೆಸುತ್ತೇವೆ. ಕಂಬಳ ಎಂದರೆ ಕೆಸರು. ಗದ್ದೆಗೆ ಕಂಬಳ ಎಂಬ ಹೆಸರು ಬಂದಿದೆ. ಆಧುನಿಕತೆಗೆ ಒಗ್ಗಿಕೊಂಡು ಜೋಡಿ ಕೋಣದ ಕಂಬಳ ನಡೆಸಿ ಆರಾಧಿಸುತ್ತೇವೆ. ಮೈಸೂರು ಕಂಬಳ ನಡೆಸಲು ಉದ್ದೇಶಿಸಿರುವ ಸ್ಥಳದಲ್ಲಿ ಪರಿಸರಕ್ಕೆ ಹಾನಿ ಮಾಡುವುದಿಲ್ಲ. ಕಂಬಳ ಸಮಿತಿ ಸಭೆಯಲ್ಲಿ ಸಣ್ಣ ಪುಟ್ಟ ಗಿಡ–ಗಂಟಿ, ಮುಳ್ಳಿನ ಪೊದೆಯನ್ನು ಮಾತ್ರ ತೆರವು ಮಾಡಿ, ಅಲ್ಲಿರುವ ದೊಡ್ಡ ಮರಗಳನ್ನು ಉಳಿಸಿಕೊಂಡು ಕಂಬಳ ನಡೆಸುತ್ತೇವೆ. ಬೆಂಗಳೂರಲ್ಲೂ ಮರಗಳನ್ನು ಉಳಿಸಿಕೊಂಡೇ ಕಂಬಳ ಮಾಡಿದ್ದೇವೆ ಎಂದರು.

ಮೈಸೂರು ಕಂಬಳ ನಡೆಸುವ ಸ್ಥಳದಲ್ಲಿರುವ ಕೆರೆಯನ್ನು ಮುಚ್ಚಿ ಹಾಕುತ್ತಿವೆ ಎಂಬ ತಪ್ಪು ಸಂದೇಶ ರವಾನೆಯಾಗುತ್ತಿದೆ. ಯಾವುದೇ ಕಾರಣಕ್ಕೂ ಕೆರೆ ಮುಚ್ಚುವುದಿಲ್ಲ. ಕೆರೆಯನ್ನು ಸ್ವಚ್ಛ ಮಾಡಿಸಿ, ಆ ಪರಿಸರದ ನಡುವೆಯೇ ಕಂಬಳ ನಡೆಸುತ್ತೇವೆ. ಪರಿಸರಕ್ಕೆ ಒಗ್ಗಿಕೊಂಡೆ ಕಂಬಳ ಮಾಡುವುದು. ಕಂಬಳಕ್ಕೂ, ಪರಿಸರಕ್ಕೂ ಅವಿನಾಭಾವ ಸಂಬಂಧವಿದೆ. ನಾವು ಏನೇ ಮಾಡಿದರೂ ಸಂಪ್ರದಾಯ, ಸಂಸ್ಕಾರ ಬಿಟ್ಟು ಏನನ್ನೂ ಮಾಡುವುದಿಲ್ಲ. ಸಂಪ್ರದಾಯ, ಸಂಸ್ಕಾರ, ಪರಿಸರದ ವಿಚಾರದಲ್ಲಿ ರಾಜೀ ಆಗುವುದಿಲ್ಲ ಎಂದು ತಿಳಿಸಿದರು.

ಮೈಸೂರು ಸಂಸ್ಥಾನಕ್ಕೂ, ಮೂಲ್ಕಿ ಸಂಸ್ಥಾನಕ್ಕೂ ನಿಕಟ ಸಂಬಂಧವಿದೆ. ಹಿಂದಿನಿಂದಲೂ ಮೂಲ್ಕಿ ಅರಸರು ಕಂಬಳ ಮಾಡುತ್ತಿದ್ದರು. ಅದನ್ನು ನೋಡಲು ಮೈಸೂರಿನ ಸಂಸ್ಥಾನದವರು ಬರುತ್ತಿದ್ದರು. ಈ ಕಾರಣದಿಂದ ಎರಡೂ ಸಂಸ್ಥಾನಗಳ ನಡುವೆ ಉತ್ತಮ ಸಂಬಂಧ ಏರ್ಪಟ್ಟಿತ್ತು. ದೈವಿಕಶಕ್ತಿ ಇರುವುದು ಮೈಸೂರು ರಾಜವಂಶದ ಆಸ್ಥಾನ ಗುರುಗಳಿಗೂ ತಿಳಿದಿದೆ. ಆ ಕಾರಣದಿಂದ ಬೆಂಗಳೂರು ಕಂಬಳ ನಡೆಸಲು ಬೆಂಗಳೂರು ಅರಮನೆ ಮೈದಾನ ನೀಡಿದ್ದರು. ದಸರಾ ಕಂಬಳ ನಡೆಸುವುದರಿಂದ ಮೈಸೂರಿಗೂ, ದಕ್ಷಿಣ ಕನ್ನಡಕ್ಕೂ ಸಂಬಂಧ ಗಟ್ಟಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ಕಂಬಳ ಕುರಿತು ತಪ್ಪು ಸಂದೇಶ, ತಪ್ಪು ಗ್ರಹಿಕೆ ಬೇಡ. ಮೈಸೂರಿನ ಜನತೆ ಸುಸಂಸ್ಕೃತ ಮತ್ತು ಮೃದು ಮನಸ್ಸಿನವರು. ಹೀಗಾಗಿ ಅವರ ಮನಸ್ಸಿಗೆ ನೋವುಂಟಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ದೈವಿಕ ಅಂಶದ ಕಂಬಳ ನಡೆಸುವುದು ಸ್ಪರ್ಧೆ, ಮನರಂಜನೆ ಅಥವಾ ಪೈಪೋಟಿಗಳಲ್ಲ. ಇದು ಆರಾಧನೆ. ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿ ಪ್ರಸಾದ ತೆಗೆದುಕೊಂಡು ಬಂದ ನಂತರವಷ್ಟೇ ಕಂಬಳ ನಡೆಸುವ ಸಿದ್ಧತೆ ಆರಂಭಿಸುತ್ತೇವೆ. ಬೆಂಗಳೂರಿನ ಕಂಬಳದಲ್ಲಿ ಲಕ್ಷಾಂತರ ಮಂದಿ ಬಂದು ಹೋದರು. ಯಾವುದೇ ಸಣ್ಣ ಲೋಪವೂ ಆಗಲಿಲ್ಲ. ಇದು ದೈವಿಕ ಶಕ್ತಿಯಿಂದ ನಡೆದ ಕಾರ್ಯಕ್ರಮ. ಹಾಗಾಗಿ ಮೈಸೂರು ಕಂಬಳವೂ ಪರಿಸರಕ್ಕೆ ಧಕ್ಕೆಯಾಗದಂತೆ ನಡೆಸುವ ಜವಾಬ್ದಾರಿ ನಮ್ಮದಾಗಿದೆ ಎಂದು ಭರವಸೆ ನೀಡಿದರು.

ಜು.20ರಿಂದ ಸಂಸತ್ ಮುಂಗಾರು ಅಧಿವೇಶನ ಸಾಧ್ಯತೆ



ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನವು ಜುಲೈ 20ರಿಂದ ಆಗಸ್ಟ್ 13ರವರೆಗೆ ನಡೆಯುವ ಸಾಧ್ಯತೆ ಇದ್ದು, ಈ ಕುರಿತು ಕೇಂದ್ರ ಸರ್ಕಾರ ಶೀಘ್ರದಲ್ಲೇ ಅಧಿಕೃತ ಪ್ರಕಟಣೆ ಹೊರಡಿಸುವ ನಿರೀಕ್ಷೆಯಿದೆ. ಸುಮಾರು ನಾಲ್ಕು ವಾರಗಳ ಕಾಲ ನಡೆಯಲಿರುವ ಈ ಅಧಿವೇಶನದಲ್ಲಿ ಹಲವು ಮಹತ್ವದ ಮಸೂದೆಗಳ ಕುರಿತು ಚರ್ಚೆ ನಡೆಯಲಿದೆ.

ಈ ಬಾರಿಯ ಅಧಿವೇಶನದಲ್ಲಿ ಮಹಿಳೆಯರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಶೇ.33 ಮೀಸಲಾತಿ ಜಾರಿಗೊಳಿಸುವ ಸಂವಿಧಾನ ತಿದ್ದುಪಡಿ ಮಸೂದೆ ಹಾಗೂ ಅದಕ್ಕೆ ಸಂಬಂಧಿಸಿದ ಕ್ಷೇತ್ರ ಪುನರ್‌ವಿಂಗಡನೆ ಮಸೂದೆಯನ್ನು ಕೇಂದ್ರ ಸರ್ಕಾರ ಮರುಪರಿಚಯಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈ ಎರಡೂ ಮಸೂದೆಗಳು ಏಪ್ರಿಲ್‌ನಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಅಗತ್ಯವಾದ ಮೂರನೇ ಎರಡರಷ್ಟು ಬಹುಮತ ದೊರೆಯದ ಕಾರಣ ಅಂಗೀಕಾರವಾಗಿರಲಿಲ್ಲ. ಈಗ ಕೆಲವು ವಿರೋಧ ಪಕ್ಷಗಳ ವಿಷಯಾಧಾರಿತ ಬೆಂಬಲದ ನಿರೀಕ್ಷೆಯೊಂದಿಗೆ ಸರ್ಕಾರ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಮುಂದಾಗಿದೆ.

ಈ ಬಾರಿ ಅಧಿವೇಶನದಲ್ಲಿ ಟಿಎಂಸಿ ಮತ್ತು ಶಿವಸೇನೆಯಲ್ಲಿನ (ಯುಬಿಟಿ) ಬಂಡಾಯವು ಹೊರಹೊಮ್ಮುವ ಸಾಧ್ಯತೆ ಇದೆ. ಈಗಾಗಲೇ ಪ್ರತ್ಯೇಕ ಗುಂಪುಗಳಾಗಿ ಗುರುತಿಸಲು ಕೋರಿರುವ 20 ಟಿಎಂಸಿ ಮತ್ತು ಆರು ಶಿವಸೇನೆ (ಯುಬಿಟಿ) ಸಂಸದರ ಬೇಡಿಕೆಗಳ ಕುರಿತು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ನಿರ್ಧಾರಕ್ಕಾಗಿ ಕಾಯಲಾಗುತ್ತಿದೆ.

ರಾಜ್ಯಸಭೆಯಲ್ಲಿ, ಹೊಸದಾಗಿ ಆಯ್ಕೆಯಾದ ಮತ್ತು ಮರು ಆಯ್ಕೆಯಾದ ಸಂಸದರು ಪ್ರಮಾಣವಚನ ಸ್ವೀಕರಿಸಿದ್ದಾರೆ. ರಾಜ್ಯಸಭೆಯಲ್ಲಿ ಚುನಾವಣೆ ಬಳಿಕ ಆಡಳಿತಾರೂಢ ಎನ್‌ಡಿಎ ಪರವಾಗಿ ಬಲ ಹೆಚ್ಚಿದೆ.

ನಾಡಿನ ಅಧಿದೇವತೆ ದರ್ಶನ ಪಡೆದ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ




ಮೈಸೂರಿನ ಚಾಮುಂಡಿಬೆಟ್ಟಕ್ಕೆ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಮಂಗಳವಾರ ಭೇಟಿ ನೀಡಿ, ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನಾಶೀರ್ವಾದ ಪಡೆದು, ರಾಜ್ಯದಲ್ಲಿ ಉತ್ತಮ ಮಳೆಯಾಗಿ, ಸುಭಿಕ್ಷೆ ತರಲಿ ಎಂದು ಪ್ರಾರ್ಥಿಸಿದರು. ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಯುವ ಮುಖಂಡರೂ ಆದ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಇನ್ನಿತರರಿದ್ದರು. ಬಳಿಕ ಚಾಮುಂಡೇಶ್ವರಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪ ಹಾಗೂ ಪ್ರಧಾನ ಅರ್ಚಕರಾದ ಡಾ.ಶಶಿಶೇಖರ್ ದೀಕ್ಷಿತ್ ಸಚಿವರಿಗೆ ನೆನಪಿನ ಕಾಣಿಕೆ ನೀಡಿ, ಅಭಿನಂದಿಸಿದರು.

ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಜು.3, ದಲಿತ ಜನಾಗ್ರಹ ಸಮಾವೇಶ

ಮೈಸೂರಿಂದ ಸಾವಿರ ಮಂದಿ ಭಾಗಿ

ಮೈಸೂರು, ಜು.1(ಜಿಎ)–ಶೋಷಿತ ಸಮುದಾಯಗಳ ಮೇಲಿನ ದೌರ್ಜನ್ಯ ವಿರೋಧಿಸಿ ಜು. 3ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಧ್ಯಾಹ್ನ 12 ಗಂಟೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ–ಅಂಬೇಡ್ಕರ್ ವಾದದ ವತಿಯಿಂದ ಹಮ್ಮಿಕೊಳ್ಳಲಾಗಿರುವ ದಲಿತ ಜನಾಗ್ರಹ ಸಮಾವೇಶದಲ್ಲಿ ಮೈಸೂರಿನಿಂದ ಸುಮಾರು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮಾವೇಶದಲ್ಲಿ ಸುಮಾರು 50 ಸಾವಿರ ಮಂದಿ ರಾಜ್ಯದ ವಿವಿಧೆಡೆಯಿಂದ ಆಗಮಿಸಿ ಪಾಲ್ಗೊಳ್ಳಲಿದ್ದಾರೆ. ಭೂಮಿ, ವಸತಿ, ಬ್ಯಾಕ್‌ಲಾಗ್ ಉದ್ಯೋಗ ಭರ್ತಿ, ವಿಶೇಷ ಘಟಕ ಯೋಜನೆಗೆ ಏಕಗವಾಕ್ಷಿ ನೀತಿಗಾಗಿ ಈ ವೇಳೆ ಹಕ್ಕೊತ್ತಾಯ ಮಂಡಿಸಲಾಗುವುದು. ಇಂದು ರಾಜಕೀಯ ಆಧಾರದ ಮೇಲೆ ಜನರನ್ನು ವಿಭಜಿಸಿ ತನ್ನ ಸ್ವಾರ್ಥ ಸಾಧನೆಗೆ ಬಿಜೆಪಿ ಮುಂದಾಗಿದೆ. ಕಾಂಗ್ರೆಸ್ ಸರ್ಕಾರ ದಲಿತ ಪರ ಧೋರಣೆ ತಾಳಿದ್ದರೂ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸುವಲ್ಲಿ ವಿಫಲವಾಗಿದೆ. ಈ ರೀತಿಯನ್ನು ವಿರೋಧಿಸುವ ನಿಟ್ಟಿನಲ್ಲಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ನೇತೃತ್ವದಲ್ಲಿ ಈ ಸಮಾವೇಶ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬನ್ನಹಳ್ಳಿ ಸೋಮಣ್ಣ, ಧಮ್ಮ ಅಶೋಕ್, ದೊಡ್ಡಸಿದ್ದು ಹಾದನೂರು, ಎಸ್.ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭೆ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ



ಮೈಸೂರು, ಜು. 1– ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭೆಯ ತಾಲೂಕು ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಸಭೆಯು ತಾಲೂಕು ಘಟಕದ ಅಧ್ಯಕ್ಷರಾದ ಕಾವಿ ಬಸಪ್ಪ (ಎಲ್‌ಐಸಿ), ಈರಪ್ಪನಕೊಪ್ಪಲು ಅವರ ಅಧ್ಯಕ್ಷತೆಯಲ್ಲಿ ಹಾಗೂ ಮಹಾಸಭೆಯ ಮೈಸೂರು ಜಿಲ್ಲಾ ಅಧ್ಯಕ್ಷರಾದ ಹಿನಕಲ್ ಬಸವರಾಜು ಸಮ್ಮುಖದಲ್ಲಿ ನಡೆಯಿತು.

ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿ, ಅಭಿನಂದಿಸಲಾಯಿತು. ಈ ವೇಳೆ ಅಧ್ಯಕ್ಷ–ಕಾವಿ ಬಸಪ್ಪ (ಎಲ್‌ಐಸಿ), ಈರಪ್ಪನ ಕೊಪ್ಪಲು, ಉಪಾಧ್ಯಕ್ಷ–ನಾಗರಾಜು, ಕೂಡನಹಳ್ಳಿ, ಮಹಿಳಾ ಉಪಾಧ್ಯಕ್ಷೆ–ಸವಿತಾ, ಮಹಾ ಪೋಷಕರು–ಮಹಾದೇವ ಸ್ವಾಮಿ, ಪ್ರಧಾನ ಕಾರ್ಯದರ್ಶಿ–ಡಿ.ಎ.ಮಹಾದೇವ ಸ್ವಾಮಿ, ಕೋಶಾಧ್ಯಕ್ಷ –ಡಿ.ಪಿ.ಸುರೇಶ್, ಕಾರ್ಯದರ್ಶಿಗಳು–ಮಹದೇವಸ್ವಾಮಿ ತಳೂರು, ನೇತ್ರಾವತಿ ಹಾಗೂ ನಟೇಶ್, ಸಂಘಟನಾ ಕಾರ್ಯದರ್ಶಿಗಳು–ಕುಮಾರ್, ಲೋಕೇಶ್ ಹಾಗೂ ಗುರುಪಾದಸ್ವಾಮಿ, ಸಹ ಕಾರ್ಯ ದರ್ಶಿಗಳು–ಎಲ್.ಬಿ.ರಾಜು, ಡಿ. ಮಹೇಶ್,ಕರಿಯಪ್ಪ ಭಾಗವಹಿಸಿದ್ದರು

ಮೈಸೂರು ರಫ್ತು ಕೇಂದ್ರಕ್ಕೆ ಸೆಲ್ವಕುಮಾರ್ ಭೇಟಿ

ಗುಣಮಟ್ಟದಲ್ಲಿ ತ್ವರಿತವಾಗಿ ಕಾಮಗಾರಿ ಮುಗಿಸಲು ಅಧಿಕಾರಿಗಳಿಗೆ ಸೂಚನೆ



ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿ ನಿರ್ಮಿಸುತ್ತಿರುವ ಮೈಸೂರು ರಫ್ತು ಕೇಂದ್ರದ ಕಾಮಗಾರಿಯನ್ನು ಸೆಲ್ವಕುಮಾರ್ ಪರಿಶೀಲನೆ ನಡೆಸಿದರು.

ಮೈಸೂರು, ಜು.1(ಬಿಎಲ್‌ಯು)– ಮೈಸೂರಿನ ಹೆಬ್ಬಾಳು ಬಳಿಯ ರಿಂಗ್ ರಸ್ತೆಯಲ್ಲಿ ನಿರ್ಮಿಸುತ್ತಿರುವ ಮೈಸೂರು ರಫ್ತು ಕೇಂದ್ರದ ಕಾಮಗಾರಿಯನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಪರಿಶೀಲನೆ ನಡೆಸಿದರು.

ರಫ್ತು ಕೇಂದ್ರದ ಕಾಮಗಾರಿಯನ್ನು ಗುಣಮಟ್ಟದಲ್ಲಿ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಕೆಐಎಡಿಬಿ ಅಧಿಕಾರಿಗಳಿಗೆ ತಾಕೀತು ಮಾಡಿದರು. ಈ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹಾಜರಿದ್ದರು. ಮೈಸೂರು ರಫ್ತು ಕೇಂದ್ರಕ್ಕೆ 2014ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ನೆರವೇರಿಸಿದರು. ತರುವಾಯ 8 ಕೋಟಿ ವೆಚ್ಚದ ರಫ್ತು ಕೇಂದ್ರದ ಕಾಮಗಾರಿಯನ್ನು 2018ರಲ್ಲಿ ಆರಂಭಿಸಲಾಯಿತು.

ಸದ್ಯ ಸರ್ಕಾರದಿಂದ 4.70 ಕೋಟಿ ಹಣ ಬಿಡುಗಡೆಯಾಗಿದ್ದು, ಶೀಘ್ರವೇ 2 ಕೋಟಿ ಬಿಡುಗಡೆ ಮಾಡಬೇಕು ಎಂದು ಮೈಸೂರು ಕೈಗಾರಿಕಾ ಸಂಘದ ಅಧ್ಯಕ್ಷ ವಿಶ್ವನಾಥ್, ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್, ಕೇನ್ಸ್ ಟೆಕ್ನಾಲಜಿಯ ಡಾ.ಮುತ್ತುಕುಮಾರ್ ಅವರು ಸೆಲ್ವಕುಮಾರ್ ಅವರಲ್ಲಿ ಆಗ್ರಹಿಸಿದರು.

ಮೈಸೂರಿನಲ್ಲಿ ರಫ್ತು ಕೇಂದ್ರ ಕಾರ್ಯಾರಂಭ ಮಾಡಿದರೆ ರಫ್ತಿಗೆ ಸಂಬಂಧಿಸಿದ ಲೈಸನ್ಸ್, ಕಸ್ಟಮ್ಸ್, ಕೋಡ್ ನಿಗದಿ ಸೇರಿದಂತೆ ರಫ್ತಿಗೆ ಸಂಬಂಧಿಸಿದ ಚಟುವಟಿಕೆಗಳು ಈ ಒಂದೇ ಸೂರಿನಲ್ಲಿ ನಡೆಯುತ್ತದೆ. ಮೈಸೂರಿಗೆ ರಫ್ತು ಕೇಂದ್ರ ಅತ್ಯವಶ್ಯವಾಗಿರುವ ಹಿನ್ನೆಲೆಯಲ್ಲಿ ಕಟ್ಟಡದ ಕಾಮಗಾರಿಗೆ ಉಳಿದ ಹಣ ಬಿಡುಗಡೆ ಮಾಡಬೇಕು ಎಂದು ಸೆಲ್ವಕುಮಾರ್ ಅವರನ್ನು ಒತ್ತಾಯಿಸಿದರು.

ಆತ್ಮೀಯ ಆಹ್ವಾನ...




ಮೈಸೂರು ಜಿಲ್ಲೆಯ ಮಳಲವಾಡಿಯ ಹೊಸ ನ್ಯಾಯಾಲಯದ ಆವರಣದಲ್ಲಿರುವ ಸ್ವತಂತ್ರ ವಕೀಲರ ಭವನದ ವಿಸ್ತೃತ ಕಟ್ಟಡದ ಶಂಕುಸ್ಥಾಪನ ಸಮಾರಂಭಕ್ಕೆ ಆಗಮಿಸಿದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರನ್ನು ಅಭಿನಂದಿಸಿ ಆಹ್ವಾನಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿಗಳಾದ ಎ.ಜಿ.ಸುಧೀರ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಖಜಾಂಚಿ ಭರತ್, ಜಂಟಿ ಕಾರ್ಯದರ್ಶಿ ಚರಣ್ ರಾಜ್, ಶಿವಸ್ವಾಮಿ, ಲೋಕೇಶ್, ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯಲ್ಲಿ ಇದುವರೆಗೆ 3070 ಪ್ರಕರಣಗಳಲ್ಲಿ 7.81 ಲಕ್ಷ ದಂಡ ಪಾವತಿ

ಮೈಸೂರು,ಜ.1(ಎಸ್‌ಪಿಎನ್)– ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ದಂಡಪಾವತಿಗೆ ರಾಜ್ಯ ಸರ್ಕಾರದಿಂದ ಶೇ.50ರಷ್ಟು ರಿಯಾಯಿತಿಯಡಿ ದಂಡ ಪಾವತಿಸಲು ಜು.10 ಕಡೆ ದಿನ. ಜೂ.29ರವರೆಗೆ 3,070 ಪ್ರಕರಣಗಳಲ್ಲಿ 7.81 ಲಕ್ಷ ರೂ. ಮೊತ್ತ ಪಾವತಿಯಾಗಿದೆ.

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಜೂ.21ರಂದು 292 ಪ್ರಕರಣಗಳಲ್ಲಿ 73,500 ರೂ.,ಜೂ.22ರಂದು 140 ಪ್ರಕರಣಗಳಲ್ಲಿ 35 ಸಾವಿರ, ಜೂ.23 ರಂದು 294 ಪ್ರಕರಣಗಳಲ್ಲಿ 73,750 ರೂ., ಜೂ.24ರಂದು 355 ಪ್ರಕರಣಗಳಲ್ಲಿ 90,250 ರೂ.,ಜೂ.25ರಂದು 190 ಪ್ರಕರಣಗಳಲ್ಲಿ 49,500, ಜೂ.26ರಂದು 99 ಪ್ರಕರಣಗಳಲ್ಲಿ 25500, ಜೂ.27 ರಂದು 264 ಪ್ರಕರಣಗಳಲ್ಲಿ 67 ಸಾವಿರ, ಜೂ.27ರಂದು 264 ಪ್ರಕರಣಗಳಲ್ಲಿ 67 ಸಾವಿರ, ಜೂ.28ರಂದು 525 ಪ್ರಕರಣಗಳಲ್ಲಿ 1,33,500 ರೂ., ಜೂ.29ರಂದು 911 ಪ್ರಕರಣಗಳಲ್ಲಿ 2,33ಲಕ್ಷ ರೂ. ಸೇರಿದಂತೆ ಅಂದಾಜು 3,070 ಪ್ರಕರಣಗಳಲ್ಲಿ ದಂಡ ವಸೂಲಾಗಿದೆ ಎಂದು ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜು.6ಕ್ಕೆ ಡಾ.ಬಾಬು ಜಗಜೀವನರಾಂ ಪುಣ್ಯಸ್ಮರಣೆ



ಮೈಸೂರು ಜು.1– ಜಿಲ್ಲಾಡಳಿತದ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ವತಿಯಿಂದ ಡಾ.ಬಾಬು ಜಗಜೀವನರಾಂ ಅವರ 40ನೇ ವರ್ಷದ ಪುಣ್ಯಸ್ಮರಣೆ ದಿನದ ಅಂಗವಾಗಿ ಜು.6ರಂದು ಬೆಳಗ್ಗೆ 9:30 ಗಂಟೆಗೆ ಮೈಸೂರಿನ ರೈಲ್ವೆ ನಿಲ್ದಾಣದ ಮುಂಭಾಗದ ವೃತ್ತದಲ್ಲಿರುವ ಡಾ. ಬಾಬು ಜಗಜೀವನರಾಂ ಅವರ ಪ್ರತಿಮೆಗೆ ಮಾಲಾರ್ಪಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಭಿನಂದನೆ...

ಹುಣಸೂರಿನ 8ನೇ ಅಧಿಕ ಮತ್ತು ಜಿಲ್ಲಾ ಸತ್ರ ನ್ಯಾಯಾಧೀಶರಾದ ಗೋವಿಂದಯ್ಯ ಅವರು ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ಎಂಟನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಎಡಿಜಿಪಿ ತಿಮ್ಮಯ್ಯ, ವಕೀಲರಾದ ಪುಟ್ಟರಸ ಎಚ್.ಎಸ್., ಎ.ಆರ್.ಕಾಂತರಾಜ್, ನ್ಯಾಯಾಲಯದ ನಿವೃತ್ತ ನೌಕರರಾದ ಮಹದೇವ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಬೀಳ್ಕೊಟ್ಟರು.

ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಜು.15ರವರೆಗೆ ವಿಸ್ತರಣೆ

ಮೈಸೂರು, ಜು.1(ಎಸ್‌ಪಿಎನ್)–2026–27ನೇ ಸಾಲಿನ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಯನ್ನು ಜು.15ರವರೆಗೆ ವಿಸ್ತರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು–1)ಯ ಉಪ ಕಾರ್ಯದರ್ಶಿ ಎಸ್.ಆರ್.ಶಿವಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. ಈ ಹಿಂದೆ ಸಾರ್ವತ್ರಿಕ ವರ್ಗಾವಣೆಗಾಗಿ ಏ.13ರಂದು ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮನವಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಾರ್ವತ್ರಿಕ ವರ್ಗಾವಣೆ ಅವಧಿ ಜೂ.30ಕ್ಕೆ ನಿಗದಿಗೊಳಿಸಿತ್ತು. ಇದೀಗ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವ ಷರತ್ತುಗಳು ಹಾಗೂ ನಿರ್ಬಂಧಗಳಿಗೆ ಒಳಪಟ್ಟು ಸಾರ್ವತ್ರಿಕ ವರ್ಗಾವಣೆಯಲ್ಲಿ ಜು.15ರವರೆಗೆ ವಿಸ್ತರಿಸಿ ಆದೇಶಿಸಿದ್ದಾರೆ.

ನಾನು ಲಾಟರಿ ಶಾಸಕನಲ್ಲ: ನಮ್ಮ ಕುಟುಂಬಕ್ಕೆ ರಾಜಕೀಯ ಹೊಸದಲ್ಲ!

ಹಾಸನ: ನಾನು ರಾಜ್ಯ ರಾಜಕೀಯಕ್ಕೆ ಹೋಗುವವನಲ್ಲ. ರಾಜ್ಯ ರಾಜಕೀಯ ಮಾತನಾಡಲು ಹೋಗಲ್ಲ. ನಮ್ಮ ತಂದೆ ನಾಲ್ಕು ಬಾರಿ ಶಾಸಕರಾಗಿದ್ದರು. ನಾನು ಜಿ.ಪಂ. ಸದಸ್ಯನಾಗಿ, ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಹಾಸನ ವಿಧಾನ ಸಭಾ ಕ್ಷೇತ್ರದ ಜನರ ನಾಡಿಮಿಡಿತ ಅರಿತಿದ್ದೇನೆ. ನಮ್ಮ ಕುಟುಂಬಕ್ಕೆ ರಾಜಕೀಯ ಹೊಸದಲ್ಲ ಎಂದು ಶಾಸಕ ಎಚ್.ಪಿ. ಸ್ವರೂಪ್ ಪ್ರಕಾಶ್ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡಗೆ ತಿರುಗೇಟು ನೀಡಿದ ಅವರು, ನಾನು ಲಾಟರಿ ಶಾಸಕನಲ್ಲ 85 ಸಾವಿರ ಮತಗಳ ಅಂತರದಿಂದ ಗೆದ್ದಿದ್ದೇನೆ. ನನ್ನ ಕ್ಷೇತ್ರದಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ನಾನು ಮಾಡಿರುವ ಶಾಶ್ವತ ಕೆಲಸಗಳ ಅಂಕಿ–ಅಂಶಗಳನ್ನು ಜನರ ಮುಂದಿಡುತ್ತೇನೆ. ನಾನು ಲಾಟರಿ ಆಡಿದವನಲ್ಲ. ಲಾಟರಿ ಆಡುವವರಿಗೆ ಅದರ ಆಳ, ಅಗಲ ಗೊತ್ತು ಅವರು ಅದರ ಬಗ್ಗೆ ಮಾತನಾಡುತ್ತಾರೆ. ಲಾಟರಿ ಬಗ್ಗೆ ಆಳ, ಅಗಲ ನನಗೆ ಗೊತ್ತಿಲ್ಲ. ನಾನು ಎಂದೂ ಲಾಟರಿ ಆಡಿಲ್ಲ ಎಂದು ವ್ಯಂಗ್ಯವಾಡಿದರು.



ಹಾಸನ ಶಾಸಕ ಎಚ್.ಪಿ.ಸ್ವರೂಪ್ ಪ್ರಕಾಶ್

ನಾನು ಮೈತ್ರಿ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇನೆ. ನನ್ನಿಂದ ಮೈತ್ರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಆದರೆ ಹಿಂದಿನ ಲೋಕಸಭೆ ಚುನಾವಣೆಯಲ್ಲಿ ಯಾರು ಮೈತ್ರಿ ಧರ್ಮ ಪಾಲಿಸಿದ್ದಾರೆ. ಇಲ್ಲ ಎಂಬುದನ್ನು ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಮಾಡಲಿ ಎಂದು ಸವಾಲು ಹಾಕಿದರು. ಪಕ್ಷದ ಹಿರಿಯರ ನಿರ್ಧಾರಗಳನ್ನು ಗೌರವಿಸಿ ಕೆಲಸ ಮಾಡಿದ್ದೇನೆ. ಮುಂದೆಯೂ ಪಕ್ಷ ಮತ್ತು ಮೈತ್ರಿಯ ಹಿತದೃಷ್ಟಿಯಿಂದಲೇ ನಡೆದುಕೊಳ್ಳುತ್ತೇನೆ. –ಸ್ವರೂಪ್ ಪ್ರಕಾಶ್, ಶಾಸಕ

ಪಕ್ಷ ಯಾವ ತೀರ್ಮಾನ ತೆಗೆದುಕೊಂಡರೂ ಅದನ್ನು ಗೌರವದಿಂದ ಸ್ವೀಕರಿಸುತ್ತೇನೆ. ಮೈತ್ರಿ ಧರ್ಮ ಪಾಲನೆ ಮೊದಲು. ಚುನಾವಣೆ ಟಿಕೆಟ್ ವಿಚಾರ ನಂತರ. ಟಿಕೆಟ್ ಕುರಿತು ಎಂದೂ ಪ್ರಸ್ತಾಪ ಮಾಡಿಲ್ಲ. ನಾನು ಚಿಕ್ಕಂದಿನಿಂದ ರಾಜಕೀಯ ಕಂಡಿದ್ದೇನೆ. ನಮ್ಮ ಕುಟುಂಬ ರಾಜಕೀಯವಾಗಿ ಬೆಳೆಯಲು ಜನರ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದವೇ ಕಾರಣ. ತಂದೆ ದಿವಂಗತ ಪ್ರಕಾಶ್ 4 ಬಾರಿ ಶಾಸಕರಾಗಿ ಜನಸೇವೆ ಸಲ್ಲಿಸಿದ್ದರು. ಅವರ ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಕ್ಷೇತ್ರದಲ್ಲಿ ಸೇವಾ ಕಾರ್ಯ ಮುಂದುವರಿಸುತ್ತೇನೆ. ನಾನು 85 ಸಾವಿರ ಮತಗಳನ್ನು ಪಡೆದಿದ್ದೇನೆ. ಮತ ನೀಡಿದವರು, ನೀಡದವರು ಸೇರಿ ಎಲ್ಲರ ಸೇವೆಗೆ ಶಾಸಕನಾಗಿದ್ದೇನೆ ಎಂದರು.

ಮೈಸೂರು ಮಿತ್ರ ಗುರುವಾರ 2 ಜುಲೈ 2026

'ಮಿತ್ರ'ನ ಮಿಂಚು –ಸತೀಶ್ ಆಚಾರ್ಯ



ರಾಷ್ಟ್ರೀಯ ಅಂಚೆ ನೌಕರರ ದಿನಾಚರಣೆ

ಬೆಳವಾಡಿ ಅಂಚೆ ಕಚೇರಿ ನೌಕರರಿಗೆ ಅಭಿನಂದನೆ



ರಾಷ್ಟ್ರೀಯ ಅಂಚೆ ನೌಕರರ ದಿನಾಚರಣೆ ಅಂಗವಾಗಿ ಬೆಳವಾಡಿ ಅಂಚೆ ಕಚೇರಿಯ ಅಂಚೆ ನೌಕರರನ್ನು ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು, ಜು.1(ಜಿಎ)–ರಾಷ್ಟ್ರೀಯ ಅಂಚೆ ನೌಕರರ ದಿನಾಚರಣೆ ಅಂಗವಾಗಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಮೈಸೂರಿನ ಬೆಳವಾಡಿಯ ಅಂಚೆ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಂಚೆ ನೌಕರರನ್ನು ಅಭಿನಂದಿಸಲಾಯಿತು.

ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ರಾಜಶೇಖರ್ ಮಾತನಾಡಿ, ಅಂಚೆ ಇಲಾಖೆ ದೇಶದ ಅತ್ಯಂತ ಹಳೆಯ ಹಾಗೂ ಜನವಿಶ್ವಾಸಗಳಿಸಿರುವ ಸೇವಾ ಸಂಸ್ಥೆಗಳಲ್ಲಿ ಒಂದಾಗಿದ್ದು, ಆಧುನಿಕ ತಂತ್ರಜ್ಞಾನ, ಮೊಬೈಲ್ ಮತ್ತು ಇಂಟರ್ ನೆಟ್ ಯುಗದಲ್ಲಿಯೂ ಅಂಚೆ ನೌಕರರು ತಮ್ಮ ಸೇವಾ ಮನೋಭಾವವನ್ನು ಕಡಿಮೆ ಮಾಡದೆ, ದೇಶದ ಪ್ರತಿಯೊಬ್ಬ ನಾಗರಿಕರ ಮನೆ ಬಾಗಿಲಿಗೆ ಸರ್ಕಾರ ಹಾಗೂ ಸಾರ್ವಜನಿಕ ಸೇವೆಗಳನ್ನು ತಲುಪಿಸುತ್ತಿದ್ದಾರೆ ಎಂದರು.

ಹಿಂದಿನ ದಿನಗಳಲ್ಲಿ ಕುಟುಂಬಗಳ ಸುಖ–ದುಃಖದ ಸುದ್ದಿಗಳನ್ನು ಹೊತ್ತ ಪತ್ರಗಳು, ಮನಿ ಆರ್ಡರ್‌ಗಳು, ಪರೀಕ್ಷಾ ಫಲಿತಾಂಶಗಳು, ನೇಮಕಾತಿ ಆದೇಶಗಳು ಸೇರಿದಂತೆ ಅನೇಕ ಮಹತ್ವದ ದಾಖಲೆಗಳನ್ನು ಜನರ ಕೈಗೆ ತಲುಪಿಸಿದವರು ಅಂಚೆ ನೌಕರರು. ಇಂದಿಗೂ ಗ್ರಾಮೀಣ ಪ್ರದೇಶಗಳಿಂದ ನಗರಗಳವರೆಗೆ ಅಂಚೆ, ಉಳಿತಾಯ ಯೋಜನೆಗಳು, ಪಿಂಚಣಿ, ಬ್ಯಾಂಕಿಂಗ್ ಸೇವೆಗಳು ಹಾಗೂ ವಿವಿಧ ಸರ್ಕಾರಿ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಅವರ ಪಾತ್ರ ಅಪಾರವಾಗಿದೆ. ಬಿರು ಬಿಸಿಲು, ಧಾರಾಕಾರ ಮಳೆ, ಚಳಿ ಸೇರಿದಂತೆ ಯಾವುದೇ ಪ್ರತಿಕೂಲ ಪರಿಸ್ಥಿತಿಗಳಿದ್ದರೂ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುವ ಅಂಚೆ ನೌಕರರ ಸೇವೆ ನಿಜಕ್ಕೂ ಮಾದರಿಯಾಗಿದೆ. ಜನರ ಮನೆ ಬಾಗಿಲಿಗೆ ಆಶಯ ಸಂದೇಶ, ಸಂತಸದ ಸುದ್ದಿ ಹಾಗೂ ಅಗತ್ಯ ಸೇವೆಗಳನ್ನು ತಲುಪಿಸುವ ಅವರ ಪರಿಶ್ರಮವನ್ನು ಸಮಾಜ ಸದಾ ಸ್ಮರಿಸುವಂತಾಗಿದೆ ಎಂದು ತಿಳಿಸಿದರು.

ಬೆಳವಾಡಿ ಅಂಚೆ ಕಚೇರಿಯ ಪುಟ್ಟರಾಜು (ಪೋಸ್ಟ್ ಮಾಸ್ಟರ್), ಕುಮಾರ್ (ಪೋಸ್ಟ್ ಮ್ಯಾನ್), ರಮೇಶ್.ಬಿ, ಸರಸ್ವತಿ ಎಸ್. ನೌಕರರನ್ನು ಜಿಪಂ ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ವೇದಿಕೆ ಖಜಾಂಚಿ ನಂಜುಂಡ, ಮಹಿಳಾ ಘಟಕದ ಅಧ್ಯಕ್ಷೆ ಜಿ.ತಾರಾ, ಗೌರವಾಧ್ಯಕ್ಷ ರವಿಗೌಡ , ಕಾರ್ಯದರ್ಶಿ ನಾಗರಾಜ್, ಮೈಸೂರು ಮಹಿಳಾ ಘಟಕದ ಅಧ್ಯಕ್ಷೆ ವತ್ಸಲ, ಪರ್ವೀನ್ ತಾಜ್, ಚನ್ನನಾಯಕ, ಜನಾರ್ಧನ್, ರವಿಗೌಡ ಬೆಳವಾಡಿ ಮತ್ತಿತರರು ಉಪಸ್ಥಿತರಿದ್ದರು.

ನೋವು–ನಲಿವನ್ನು ಜನತೆಗೆ ತಲುಪಿಸುವ ಶಕ್ತಿ ಕಲೆಗಿದೆ

● ಸಂಗೀತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಕೆ. ರಾಮಕೃಷ್ಣಯ್ಯ ಅಭಿಮತ ● ಯುವ ಸೌರಭ 2026ಕ್ಕೆ ಚಾಲನೆ



ಕನ್ನಡ–ಸಂಸ್ಕೃತಿ ಇಲಾಖೆ, ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಸಹಯೋಗದಲ್ಲಿ ಕೆಎಸ್‌ಜಿಹೆಚ್ ರಂಗಮಂದಿರದಲ್ಲಿ ಆಯೋಜಿಸಿದ್ದ 'ಯುವ ಸೌರಭ 2026' ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮೈಸೂರು, ಜು.1(ಜಿಎ)–ಯುವ ಕಲಾವಿದರು ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಸೈನಿಕರಂತೆ ಜವಾಬ್ದಾರಿಯನ್ನು ಹೊಂದಿದ್ದಾರೆ ಎಂದು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಕೆ.ರಾಮಕೃಷ್ಣಯ್ಯ ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಸಹಯೋಗದಲ್ಲಿ ಕೆಎಸ್‌ಜಿಹೆಚ್ ರಂಗಮಂದಿರದಲ್ಲಿ ಆಯೋಜಿಸಿದ್ದ 'ಯುವ ಸೌರಭ 2026' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಲೆಯನ್ನು ಕಣ್ಣಿಗೆ ಕಟ್ಟುವ ಹಾಗೆ ವೇದಿಕೆ ಮೇಲೆ ಪ್ರದರ್ಶನ ಮಾಡುವ ಅದ್ಭುತ ಶಕ್ತಿ ಅದಕ್ಕಿದೆ. ಕಲೆಯ ಸೌಂದರ್ಯ, ಅದರ ನೋವು ಮತ್ತು ನಲಿವುಗಳನ್ನು ಪ್ರೇಕ್ಷಕರಿಗೆ ತಲುಪಿಸುವ ಶಕ್ತಿ ವಿವಿಧ ಕಲೆಗಳಿಗೆ ಇದೆ. ಕಲೆಗಳನ್ನು ಶಾಸ್ತ್ರೀಯವಾಗಿ ಕಲಿಸುವ ಜವಾಬ್ದಾರಿ ವಿಶ್ವವಿದ್ಯಾಲಯದ್ದಾದರೆ, ಆ ಕಲೆಗಳನ್ನು ಪೋಷಿಸಿ, ಜನಸಂಪರ್ಕದ ಮೂಲಕ ಸಮಾಜಕ್ಕೆ ತಲುಪಿಸುವ ಜವಾಬ್ದಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯದ್ದಾಗಿದೆ ಎಂದರು.

ಸೌರಭ ಎಂದರೆ ಪರಿಮಳ, ಒಂದು ಹೂವು ಅರಳಿ ತನ್ನ ಪರಿಮಳವನ್ನು ಹರಡುವಂತೆ, ಯುವ ಕಲಾವಿದರು ತಮ್ಮಲ್ಲಿರುವ ಡೊಳ್ಳು ಕುಣಿತ, ಕಂಸಾಳೆ, ನಾಟಕ, ಶಾಸ್ತ್ರೀಯ ಸಂಗೀತ ಮತ್ತು ಭಾವಗೀತೆಗಳಂತಹ ವಿವಿಧ ಕಲಾ ಪ್ರಕಾರಗಳ ಮೂಲಕ ಸಮಾಜದಲ್ಲಿ ಕಲೆಯ ಪರಿಮಳವನ್ನು ಪಸರಿಸುತ್ತಿದ್ದಾರೆ ಎಂದರು.

ಡಾ.ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ್ ಮಾತನಾಡಿ, ಸಂಗೀತ, ನೃತ್ಯ ಮತ್ತು ಪ್ರದರ್ಶಕ ಕಲೆಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಹಾಗೂ ಶೈಕ್ಷಣಿಕವಾಗಿ ಅದನ್ನು ಉಳಿಸಿ ಬೆಳೆಸುವುದು ನಮ್ಮ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶವಾಗಿದೆ. ಇದೇ ಕಲೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಸ್ಕೃತಿ ಇಲಾಖೆಯೂ ಕಾರ್ಯನಿರ್ವಹಿಸುತ್ತಿದ್ದು, ನಮ್ಮ ಎರಡೂ ಸಂಸ್ಥೆಗಳ ಗುರಿ ಒಂದೇ ಆಗಿದೆ. ಸಾಮಾನ್ಯವಾಗಿ ಕಂಸಾಳೆ ನೃತ್ಯವು ಪುರುಷರಿಗೆ ಮಾತ್ರ ಸೀಮಿತ ಎಂಬ ತಪ್ಪು ಕಲ್ಪನೆ ಇದೆ. ಆದರೆ ಇಂದು ಹೆಣ್ಣುಮಕ್ಕಳು ಸಹ ಆ ಕಲೆಯಲ್ಲಿ ಪಾರಂಗತರಾಗಿ ಅತ್ಯುತ್ತಮ ಪ್ರದರ್ಶನ ನೀಡಿರುವುದು ಹೆಮ್ಮೆಯ ವಿಷಯ ಎಂದು ಸಂತಸ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ನಿರ್ಮಲಾ ಮಠಮತಿ ಮಾತನಾಡಿ, ಇಲಾಖೆಯು ವಿವಿಧ ವಯೋಮಾನದ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಚಿಗುರು–ಮಕ್ಕಳಿಗಾಗಿ, ಯುವ ಸೌರಭ– ಯುವಕರಿಗಾಗಿ ಮತ್ತು ಸೌರಭ–ಹಿರಿಯರಿಗಾಗಿ ಎಂಬ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿರುವುದು ಹೆಮ್ಮೆಯ ವಿಷಯ ಎಂದರು.

ಕಲ್ಲು, ಇಟ್ಟಿಗೆಗಳಿಂದ ದೇಶವನ್ನು ಕಟ್ಟಲು ಸಾಧ್ಯವಿಲ್ಲ. ಜನರ ಮನಸ್ಸುಗಳನ್ನು ಬೆಸೆಯುವ ಮೂಲಕ ದೇಶ ಕಟ್ಟಬೇಕಾಗಿದೆ. ಅದಕ್ಕೆ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕಲೆಯು ಮನಸ್ಸುಗಳನ್ನು ಆರೋಗ್ಯಪೂರ್ಣವಾಗಿಡಲು ನೆರವಾಗುತ್ತವೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಎಲೆಮರೆ ಕಾಯಂತಿರುವ ಅಪಾರ ಕಲಾ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ಸಮಾಜದ ಮುಖ್ಯವಾಹಿನಿಯಲ್ಲಿ ಸೂಕ್ತ ವೇದಿಕೆ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಿರಂತರವಾಗಿ ಶ್ರಮಿಸುತ್ತಿದೆ ಎಂದರು. ಈ ವೇಳೆ ಕಾರ್ಯಕ್ರಮದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸೇರಿದಂತೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತಿತರರು ಉಪಸ್ಥಿತರಿದ್ದರು.

ಎಸ್‌ಐಆರ್ ವೇಳೆ ಅರ್ಹ ಮತದಾರರ ಕೈಬಿಡಬೇಡಿ

ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ಸೂಚನೆ




ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ಗೋಕುಲಂನ ವಾರ್ಡ್ ಸಂಖ್ಯೆ 6ರ ಮನೆಗಳಿಗೆ ತೆರಳಿ ಎನ್ಯೂಮರೇಷನ್ ಫಾರಂ ವಿತರಿಸಿದರು.

ಮೈಸೂರು, ಜು.1(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಯಾವುದೇ ಅರ್ಹ ಮತದಾರರ ಹೆಸರು ಪಟ್ಟಿಯಿಂದ ಕೈ ಬಿಟ್ಟು ಹೋಗದಂತೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಜಿಲ್ಲೆಯ ಮತದಾರರ ಪಟ್ಟಿಯ ವೀಕ್ಷಕರೂ ಆದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್, ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದರು. ಮೈಸೂರಿನ ಚಾಮರಾಜ ಕ್ಷೇತ್ರದ ಗೋಕುಲಂನ ವಾರ್ಡ್ ಸಂಖ್ಯೆ 6ಕ್ಕೆ ಖುದ್ದಾಗಿ ಭೇಟಿ ನೀಡಿ ಎನ್ಯೂಮರೇಷನ್ ಫಾರಂ ವಿತರಣೆ ಕಾರ್ಯದ ಬಗ್ಗೆ ಪರಿಶೀಲನೆ ನಡೆಸಿದ ವೇಳೆ ಅಧಿಕಾರಿಗಳಿಗೆ ಈ ಸೂಚನೆ ನೀಡಿದರು.

ತರುವಾಯ ಎನ್ಯೂಮರೇಷನ್ ಫಾರಂಗಳನ್ನು ಮತದಾರರಿಗೆ ವಿತರಣೆ ಮಾಡುತ್ತಿರುವ ಬಗ್ಗೆ ಸೆಲ್ವಕುಮಾರ್ ಅವರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಹಾಗೂ ಮತದಾರರ ನೋಂದಣಾಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದರು.

ಮತದಾರರ ಪಟ್ಟಿ ಪರಿಷ್ಕರಣೆ

ಅನರ್ಹರು ಔಟ್; ಅರ್ಹರ ಸೇರ್ಪಡೆಗೆ ಮಾಜಿ ಸಿಎಂ ಬೊಮ್ಮಾಯಿ ಆಗ್ರಹ



ಬೆಂಗಳೂರು, ಜು.1(ಕೆಎಂಶಿ)–ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ವೇಳೆ ಅನರ್ಹರನ್ನು ಕೈಬಿಡುವ ಹಾಗೂ ಅರ್ಹರನ್ನು ಸೇರ್ಪಡೆಗೊಳಿಸುವ ಕುರಿತು ವಿಜಿಲೆನ್ಸ್ ತಂಡಗಳಿಗೆ ಚುನಾವಣಾ ಆಯೋಗ ಕಟ್ಟುನಿಟ್ಟಿನ ಸೂಚನೆ ನೀಡಬೇಕು ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಎನ್ಯೂಮರೇಷನ್ ಫಾರ್ಮ್ ವಿತರಣೆ ಆರಂಭವಾಗಿದ್ದು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವೇಳೆ ಸರ್ಕಾರ ಹಾಗೂ ಕಾಂಗ್ರೆಸ್ ಅಣತಿಯಂತೆ ಕಾರ್ಯನಿರ್ವಹಿಸಲು ಕೆಲವು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂಬ ಸುದ್ದಿಗಳು ಕೇಳಿಬರುತ್ತಿವೆ.

ಪ್ರತಿಯೊಂದು ಜಿಲ್ಲೆಯ ಜಿಲ್ಲಾ ಚುನಾವಣಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಚುನಾವಣಾ ಕಾರ್ಯ ನಿಗಾವಹಿಸುವ ಅಧಿಕಾರಿಗಳು, ಪಿಡಿಒಗಳು ಹಾಗೂ ಮತದಾರರ ಪರಿಷ್ಕರಣೆಯಲ್ಲಿ ತೊಡಗಿರುವ ಕಂದಾಯ ಇಲಾಖೆ ಅಧಿಕಾರಿಗಳು ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ, ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು ಎಂದು ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ.

ಮಕ್ಕಳೂ ಗಿಡನೆಟ್ಟು ಪೋಷಿಸುವ ಹೊಣೆ ಹೊರಬೇಕು

ಸಾಲುಮರದ ವೆಂಕಟೇಶ್ ಕಿವಿಮಾತು



ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಲುಮರದ ವೆಂಕಟೇಶ್ ಮಾತನಾಡಿದರು. ಈ ವೇಳೆ ಎಂಬಿಸಿಟಿ ಮ್ಯಾನೇಜಿಂಗ್ ಟ್ರಸ್ಟಿ ಎಸ್.ಸುಬ್ರಹ್ಮಣ್ಯ, ಬಿಎಐ ಮೈಸೂರು ಘಟಕದ ಛೇರ್ಮನ್ ಕೆ.ಆರ್.ಪ್ರಭಾಕರ್‌ರಾವ್, ಗೌರವ ಕಾರ್ಯದರ್ಶಿ ಎಂ.ಡಿ.ಪ್ರವೀಣ್ ರೈ, ಡಬ್ಲ್ಯುಇಎಂ ಕಾರ್ಯದರ್ಶಿ ಎಸ್.ವಾಸುದೇವನ್ ಉಪಸ್ಥಿತರಿದ್ದರು.

ಮೈಸೂರು,ಜು.1(ಎಸ್‌ಪಿಎನ್)–ತಮ್ಮ ಮಕ್ಕಳನ್ನು ಮುಂದಿನ ಪ್ರಜೆಗಳನ್ನಾಗಿ ರೂಪಿಸಲು ಪೋಷಕರು ಶ್ರಮಿಸುತ್ತಾರೆ. ಅದೇ ರೀತಿ ಮಕ್ಕಳು ಮುಂದಿನ ದಿನಗಳಲ್ಲಿ ಬದುಕಲಿಕ್ಕೆ ಗಿಡ ನೆಟ್ಟು ಪೋಷಿಸುವ ಹೊಣೆ ಹೊರಬೇಕು ಎಂದು ಸಾಲುಮರದ ವೆಂಕಟೇಶ್ ಸಲಹೆ ನೀಡಿದರು.

ಮೈಸೂರು ವಿಶ್ವೇಶ್ವರನಗರದ ಅಕ್ಕ ಮಹಾದೇವಿ ರಸ್ತೆಯಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಗರ ಪ್ರದೇಶದಲ್ಲಿ ದಿನೇದಿನೆ ಮರಗಳ ಸಂಖ್ಯೆ ಕಡಿಮೆಯಾಗುತ್ತಿವೆ. ಇದನ್ನು ಮನಗಂಡು, ಸಾಲುಮರದ ತಿಮ್ಮಕ್ಕರಿಂದ ಸ್ಫೂರ್ತಿ ಪಡೆದು ಚಾಮರಾಜನಗರದ ವಿವಿಧ ಸ್ಥಳಗಳಲ್ಲಿ ಇಲ್ಲಿಯವರೆಗೆ ಅಂದಾಜು 17 ಸಾವಿರಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ಮಕ್ಕಳಂತೆ ಪೋಷಿಸಿದ್ದೇನೆ. ಪರಿಸರದ ಮೇಲಿನ ಕಾಳಜಿಯಿಂದ ತಮ್ಮ ಸ್ವಂತ ನಿವೇಶನ ಮಾರಿ, ಅದರಿಂದ ಬಂದ ಹಣದಿಂದ ಗಿಡಗಳನ್ನು ನೆಡಲು ವಿನಿಯೋಗಿಸಿದ್ದೇನೆ. ಇದನ್ನು ಕೆಲವು ಸಂಘ–ಸಂಸ್ಥೆಗಳು ಗುರುತಿಸಿ, ಕರೆದು ಗೌರವಿಸುತ್ತಿರುವುದು ಮತ್ತಷ್ಟು ಪರಿಸರ ಉಳಿವಿಗೆ ಕೆಲಸ ಮಾಡಲು ಉತ್ಸುಕನಾಗಿದ್ದೇನೆ ಎಂದರು.

2017ರಲ್ಲಿ ಡಾ.ರಾಜ್‌ಕುಮಾರ್ ಅವರ ಜನ್ಮದಿನದಂದು ಗಿಡಗಳನ್ನು ನೆಡಲು ಆರಂಭಿಸಿದೆ. ಮುಂದುವರೆದು ಚಾಮರಾಜನಗರದ ವಿವಿಧ ಸಾರ್ವಜನಿಕ ಜಾಗದಲ್ಲಿ ಗಿಡ ನೆಟ್ಟು ಪೋಷಿಸುತ್ತಿದ್ದೇನೆ. ಕೇವಲ ಗಿಡಗಳನ್ನು ನೆಡುವುದಲ್ಲದೆ, ಅವುಗಳನ್ನು ಪೋಷಿಸುವ ಸಂಕಲ್ಪ ತೊಟ್ಟಿದ್ದೇನೆ. ಇಲ್ಲಿಯವರೆಗೆ 17 ಸಾವಿರ ಗಿಡಗಳನ್ನು ನೆಟ್ಟಿದ್ದೇನೆ. ಮುಂದೆ ಲಕ್ಷ ಗಿಡ ನೆಡುವ ಗುರಿ ಹೊಂದಿದ್ದೇನೆ ಎಂದರು.

ಈಗಾಗಲೇ ನನ್ನ ಪರಿಸರ ಕಾಳಜಿಯನ್ನು ಗುರುತಿಸಿರುವ ರಾಜ್ಯ ಸರ್ಕಾರ, 2024–25ನೇ ಸಾಲಿನ ರಾಜ್ಯಮಟ್ಟದ ಪರಿಸರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಪ್ರಶಸ್ತಿ ಹಣವನ್ನು ಸೈನಿಕರ ಕಲ್ಯಾಣ ನಿಧಿಗೆ ಕೊಟ್ಟಿದ್ದೇನೆ. ಬಿಎಐ ಮೈಸೂರು ಘಟಕ ಪ್ರತಿ ತಿಂಗಳು ವಿವಿಧ ಸಾಧಕರನ್ನು ಗುರುತಿಸಿ ವೇದಿಕೆ ನೀಡುತ್ತಿರುವುದು ಉತ್ತಮ ಸಂಗತಿ ಎಂದರು.

ಈ ವೇಳೆ ಎಂಬಿಸಿಟಿ ಮ್ಯಾನೇಜಿಂಗ್ ಟ್ರಸ್ಟಿ ಎಸ್.ಸುಬ್ರಹ್ಮಣ್ಯ, ಬಿಎಐ ಮೈಸೂರು ಘಟಕದ ಛೇರ್ಮನ್ ಕೆ.ಆರ್.ಪ್ರಭಾಕರ್ ರಾವ್, ಗೌರವ ಕಾರ್ಯದರ್ಶಿ ಎಂ.ಡಿ. ಪ್ರವೀಣ್ ರೈ, ಡಬ್ಲ್ಯುಇಎಂ ಕಾರ್ಯದರ್ಶಿ ಎಸ್.ವಾಸುದೇವನ್ ಇದ್ದರು.

ಕಾನೂನು ಪಾಲಿಸುವುದಾಗಿ ಆರ್‌ಎಸ್‌ಎಸ್ ಘೋಷಿಸಲಿ



ಎನ್.ಭಾಸ್ಕರ್

ಮೈಸೂರು, ಜು.1(ಬಿಎಲ್‌ಯು)–ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾನೂನು ಪಾಲನೆ ಮಾಡುವುದಾಗಿ ಹೇಳಿರುವಂತೆ ಆರ್ ಎಸ್‌ಎಸ್ ಕೂಡ ಕಾನೂನು ಪಾಲಿಸುವುದಾಗಿ ಘೋಷಣೆ ಮಾಡಬೇಕು ಎಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಆರ್‌ಎಸ್‌ಎಸ್ ವಿರುದ್ಧ ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪದಡಿ ಪ್ರಿಯಾಂಕ್ ಖರ್ಗೆ ವಿರುದ್ಧ ದೂರು ದಾಖಲಿಸಲು ಬೆಂಗಳೂರು ನ್ಯಾಯಾಲಯ ಸೂಚನೆ ನೀಡಿದೆ. ನಾನು ಕಾನೂನು ಪಾಲಿಸುವುದಾಗಿ ಪ್ರಿಯಾಂಕ್ ಖರ್ಗೆ ಅವರು ಹೇಳಿದ್ದಾರೆ. ಇದೇ ರೀತಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಕೂಡ ಕಾನೂನು ಪಾಲಿಸುವುದಾಗಿ ಘೋಷಣೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಮಯೂರ ವರ್ಮ, ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಾತಃಸ್ಮರಣೀಯ ದೊರೆಗಳು

ಹೆಸರಾಂತ ಕವಿ ಜಯಪ್ಪ ಹೊನ್ನಾಳಿ ಅಭಿಮತ



ಜಯಪ್ಪ ಹೊನ್ನಾಳಿ

ಮೈಸೂರು, ಜು.1(ಜಿಎ)–ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ನನ್ನವ್ವ ಸಾಂಸ್ಕೃತಿಕ ಕಲಾತಂಡದ ವತಿಯಿಂದ ಕದಂಬ ದೊರೆ ಮಯೂರ ವರ್ಮ ಕುರಿತ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಹಾಗೂ ಕವಿ ಜಯಪ್ಪ ಹೊನ್ನಾಳಿ ಪ್ರಧಾನ ಭಾಷಣ ಮಾಡಿ, ಮಯೂರ ವರ್ಮ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕನ್ನಡ ನಾಡಿನ ಪ್ರಾತಃ ಸ್ಮರಣೀಯ ದೊರೆಗಳು. ಕನ್ನಡದ ಕೀರ್ತಿ ಪತಾಕೆಯನ್ನು ಮುಗಿಲೆತ್ತರಕ್ಕೆ ಹಾರಿಸಿ, ಕನ್ನಡದ ಅಸ್ಮಿತೆಯಾದ ಮಯೂರವರ್ಮ ಸ್ವಾಭಿಮಾನದ ಸಂಕೇತವಾಗಿದ್ದಾರೆ. ಕನ್ನಡ ಆಡಳಿತ ಭಾಷೆ ಮಾಡಿದ್ದು ಆತನ ಕಾಲದಲ್ಲಿಯೇ. ಅವರು ಜನಾನುರಾಗಿ ರಾಜರಾಗಿದ್ದರು ಎಂದು ಬಣ್ಣಿಸಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ ಮಾತನಾಡಿ, ಶಾಸ್ತ್ರೀಯ ಭಾಷೆ ಸಿಗಲು ಹಲ್ಮಿಡಿ ಶಾಸನ ಕಾರಣವಾಗಿದೆ. ಮಯೂರ ವರ್ಮ ಜೊತೆಗೆ ನಾಡಪ್ರಭು ಕೆಂಪೇಗೌಡ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕನ್ನಡನಾಡಿನ ಭವ್ಯ ಪರಂಪರೆಗೆ ಕಾರಣಕರ್ತರಾಗಿದ್ದಾರೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರುನಾಡ ರಕ್ಷಣಾ ವೇದಿಕೆ ರಾಜ್ಯ ಕಾರ್ಯದರ್ಶಿ ಸತೀಶ್ ಹೆಗ್ಗೂರು, ಸ್ವಾಭಿಮಾನಿ ಕನ್ನಡ ಮಹಿಳಾ ಉದ್ಯಮಿ ಮಾಮಾ ಮಿಲ್ಸ್‌ನ ಅನಿತಾ ಸದಾನಂದ, ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ನ.ಗಂಗಾಧರಪ್ಪ, ಕವಯತ್ರಿ ಪ್ರಭಾ ಶಾಸ್ತ್ರಿ ಜೋಶ್ಯುಲ, ನನ್ನವ್ವ ಸಾಂಸ್ಕೃತಿಕ ಕಲಾತಂಡದ ಸಂಸ್ಥಾಪಕ ವೈ.ಜಿ.ಮಹದೇವ್ ಹಾಗೂ ಜಿಲ್ಲೆಯ ವಿವಿಧೆಡೆಯಿಂದ ಬಂದಿದ್ದ ಸಾಹಿತ್ಯಾಸಕ್ತರು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು.

ನಕಲಿ ಮಂಕಿ 555 ಬ್ರಾಂಡ್ ಪೊರಕೆ ಮಾರಾಟ: ಪ್ರಕರಣ ದಾಖಲು

ಮೈಸೂರು,ಜು.1(ಜಿಎ)–ನಕಲಿ ಮಂಕಿ 555 ಬ್ರಾಂಡ್ ಪೊರಕೆ ಮಾರಾಟ ಮಾಡುತ್ತಿದ್ದ 2 ಅಂಗಡಿ ವಿರುದ್ಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಹಳೇ ಸಂತೇಪೇಟೆಯಲ್ಲಿ ನಕಲಿ ಮಂಕಿ 555 ಬ್ರಾಂಡ್ ಪೊರಕೆ ಮಾರಾಟ ಮಾಡುತ್ತಿರುವ ಖಚಿತ ಮಾಹಿತಿ ಮೇರೆಗೆ ಜೂ.30ರಂದು ಮಂಕಿ 555 ಸಂಸ್ಥೆಯ ಮ್ಯಾನೇಜರ್ ಹಳೇ ಸಂತೇಪೇಟೆಯ ಎರಡು ಅಂಗಡಿ ಗಳಿಗೆ ಭೇಟಿ ನೀಡಿದಾಗ ಮಂಕಿ 555 ಸಂಸ್ಥೆ ಪೊರಕೆಯ ಪ್ಯಾಕಿಂಗ್‌ನಲ್ಲಿ ನಕಲಿ ಪೊರಕೆಗಳನ್ನು ಮಾರಾಟ ಮಾಡುತ್ತಿರುವುದು ಧೃಡವಾಗಿದೆ. ನಂತರ ಮ್ಯಾನೇಜರ್ ಎರಡು ಅಂಗಡಿಯವರು ಸಂಸ್ಥೆಯ ಹೆಸರು ಬಳಸಿಕೊಂಡು ನಕಲಿ ಪೊರಕೆ ಮಾರಾಟ ಮಾಡಿ, ಅಕ್ರಮವಾಗಿ ಲಾಭ ಮಾಡಿಕೊಳ್ಳುತ್ತಿದ್ದಾರೆ ಎಂದು ದೂರು ಸಲ್ಲಿಸಿದ್ದಾರೆ.

ಬೈಕ್‌ಗಳ ನಡುವೆ ಡಿಕ್ಕಿ: ವಿದ್ಯಾರ್ಥಿ ಸಾವು

ಮೈಸೂರು, ಜು.1(ಜಿಎ)–ಎರಡು ಬೈಕ್‌ಗಳು ಮುಖಾಮುಖಿ ಡಿಕ್ಕಿಯಾದ ಪರಿಣಾಮ ವಿದ್ಯಾರ್ಥಿಯೋರ್ವ ಸ್ಥಳದಲ್ಲೇ ಮೃತಪಟ್ಟ ಘಟನೆ ಮೈಸೂರಿನ ಬನ್ನಿಮಂಟಪದಲ್ಲಿ ಮಂಗಳವಾರ ರಾತ್ರಿ ನಡೆದಿದೆ. ಚಾಮರಾಜನಗರ ಮೂಲದ ಬನ್ನಿಮಂಟಪದ ನಿವಾಸಿ ಉಮ್ರಾಜ್(18) ಮೃತ ಹಿಂಬದಿ ಸವಾರ. ಬೈಕ್ ಸವಾರ ಶ್ರೀರಂಗಪಟ್ಟಣದ ಉಸ್ಮಾನ್, ಬನ್ನಿಮಂಟಪದ ನಿವಾಸಿ ಬೈಕ್ ಸವಾರ ಸ್ಟೀಫನ್ ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳವಾರ ರಾತ್ರಿ 11 ಗಂಟೆ ಸಮಯದಲ್ಲಿ ಉಮ್ರಾಜ್, ಸ್ನೇಹಿತ ಉಸ್ಮಾನ್‌ನೊಂದಿಗೆ ಬೈಕಿನಲ್ಲಿ ಬನ್ನಿಮಂಟಪದ ಶಿವರಾತ್ರೀಶ್ವರನಗರ ರಸ್ತೆಯಲ್ಲಿ ಸಾಗುತ್ತಿದ್ದಾಗ ಎದುರಿಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿಯಾಗಿದೆ. ಇದರಿಂದ ಎರಡು ಬೈಕಿನ ಸವಾರರು ಗಾಯಗೊಂಡಿದ್ದರೆ, ಹಿಂಬದಿ ಸವಾರ ಉಮ್ರಾಜ್ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಎನ್.ಆರ್.ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.07.2026 ಗುರುವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ


■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.

■ **ಸುಯೋಗ್ ಆಸ್ಪತ್ರೆ :** ಮೂತ್ರಜನಕಾಂಗದ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಬಸವ ಬಳಗಗಳ ಒಕ್ಕೂಟ, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಅವರ ಜನ್ಮ ದಿನಾಚರಣೆ, ಕೃತಿ ಬಿಡುಗಡೆ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನ, ಸಾನ್ನಿಧ್ಯ : ಶ್ರೀ ನಟರಾಜ ಸ್ವಾಮೀಜಿ, ಕೃತಿ ಬಿಡುಗಡೆ : ಕವಿ ಕೆ.ಸಿ. ಶಿವಪ್ಪ, ಸಾಕ್ಷ್ಯಚಿತ್ರಕ್ಕೆ ಚಾಲನೆ : ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಮುಖ್ಯ ಅತಿಥಿಗಳು : ಹೆಚ್ಚುವರಿ ಆಯುಕ್ತ ಡಾ. ಪಿ. ಶಿವರಾಜ್, ಅಭಾವೀಅಂ ಮಹಾಸಭಾ ಅಧ್ಯಕ್ಷ ಎಚ್.ವಿ. ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಘದ ಅಧ್ಯಕ್ಷ ಡಾ.ಕೆ.ಬಿ. ಲಿಂಗರಾಜು, ಆಶಯ ನುಡಿ : ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಕಲಾಮಂದಿರ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ :** ಸಮಾವರ್ತನ ಪದವೀಧರರ ಸ್ವಾಗತ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಮುಖ್ಯ ಮಾಹಿತಿ ಆಯುಕ್ತೆ ಶ್ರೀಮತಿ ಜಿ. ಸತ್ಯವತಿ, ಅಧ್ಯಕ್ಷತೆ : ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಗೌರವ ಅತಿಥಿಗಳು: ಸಮ ಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಕುಲಸಚಿವ ಡಾ. ಬಿ. ಮಂಜುನಾಥ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಪದಸಂಸ್ಕೃತಿ –ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸುತ್ತಮುತ್ತ : ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ .ಸಿ ಹಾಗೂ ಅರ್ಚನಾ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಮತ್ತು ಸಂಜೆ 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ, 6.50 ಕೃಷಿರಂಗ– ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಹಣ್ಣು ಹೊನ್ನು–ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ, ತೆಂಗಿನಲ್ಲಿ ಅಂತರ ಬೆಳೆಯಾಗಿ ಸಂಬಾರ ಬೆಳೆಗಳ ಬೇಸಾಯ ಈ ಕುರಿತು ಚಾಮರಾಜನಗರ ತಾಲೂಕು ನಂಜೇದೇವನಪುರದ ಎನ್. ಜಿ. ಸಂತೋಷ್ ನಾಗ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ರಾಷ್ಟ್ರೀಯ ಪ್ರಾದೇಶಿಕ ಜನಪದ ಹಾಗೂ ಲಘುಸಂಗೀತ ಕಾರ್ಯಕ್ರಮ, ಅಮಲ್ ಆಂಟೋನಿ–ಸುಗಮ ಸಂಗೀತ ಹಾಗೂ ಮಾರ್ಗಿ ಮಧು–ಜನಪದ ಸಂಗೀತ

■ **ಜನಚೈತನ್ಯ ಫೌಂಡೇಷನ್ :** ಸಂಗೀತ ಲೋಕದ ಗಾನಕೋಗಿಲೆಗಳಾದ ಆಶಾ ಬೋಸ್ಲೆ ಮತ್ತು ಲತಾ ಮಂಗೇಶ್ಕರ್ ಅವರ ನೆನಪಿನಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಲೇಖಕ ಎಡೆಯೂರು ಸಮೀಉಲ್ಲಾ, ಡಾ. ಪೂರ್ಣಿಮಾ, ಆನಂದ್ ಶೆಟ್ಟಿ, ಟಿ.ಎನ್. ರವಿಶಂಕರ್, ಪ್ರಾಸ್ತಾವಿಕ ನುಡಿ : ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿಯವರ ಜಯಂತಿ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ, ಉದ್ಘಾಟನೆ ಹಾಗೂ ಉಪನ್ಯಾಸ : ಸಾಹಿತಿ ಡಾ.ಎಸ್.ಪಿ. ಉಮಾದೇವಿ ಅವರಿಂದ ಫ.ಗು. ಹಳಕಟ್ಟಿಯವರ ಜೀವನ ಮತ್ತು ಸಾಧನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಉಪಸ್ಥಿತರು : ಮುಖ್ಯ ನಿಲಯ ಪಾಲಕರಾದ ಶ್ರೀಮತಿ ಮಮತ ಸುರೇಶ್, ಸ್ಥಳ: ಶ್ರೀ ಮಂತ್ರಮಹರ್ಷಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಸಂಜೆ 5.30ಕ್ಕೆ.

ಮೈಸೂರು ಜಿಲ್ಲೆಯಲ್ಲಿ ಬರದ ಛಾಯೆ ಹಿನ್ನೆಲೆ

ಭತ್ತ ಬೆಳೆಯಲೇ ಬೇಡಿ; ಬೆಳೆದರೆ ನಷ್ಟ ಕಟ್ಟಿಟ್ಟ ಬುತ್ತಿ: ರೈತರಿಗೆ ಎಚ್ಚರಿಕೆ



- ಜಿಲ್ಲೆಯ 77 ಸಾವಿರ ಹೆಕ್ಟೇರ್‌ನಲ್ಲಿ ಭತ್ತದ ಬೆಳೆ
- ಪ್ರತಿ ವರ್ಷದ ಭತ್ತದ ಫಸಲು 4,81,255 ಮೆಟ್ರಿಕ್ ಟನ್
- ಆದರೆ ಈ ವರ್ಷ ಭತ್ತದಲ್ಲಿ ಭಾರೀ ಖೋತಾ ಸಾಧ್ಯತೆ
- 7 ವರ್ಷದ ನಂತರ ಬರಗಾಲದ ಲಕ್ಷಣ ಗೋಚರ
- ಮಳೆ ಇಲ್ಲದೆ ಬತ್ತಿ ಹೋಗಿರುವ ಜಲಾಶಯಗಳು

ಮೈಸೂರು,ಜು.1(ಬಿಎಲ್‌ಯು)–ಎಲ್ ನಿನೋ ಪರಿಣಾಮ ಈ ಬಾರಿ ಬರಗಾಲದ ಛಾಯೆ ಆವರಿಸಿದೆ. ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗದ ಕಾರಣ ನೀರಿಲ್ಲದೆ ಅನೇಕ ಕೆರೆಗಳು ಬತ್ತಿದ್ದು, ಭೂಮಿ ಬಿರುಕು ಬಿಟ್ಟಿದೆ. ಮುಂಗಾರು ಮಳೆ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಈ ವರ್ಷ ಭತ್ತ ಬೆಳೆಯದಂತೆ ಕೃಷಿ ಇಲಾಖೆ ರೈತರಿಗೆ ಗಂಭೀರ ಸಲಹೆ ನೀಡಿದೆ.

ಮೈಸೂರು ಜಿಲ್ಲೆಯಲ್ಲಿ ವಾಡಿಕೆ ಮಳೆ, ಈಗ ಬಿದ್ದಿರುವ ಮಳೆ, ಬಿತ್ತನೆಯ ಗುರಿ, ಈಗ ಬಿತ್ತನೆ ಮಾಡಿರುವ ಪ್ರದೇಶ ಸೇರಿದಂತೆ ಹಲವು ಮಾಹಿತಿಯನ್ನು ಕೃಷಿ ಇಲಾಖೆ ಅಂಕಿ ಅಂಶ ಸಹಿತ ನೀಡಿದ್ದು, ಇದನ್ನು ತಿಳಿಯುವ ಮೊದಲು ಬರಗಾಲದ ಇತಿಹಾಸ ಹಾಗೂ ಇಂದಿನ ಮಳೆ ಪರಿಸ್ಥಿತಿ ಅವಲೋಕಿಸುವುದು ಅತ್ಯಗತ್ಯ.

ಕರ್ನಾಟಕದಲ್ಲಿ ಸಮೃದ್ಧ ಮಳೆಯಾಗುತ್ತದೆ. ಆದರೆ ಕೆಲವು ವರ್ಷ ಬರಗಾಲ ಆವರಿಸಿ ರೈತಾಪಿ ವರ್ಗದವರು ಮಾತ್ರವಲ್ಲದೆ ಜನಸಾಮಾನ್ಯರನ್ನು ಸಂಕಷ್ಟಕ್ಕೆ ಸಿಲುಕಿಸುತ್ತದೆ. ರಾಜ್ಯದಲ್ಲಿ 2001, 2015 ಹಾಗೂ 2018ರಲ್ಲಿ ಬರಗಾಲ ಆವರಿಸಿತ್ತು.

ಬರಗಾಲ ಪರಿಸ್ಥಿತಿ ಇದ್ದ 2018 ರ ನಂತರ ರಾಜ್ಯದಲ್ಲಿ ಸಮೃದ್ಧ ಮಳೆಯಾಗಿ ಉತ್ತಮ ಬೆಳೆಯಿಂದ ರೈತರು ಸಂತೃಪ್ತರಾಗಿದ್ದರು. ಆದರೆ ಕಳೆದ 7 ವರ್ಷಗಳ ನಂತರ ಈಗ ಬರಗಾಲದ ಛಾಯೆ ಆವರಿಸಿದೆ. ಎಲ್ ನಿನೋ ಪರಿಣಾಮ ಮಳೆ ಕೈಕೊಟ್ಟಿದೆ, ಮುಂಗಾರಿನಲ್ಲಿ ಅರ್ಭಟಿಸಬೇಕಿದ್ದ ವರುಣ ಮುನಿಸಿಕೊಂಡಿದ್ದಾನೆ.

ಹೊಲ ಗದ್ದೆ ಉಳುಮೆ ಮಾಡಿ ಈಗಾಗಲೇ ಬಿತ್ತನೆ ಮಾಡಬೇಕಿದ್ದ ರೈತ ಮಳೆಯಿಲ್ಲದೆ ಚಿಂತಾಕ್ರಾಂತನಾಗಿದ್ದಾನೆ. ಯಾವಾಗ ಮಳೆಯಾಗುವುದೋ ಎಂದು ಆಕಾಶವನ್ನು ದಿಟ್ಟಿಸಿ ನೋಡುತ್ತಿದ್ದಾನೆ. ಆದರೆ ಮಳೆರಾಯ ಮಾತ್ರ ಕೃಪೆ ತೋರುತ್ತಿಲ್ಲ. ಜೂನ್ 4 ರಂದು ಕೇರಳ ಪ್ರವೇಶಿಸಿದ ಮುಂಗಾರು ಜೂನ್ 5 ರಂದು ಕರ್ನಾಟಕಕ್ಕೆ ಕಾಲಿಟ್ಟಿತು. ಇಷ್ಟೊತ್ತಿಗೆ ಭಾರೀ ಮಳೆಯಾಗಬೇಕಿತ್ತು. ಆದರೆ ಒಂದೆರಡು ದಿನ ಬಿದ್ದ ಮಳೆ ಹಾಗೆ ಮರೆಯಾಯಿತು. ಪ್ರತಿ ದಿನ ದಟ್ಟ ಮೋಡ ಆವರಿಸಿ ತುಂತುರು ಮಳೆಯಾಗುತ್ತಿದೆಯೇ ಹೊರತು ಬಾರೀ ಮಳೆಯಾಗುತ್ತಿಲ್ಲ.

> "ಈ ಬಾರಿ ಮುಂಗಾರು ಮಳೆ ಆಶಾದಾಯಕವಾಗಿಲ್ಲದ ಕಾರಣ ಭತ್ತ ಬೆಳೆಯುವುದು ಸೂಕ್ತವಲ್ಲ ಎಂದು ಈಗಾಗಲೇ ಸೂಚನೆ ನೀಡಲಾಗಿದೆ. ರೈತರಿಗೆ ಬೆಳೆ ಪರಿಹಾರ, ಬರಗಾಲದ ಪರಿಹಾರ ನೀಡಬೇಕಾದರೆ ಸರ್ಕಾರ ಬರಗಾಲವೆಂದು ಘೋಷಣೆ ಮಾಡಬೇಕು. ಬರಗಾಲವೆಂದು ಘೋಷಣೆ ಮಾಡಿದ ನಂತರ ಸರ್ಕಾರದ ನಿಯಮದಂತೆ ರೈತರಿಗೆ ಪರಿಹಾರ ದೊರೆಯುತ್ತದೆ.
> –ಕೆ.ಎಚ್.ರವಿ, ಜಂಟಿ ನಿರ್ದೇಶಕ, ಕೃಷಿ ಇಲಾಖೆ




ಇಷ್ಟೊತ್ತಿಗೆ ಕೆಆರ್‌ಎಸ್, ಕಬಿನಿ, ಹೇಮಾವತಿ, ಹಾರಂಗಿ ಸೇರಿದಂತೆ ಮೈಸೂರು ಭಾಗದ ಜಲಾಶಯಗಳು ತುಂಬಿ ತುಳುಕಬೇಕಿತ್ತು. ಆದರೆ, ಜೂನ್ ತಿಂಗಳು ಕಳೆದರೂ ಅಂದುಕೊಂಡಂತೆ ಮುಂಗಾರು ಅರ್ಭಟಿಸುತ್ತಿಲ್ಲ. ಇದರಿಂದ ಎಲ್ಲಾ ಜಲಾಶಯಗಳು ಬತ್ತಿ ಹೋಗಿದ್ದು, ಕುಡಿಯುವ ನೀರಿಗೂ ಏನಪ್ಪಾ ಎಂಬ ಚಿಂತೆ ಕಾಡುತ್ತಿದೆ. ಇದರಿಂದ ಈ ಬಾರಿ ಭತ್ತ ಬೆಳೆಯದಂತೆ ಕೃಷಿ ಇಲಾಖೆ ರೈತರಿಗೆ ಸಲಹೆ ನೀಡಿದೆ. ಒಂದು ವೇಳೆ ಭತ್ತ ಬಿತ್ತನೆ ಮಾಡಿದರೆ ನಷ್ಟ ಅನುಭವಿಸುತ್ತೀರಾ ಎಂದು ಎಚ್ಚರಿಕೆ ನೀಡಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಸರಗೂರು, ಹುಣಸೂರು, ಕೆ.ಆರ್.ನಗರ, ಸಾಲಿಗ್ರಾಮ, ಪಿರಿಯಾಪಟ್ಟಣ, ಮೈಸೂರು, ನಂಜನಗೂಡು ಹಾಗೂ ತಿ.ನರಸೀಪುರ ತಾಲೂಕುಗಳಲ್ಲಿ ನೀರಾವರಿಯಲ್ಲಿ 1,00,053 ಹೆಕ್ಟೇರ್, ಖುಷ್ಕಿಯಲ್ಲಿ 2,76,556 ಹೆಕ್ಟೇರ್ ಸೇರಿ ಒಟ್ಟು 3,76,609 ಹೆಕ್ಟೇರ್ ಪ್ರದೇಶಗಳಲ್ಲಿ ಬೆಳೆ ಬೆಳೆಯಲಾಗುತ್ತದೆ.

ಇದರಲ್ಲಿ ಜೂನ್ 30ರವರೆಗೆ ನೀರಾವರಿಯಲ್ಲಿ 7,454 ಹೆಕ್ಟೇರ್, ಖುಷ್ಕಿಯಲ್ಲಿ 1,55,972 ಹೆಕ್ಟೇರ್ ಸೇರಿ ಒಟ್ಟು 1,62,526 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಈ ಮೂಲಕ ಶೇ.42.15ರಷ್ಟು ಮಾತ್ರ ಬಿತ್ತನೆ ಮಾಡಲಾಗಿದೆ. ಉತ್ತಮ ಮಳೆಯಾಗಿದ್ದರೆ ಇಷ್ಟೊತ್ತಿಗೆ ಬಹುತೇಕ ಬಿತ್ತನೆ ಕಾರ್ಯ ಮುಗಿಯಬೇಕಿತ್ತು. ಆದರೆ ಶೇ.57.85ರಷ್ಟು ಪ್ರದೇಶದಲ್ಲಿ ಬಿತ್ತನೆಯೇ ಆಗಿಲ್ಲ. ಹವಾಮಾನ ಇಲಾಖೆ ನೀಡಿರುವ ಮಾಹಿತಿಯಂತೆ ಈ ವರ್ಷ ಮುಂಗಾರು ಮಳೆ ಆಶಾದಾಯಕವಾಗಿಲ್ಲ. ಭರ್ತಿಯಾಗಬೇಕಿದ್ದ ಜಲಾಶಯಗಳು ನೀರಿಲ್ಲದೆ ಬತ್ತಿ ಹೋಗಿವೆ. ಮುಂದಿನ ದಿನಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗುತ್ತದೆ ಎಂಬ ಆಶಾಭಾವನೆ ಇಲ್ಲ. ಆದ ಕಾರಣ ಭತ್ತವನ್ನು ಬೆಳೆಯಬೇಡಿ ಎಂದು ಕೃಷಿ ಇಲಾಖೆ ರೈತರಿಗೆ ಸಲಹೆ ನೀಡಿದೆ. ಭತ್ತದ ಬದಲು ಖುಷ್ಕಿ ಪ್ರದೇಶಗಳಲ್ಲಿ ಬೆಳೆಯುವ ರಾಗಿ, ಅಲಸಂದೆ, ಮುಸುಕಿನ ಜೋಳ, ಅವರೆ ಬೆಳೆಯುವಂತೆ ಕೃಷಿ ಇಲಾಖೆ ರೈತರಿಗೆ ಸೂಚಿಸಿದೆ.

ಮೈಸೂರು ಜಿಲ್ಲೆಯ 77 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ, 79 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯಲಾಗುತ್ತದೆ. ಆದರೆ, ಈ ಬಾರಿ ನಿರೀಕ್ಷಿತ ಮಟ್ಟದಲ್ಲಿ ಮುಂಗಾರು ಮಳೆ ಬೀಳದಿರುವ ಹಿನ್ನೆಲೆಯಲ್ಲಿ 77 ಸಾವಿರ ಪ್ರದೇಶದಲ್ಲಿ ಭತ್ತ ಬೆಳೆಯುತ್ತಿದ್ದ ರೈತರು ಭತ್ತ ಬಿಟ್ಟು ರಾಗಿ ಬೆಳೆಯಬೇಕು ಎಂದು ಕೃಷಿ ಇಲಾಖೆ ಸಲಹೆಯಿತ್ತಿದೆ. ಕೃಷಿ ಇಲಾಖೆ ನೀಡಿರುವ ಮಾಹಿತಿಯಂತೆ ಮೈಸೂರು ಜಿಲ್ಲೆಯಲ್ಲಿ ವರ್ಷಕ್ಕೆ 4,81,255 ಮೆಟ್ರಿಕ್ ಟನ್ ಭತ್ತ ಬೆಳೆಯಲಾಗುತ್ತದೆ. ಆದರೆ ಈ ಬಾರಿ ಮಳೆಯ ಕೊರತೆಯ ಕಾರಣ ಇಷ್ಟು ಪ್ರಮಾಣದ ಭತ್ತ ಕೋತಾ ಆಗುವ ಸಾಧ್ಯತೆ ಇದೆ.

ಕೆಆರ್‌ಎಸ್‌ನಲ್ಲಿ ಎರಡು ತಿಂಗಳಿಗೆ ಕುಡಿಯುವ ನೀರಿದೆ, ನಂತರ....



ಸದ್ಯ, ಕೆಆರ್‌ಎಸ್ ಜಲಾಶಯದಲ್ಲಿ ಇರುವ ನೀರು ಇನ್ನು ಎರಡು ತಿಂಗಳವರೆಗೆ ಮಾತ್ರ ಕುಡಿಯಲು ಸಾಕಾಗುತ್ತದೆ. ಮಳೆಯ ಪರಿಸ್ಥಿತಿ ಹೀಗೆ ಮುಂದುವರಿದರೆ ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ಇತರೆಡೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವ ಸಾಧ್ಯತೆ ಇದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದು 80.82 ಅಡಿಗಳಾಗಿದೆ. ಅಂದರೆ ಗರಿಷ್ಠ 49 ಟಿಎಂಸಿ ಸಂಗ್ರಹದ ಜಲಾಶಯದಲ್ಲಿ ಕೇವಲ 11 ಟಿಎಂಸಿ ಮಾತ್ರ ನೀರಿದೆ. ಕೆಆರ್‌ಎಸ್ ಜಲಾಶಯದಲ್ಲಿ ಡೆಡ್ ಸ್ಟೋರೇಜ್‌ವರೆಗೆ ಅಂದರೆ 60 ಅಡಿವರೆಗೆ ಇದ್ದು, ಇಷ್ಟು ಅಡಿವರೆಗೆ ಮಾತ್ರ ಕುಡಿಯುವ ನೀರನ್ನು ಸರಬರಾಜು ಮಾಡಲು ಸಾಧ್ಯ. ಅಂದರೆ ಡೆಡ್ ಸ್ಟೋರೇಜ್ ಬಿಟ್ಟು ಉಳಿಯುವ 20 ಅಡಿ ನೀರು 2 ತಿಂಗಳ ಕುಡಿಯುವ ನೀರಿಗೆ ಸಾಕಾಗುತ್ತದೆ. ಒಂದು ವೇಳೆ ನಿರೀಕ್ಷೆಯಂತೆ ಸ್ವಲ್ಪ ಮಟ್ಟಿಗಾದರೂ ಮಳೆಯಾಗದೆ ಕೆಆರ್‌ಎಸ್ ಡೆಡ್ ಸ್ಟೋರೇಜ್ ತಲುಪಿದರೆ ಕುಡಿಯುವ ನೀರಿಗೆ ಅಭಾವ ಉಂಟಾಗುತ್ತದೆ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,253 ಅಡಿಯಾಗಿದೆ. ಗರಿಷ್ಠ 19 ಟಿಎಂಸಿ ನೀರು ಸಂಗ್ರಹದ ಜಲಾಶಯದಲ್ಲಿ ಈಗ 5 ಟಿಎಂಸಿ ನೀರಿದೆ. ಇಲ್ಲಿ ಕೂಡ ಡೆಡ್ ಸ್ಟೋರೇಜ್ ಮಟ್ಟದವರೆಗೆ ಮೂರು ಟಿಎಂಸಿ ನೀರನ್ನು ಮಾತ್ರ ಬಳಕೆ ಮಾಡಿಕೊಳ್ಳಬಹುದು. ತುರುವಾಯ ಕಬಿನಿ ಜಲಾಶಯದಿಂದ ಕೂಡ ನೀರೆತ್ತಲು ಸಾಧ್ಯವಿಲ್ಲ.

299 ಎಂಎಂ ವಾಡಿಕೆ ಮಳೆಗೆ, 175 ಎಂಎಂ ಮಳೆ!

ಮೈಸೂರು ಜಿಲ್ಲೆಯಲ್ಲಿ ವಾಡಿಕೆಯಂತೆ ಇಷ್ಟೊತ್ತಿಗೆ 299 ಮಿಲಿ ಮೀಟರ್ ಮಳೆಯಾಗಬೇಕಿತ್ತು. ಆದರೆ, ಈಗ ಕೇವಲ 175 ಮಿಲಿ ಮೀಟರ್ ಮಳೆಯಾಗಿದೆ. ಈ ಮೂಲಕ 124 ಮಿಲಿ ಮೀಟರ್ ಮಳೆ ಕೊರತೆಯಾಗಿದ್ದು, ಇದರ ಪ್ರಮಾಣ ಶೇ.41ರಷ್ಟಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 299 ಮಿಲಿ ಮೀಟರ್ ವಾಡಿಕೆ ಮಳೆಗೆ 364 ಮಿಲಿ ಮೀಟರ್ ಮಳೆಯಾಗಿತ್ತು. ಅಂದರೆ 65 ಮಿಲಿ ಮೀಟರ್ ಹೆಚ್ಚು ಮಳೆಯಾಗಿತ್ತು. ಇದರ ಪ್ರಮಾಣ ಶೇ.27ರಷ್ಟಾಗಿತ್ತು. ಆದರೆ ಈ ಬಾರಿ ವಾಡಿಕೆ ಗಿಂತ ಹೆಚ್ಚು ಮಳೆ ಬರುವುದು ಬೇಡ, ವಾಡಿಕೆಯಷ್ಟೆ ಮಳೆ ಯಾದರೆ ಸಾಕು ಎಂದು ರೈತರು ವರುಣನನ್ನು ಬೇಡುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ವಾರ್ಷಿಕ 837 ಮಿಲಿ ಮೀಟರ್ ವಾಡಿಕೆ ಮಳೆಯಾಗಲಿದೆ. ಆದರೆ ಈ ವರ್ಷ ಇದರಲ್ಲಿ ಭಾರೀ ಖೋತಾ ಆಗುವ ಸಾಧ್ಯತೆ ಇದೆ.

ಯೋಗಕ್ಷೇಮ ವಿಚಾರಣೆ...



ಸರ್ಕಾರಿ ಕಾರ್ಯ ನಿಮಿತ್ತ ಮೈಸೂರಿನಿಂದ ಬೆಂಗಳೂರಿನ ಸಭೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಸಂದರ್ಭದಲ್ಲಿ ರಸ್ತೆ ಅಪಘಾತ ಸಂಭವಿಸಿ ಗಾಯಾಳುಗಳಾಗಿದ್ದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಪ್ರಕಾಶ್, ರೇವಣ್ಣ, ಕೃಷ್ಣ, ರಾಜು ಹಾಗೂ ಮಹೇಶ್ ಅವರನ್ನು ಮಾಜಿ ಸಚಿವ ಸುರೇಶ್‌ಕುಮಾರ್ ಭೇಟಿ ಮಾಡಿ ಅವರ ಯೋಗಕ್ಷೇಮ ವಿಚಾರಿಸಿದರು.

ನಾಳೆ ಕರೋಕೆ ಹಾಡುಗಾರಿಕೆ

ಮೈಸೂರು, ಜು.1(ಜಿಎ)–ಮೈಸೂರಿನ ಕೇವಲಿನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿಶೇಷ ಮಕ್ಕಳ ಪ್ರತಿಭೆ ಗುರುತಿಸಿ, ಪ್ರೋತ್ಸಾಹ ನೀಡಲು ಜು.3ರ ಸಂಜೆ 5 ರಿಂದ ರಾತ್ರಿ 8ರವರೆಗೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸಮಾವೇಶಾತ್ಮಕ ಕರೋಕೆ ಹಾಡುಗಾರಿಕೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷರಾದ ಇ. ಸೀಮಂತಿನಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐವರು ವಿಶೇಷ ಚೇತನ ಮಕ್ಕಳು ಹಾಗೂ ಐವರ ವಿವಿಧ ಕ್ಷೇತ್ರಗಳ ವೈದ್ಯರು ಪಾಲ್ಗೊಂಡು ಸುಮಾರು 30 ಹಾಡುಗಳನ್ನು ಹಾಡಲಿದ್ದಾರೆ. ಭಾವಗೀತೆ, ಚಿತ್ರಗೀತೆಯಂತಹವುಗಳಲ್ಲಿ ತಮಗೆ ಇಷ್ಟ ಬಂದ ಯಾವುದಾದರೊಂದನ್ನು ಪ್ರಸ್ತುತಪಡಿಸಲಿದ್ದಾರೆ ಎಂದರು. ವಿಶೇಷಚೇತನ ಮಕ್ಕಳ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸಿ, ಅಂತಹ ಮಕ್ಕಳ ಪ್ರತಿಭೆ ಗುರುತಿಸಿ, ವೃತ್ತಿಪರ ವ್ಯಕ್ತಿಗಳನ್ನು ಒಂದೇ ವೇದಿಕೆಗೆ ತರುವುದು, ಅಂತಹ ಮಕ್ಕಳ ಪೋಷಕರಿಗೆ ಅಂತಹ ಮಕ್ಕಳಿಗೆ ಅಗತ್ಯವಾಗಿರುವುದೇನು ಎಂಬ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಗುರಿ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಗೋಷ್ಠಿಯಲ್ಲಿ ಡಾ.ಜೀವನ್, ಸುನಿಲ್‌ಕುಮಾರ್ ಜೈನ್, ಅಮೋಘ್ ಮಧುಸೂದನ್ ಕಶ್ಯಪ್ ಇದ್ದರು.

ಎನ್ಯುಮರೇಷನ್ ಅರ್ಜಿ ವಿತರಣೆ...



ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬೂತ್ ನಂ.142 ಜಲಪುರಿ ಪೊಲೀಸ್ ಕ್ವಾರ್ಟರ್ಸ್‌ನಲ್ಲಿ (ಎಸ್‌ಐಆರ್) ಮನೆ ಮನೆಗೆ ತೆರಳಿ ಮತಪಟ್ಟಿ ಪರಿಶೀಲನೆ ಮಾಡಿ ಎನ್ಯುಮರೇಷನ್ ಅರ್ಜಿಗಳನ್ನು ವಿತರಿಸಲಾಯಿತು. ಈ ವೇಳೆ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಅಧ್ಯಕ್ಷ ಡಾ.ಅನಿಲ್ ಥಾಮಸ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಹೆಚ್.ಜಿ.ಗಿರಿಧರ್, ಎನ್‌ಆರ್.ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜು, ಮೈಸೂರು ನಗರ ಉಪಾಧ್ಯಕ್ಷ ಸು.ಮುರುಳಿ, ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಹಿತ್ ಡಿ., ಮುಖಂಡರಾದ ಮಣಿರತ್ನಮ್, ಮೋಹನ್, ಚರಣ್, ಬಿಎಲ್‌ಓ ಭಾಗ್ಯಮ್ಮ ಇನ್ನಿತರರಿದ್ದರು.

ಕಾಂಗ್ರೆಸ್ ಪಕ್ಷದ ಸ್ವತಂತ್ರ ಪೂರ್ವ ಹೋರಾಟದ ಶೇ.25ರಷ್ಟು ಕಲಿತುಕೊಂಡ್ರೆ ಖಾಕಿ ಚಡ್ಡಿ, ಕರಿ ಟೋಪಿ, ಕೈಯಲ್ಲಿ ದೊಣ್ಣೆ ಹಿಡ್ಕೊಂಡೋರು ಊರು ಬಿಟ್ಟು ಓಡಿ ಹೋಗ್ತಾರೆ!

ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ವ್ಯಂಗ್ಯೋಕ್ತಿ



ಬೆಂಗಳೂರು: ಕಾಂಗ್ರೆಸ್ ಪಕ್ಷದ ಸ್ವತಂತ್ರ ಪೂರ್ವದ ಇತಿಹಾಸದ ಶೇಕಡಾ 25ರಷ್ಟು ಕೇಳಿ ಕಲಿತುಕೊಂಡರೆ ಖಾಕಿ ಚಡ್ಡಿ, ಕರಿ ಟೋಪಿ, ಕೈಯಲ್ಲಿ ದೊಣ್ಣೆ ಇಟ್ಕೊಂಡವರು ಊರು ಬಿಟ್ಟು ಓಡಿ ಹೋಗ್ತಾರೆ. ಅವರ್‍ಯಾರು ಇತಿಹಾಸವನ್ನು ಕೇಳಿದರೆ ಇರುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಬಿ ಕೆ ಹರಿಪ್ರಸಾದ್ ಹೇಳಿದ್ದಾರೆ.

ಬೆಂಗಳೂರಿನ ಕಾಂಗ್ರೆಸ್ ಪಕ್ಷದ ಭಾರತ್ ಜೋಡೋ ಭವನದಲ್ಲಿ ನಡೆದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಖಾಕಿ ಚಡ್ಡಿ, ಕರಿ ಟೋಪಿ ಹಾಕಿದವರ ಬಗ್ಗೆ ಹೇಳಲು ಧೈರ್ಯ ಮಾಡಬೇಕು, ಅವರ ಬಗ್ಗೆ ಟೀಕೆ ಮಾಡಬೇಕೆಂದಲ್ಲ, ಸರ್ವಧರ್ಮ ಸಮಬಾಳು, ಸಮಪಾಲು ಎಂಬ ಮಹಾತ್ಮಾ ಗಾಂಧಿಯವರ ತತ್ವ ಸಿದ್ಧಾಂತವನ್ನು, ತ್ರಿವರ್ಣ ಧ್ವಜವನ್ನು ಮತ್ತು ದೇಶದ ಸಂವಿಧಾನವನ್ನು ಒಪ್ಪಿಕೊಂಡರೆ ನಾವು ಅವರನ್ನು ಟೀಕೆ ಮಾಡುವುದಿಲ್ಲ. ಅವರು ನಮ್ಮ ಶತ್ರುಗಳಲ್ಲ. ನಮ್ಮ ದೇಶದ ಪ್ರಜೆಗಳೇ ಎಂದರು.

ಆದರೆ ಸ್ವತಂತ್ರ ಭಾರತದ ಸಂವಿಧಾನದ ಭದ್ರ ಬುನಾದಿ, ಪ್ರಜಾತಂತ್ರ, ಜಾತ್ಯತೀತ ತತ್ವ, ಸಿದ್ಧಾಂತ ಬಗ್ಗೆ ಆರ್‌ಎಸ್‌ಎಸ್‌ನವರಿಗೆ ಗೌರವ ಇದ್ದರೆ ನಾವು ಅವರನ್ನು ವಿರೋಧ ಮಾಡುವುದಿಲ್ಲ ಎಂದು ಬಿ.ಕೆ.ಹರಿಪ್ರಸಾದ್ ಹೇಳಿದರು.

ನನ್ನನ್ನು ಆರ್‌ಎಸ್‌ಎಸ್ ವಿರೋಧಿ ಟೀಕಾಕಾರ ಎನ್ನುತ್ತಾರೆ. ಆದರೆ ಸ್ವತಂತ್ರ ಪೂರ್ವದಿಂದಲೂ ಆರ್‌ಎಸ್‌ಎಸ್ ನವರು ಈ ದೇಶದ ಆಶಯಗಳಿಗೆ ವಿರುದ್ಧವಾಗಿದ್ದಾರೆ. ಹೀಗಾಗಿ ನಾವು ಅವರನ್ನು ಅನಿವಾರ್ಯವಾಗಿ ವಿರೋಧ ಮಾಡಬೇಕಾಗುತ್ತದೆ ಎಂದರು.

ಹಜ್ ಯಾತ್ರೆ–2027; ಅರ್ಜಿ ಸಲ್ಲಿಕೆಗೆ ಜು.20 ಕೊನೆ ದಿನ



ಬೆಂಗಳೂರು, ಜು.1–ಮುಂದಿನ (2027ನೇ) ಸಾಲಿನಲ್ಲಿ ಪವಿತ್ರ ಹಜ್ ಯಾತ್ರೆ ಕೈಗೊಳ್ಳಲು ಬಯಸುವವರು ಹಜ್ ಅರ್ಜಿ ನಮೂನೆಗಳನ್ನು ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದೆ.

ಭಾರತದ ಹಜ್ ಸಮಿತಿಯ ಮಾಹಿತಿ ಪ್ರಕಾರ, ಅರ್ಜಿಗಳ ಸಲ್ಲಿಕೆಗೆ ಜು.20 ಕೊನೇ ದಿನ. ಆದುದರಿಂದ, 2027ರಲ್ಲಿ ಹಜ್ಗೆ ಹೋಗಲು ಉದ್ದೇಶಿಸಿರುವವರು ನಿಗದಿತ ಸಮಯಕ್ಕಿಂತ ಮೊದಲು ತಮ್ಮ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ರಾಜ್ಯ ಹಜ್ ಸಮಿತಿ ಅಧ್ಯಕ್ಷ ಝುಲ್ಫಿಕಾರ್ ಅಹ್ಮದ್ ಖಾನ್ ವಿನಂತಿಸಿದ್ದಾರೆ.

ಅರ್ಜಿ ಸಲ್ಲಿಸಲು ಬಯಸುವವರು ಅಂತಾರಾಷ್ಟ್ರೀಯ ಪಾಸ್ಪೋರ್ಟ್ ಹೊಂದಿರುವುದು ಅವಶ್ಯಕ. ನಿಮ್ಮ ಬಳಿ ಪಾಸ್‌ಪೋರ್ಟ್ ಇಲ್ಲದಿದ್ದರೆ, ಸಾಧ್ಯವಾದಷ್ಟು ಬೇಗ ಪಾಸ್ಪೋರ್ಟ್ ಪಡೆಯಲು ಕ್ರಮ ತೆಗೆದುಕೊಳ್ಳಿ, ಡಿಸೆಂಬರ್ 21, 2027 ರೊಳಗೆ ಪಾಸ್ಪೋರ್ಟ್ ಅವಧಿ ಮುಗಿಯುತ್ತಿದ್ದರೆ, ಸಾಧ್ಯವಾದಷ್ಟು ಬೇಗ ಅದನ್ನು ನವೀಕರಿಸಿ. ಈ ಬಗ್ಗೆ ಯಾವುದೇ ತೊಂದರೆಗಳನ್ನು ಎದುರಿಸುತ್ತಿದ್ದರೆ, ಬೆಂಗಳೂರಿನ ರಾಜ್ಯ ಹಜ್ ಸಮಿತಿ ಕಚೇರಿ ಸಮಯ ಬೆಳಗ್ಗೆ 10:30ರಿಂದ ಸಂಜೆ 5:30ರೊಳಗೆ ಸಂಪರ್ಕಿಸಬಹುದು, ಮಾಹಿತಿಗೆ ಮೊ.ಸಂ. 7892189162 / 9483503132, ಅರ್ಜಿಗಳನ್ನು ಸಲ್ಲಿಸಲು https://www.hajcommittee.gov.in ಸಂಪರ್ಕಿಸಬಹುದು.

ಮೈಸೂರು ವಿವಿ ಪತ್ರಿಕೋದ್ಯಮ ಪ್ರಾಧ್ಯಾಪಕ ಡಾ.ಪುಟ್ಟಸ್ವಾಮಿಗೆ ಬೀಳ್ಕೊಡುಗೆ

ಮೈಸೂರು, ಜು.1(ಎಂಟಿವೈ)–ವಿದ್ಯಾರ್ಥಿ ಸ್ನೇಹಿ, ಉತ್ತಮ ಪ್ರಾಧ್ಯಾಪಕ ರೆಂದೇ ಹೆಸರು ಮಾಡಿದ್ದ ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕ ಡಾ.ಸಿ.ಕೆ.ಪುಟ್ಟಸ್ವಾಮಿ ವಯೋ ನಿವೃತ್ತಿ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಿ, ಆತ್ಮೀಯವಾಗಿ ಬೀಳ್ಕೊಡಲಾಯಿತು.



ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕ ಡಾ.ಸಿ.ಕೆ.ಪುಟ್ಟಸ್ವಾಮಿ–ಬಿಂದುಮತಿ ದಂಪತಿಯನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು ವಿಶ್ವವಿದ್ಯಾಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದಿಂದ ಮಾನಸಗಂಗೋತ್ರಿಯ ವಿಜ್ಞಾನ ವಿಭಾಗದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ವಿಭಾಗದ ನಿವೃತ್ತ ಪ್ರಾಧ್ಯಾಪಕರು, ಪ್ರಾಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಪ್ರೊ.ಸಿ.ಕೆ. ಪುಟ್ಟಸ್ವಾಮಿ ಅಭಿನಂದಿಸುವ ಮೂಲಕ ನಿವೃತ್ತಿ ನಂತರದ ಜೀವನ ಸುಃಖಕರವಾಗಿರಲಿ ಎಂದು ಶುಭಹಾರೈಸಿದರು.

ನಿವೃತ್ತ ಪ್ರಾಧ್ಯಾಪಕಿ ಡಾ.ಎನ್.ಉಷಾರಾಣಿ ಮಾತನಾಡಿ, ಪುಟ್ಟಸ್ವಾಮಿ ನನ್ನ ವಿದ್ಯಾರ್ಥಿ. ನನ್ನ ಬಳಿಯೇ ಪಿಹೆಚ್‌ಡಿ ಪಡೆದರು. ಉತ್ತಮ ಪ್ರಬಂಧ ಮಂಡನೆ ಮಾಡಿದರು. ಬಡ ಕುಟುಂಬದಿಂದ ಬಂದ ಅವರು, ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿ, ಪರಿಶ್ರಮ ಮೈಗೂಡಿಸಿಕೊಂಡಿದ್ದರಿಂದಲೇ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ನೇಮಕವಾಗಲು ಸಾಧ್ಯವಾಯಿತು. ವಿಭಾಗದಲ್ಲಿ ಗೌರವಯುತವಾಗಿ ನಡೆದುಕೊಂಡ ಪ್ರಾಧ್ಯಾಪಕ. ನಾವು ಏನೇ ಕೆಲಸ ವಹಿಸಿದರೂ ಜವಾಬ್ದಾರಿ ತೆಗೆದುಕೊಂಡು ಮಾಡುತ್ತಿದ್ದರು. ರಾಜ್ಯ ಸಣ್ಣ ಪತ್ರಿಕೆಗಳ ಕುರಿತಾದ ಅವರ ಸಂಶೋಧನಾ ಗ್ರಂಥದ ದತ್ತಾಂಶ ಇಂದಿಗೂ ಅನ್ವಯಿಸಲಿದ್ದು, ಅದನ್ನು ಪುಸ್ತಕವಾಗಿ ಪ್ರಕಟಿಸಿದರೆ ಸೂಕ್ತ ಎಂದು ಸಲಹೆ ನೀಡಿದರು.

ವಿಭಾಗದ ಪ್ರಾಧ್ಯಾಪಕ ಡಾ.ನಿರಂಜನ ವಾನಳ್ಳಿ ಮಾತನಾಡಿ, ಅಧ್ಯಾಪಕ ಎಷ್ಟೇ ಚೆನ್ನಾಗಿ ಪಾಠ ಮಾಡಿದರೂ ಅತ್ಯುತ್ತಮ ಪ್ರಾಧ್ಯಾಪಕನಾಗಲು ಸಾಧ್ಯವಿಲ್ಲ. ಬದಲಿಗೆ ವ್ಯಕ್ತಿತ್ವದಲ್ಲಿ ಮಾದರಿಯಾಗಿ ಬದುಕಬೇಕು. ವಿದ್ಯಾರ್ಥಿಗಳೊಂದಿಗೆ ಉತ್ತಮ ಒಡನಾಡಿಯಾಗಿ ಅವರ ಕಷ್ಟದ ಅರಿವು ಹೊಂದಿರಬೇಕು. ಈ ಸಾಲಿನಲ್ಲಿ ಪುಟ್ಟಸ್ವಾಮಿ ನಿಲ್ಲುತ್ತಾರೆ. ಬಡ ವಿದ್ಯಾರ್ಥಿಗಳಿಗೆ ಶುಲ್ಕ ಕಟ್ಟಲು ಹಣವಿಲ್ಲದಿದ್ದಾಗ ಅವರ ಶುಲ್ಕವನ್ನು ಇವರೇ ಪಾವತಿಸಿದ್ದಾರೆ. ಬಡ ಕುಟುಂಬದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡಿ, ಅವರ ಶೈಕ್ಷಣಿಕ ಜೀವನಕ್ಕೆ ದಾರಿದೀಪವಾಗಿದ್ದಾರೆ ಎಂದು ಹೇಳಿದರು.

ಸಹಪಾಠಿಗಳಿಂದ ಶ್ರೀಯುತರ ಗುಣಗಾನ


ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಪುಟ್ಟಸ್ವಾಮಿ ಅವರು ಮಿತ ಭಾಷಿ, ಒಳ್ಳೆಯ ಅಧ್ಯಾಪಕರಾಗಿದ್ದರು. ಅವರ ಮನೆಯ ಸ್ಥಿತಿಯ ಜತೆಗೆ ಮನಸ್ಥಿತಿ ಉತ್ತಮವಾಗಿದ್ದರಿಂದ ಒಳ್ಳೆಯ ಪ್ರಾಧ್ಯಾಪಕರಾಗಿ ರೂಪುಗೊಳ್ಳಲು ಕಾರಣವಾಗಿದೆ ಎಂದರು.

ವಿಭಾಗದ ಮುಖ್ಯಸ್ಥೆ ಪ್ರೊ.ಎನ್. ಮಮತಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕಿ ಡಾ.ಎಂ.ಎಸ್. ಸಪ್ನಾ ಪ್ರಾಸ್ತಾವಿಕ ಭಾಷಣ ಮಾಡಿ, ಸ್ವಾಗತಿಸಿದರು. ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಜೆ. ಜೋಸೆಫ್, ಪ್ರೊ.ಸಿ.ರಾಮಸ್ವಾಮಿ, ಡಾ.ಬಿ.ಎಸ್.ಚೆನ್ನಕೇಶವಮೂರ್ತಿ, ಶೈಲಶ್ರೀ ಮಾತನಾಡಿದರು. ನವೀನ್ ನಿರೂಪಿಸಿದರು. ಕೆ.ಎಸ್.ಕುಮಾರಸ್ವಾಮಿ ವಂದಿಸಿದರು. ಈ ವೇಳೆ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳು, ಸಂಶೋಧಕರು, ಹಿರಿಯ ವಿದ್ಯಾರ್ಥಿಗಳು, ಸಿಬ್ಬಂದಿ, ಇಎಂಎಂಆರ್‌ಸಿ ನಿರ್ದೇಶಕರು ಮತ್ತು ಸಿಬ್ಬಂದಿ ಸೇರಿದಂತೆ ಹಲವು ಮಂದಿ ಪಾಲ್ಗೊಂಡಿದ್ದರು.

ದೇಶ – ವಿದೇಶ

ಗೋಹತ್ಯೆ ಸಂಪೂರ್ಣ ನಿಷೇಧ ಪ್ರಶ್ನಿಸಿದ ತಮಿಳುನಾಡು ಸರ್ಕಾರ

ಚೆನ್ನೈ: ರಾಜ್ಯದಲ್ಲಿ ಗೋಹತ್ಯೆಗೆ ಸಂಪೂರ್ಣ ನಿಷೇಧವನ್ನು ವಿಧಿಸುವ ಮದ್ರಾಸ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ತಮಿಳುನಾಡು ಸರಕಾರವು ಸುಪ್ರೀಂಕೋರ್ಟ್ ಮೆಟ್ಟಿಲೇರಿದೆ.



ತಮಿಳುನಾಡು ಪ್ರಾಣಿ ಸಂರಕ್ಷಣಾ ಕಾಯಿದೆ–1958ರ ಸೆಕ್ಷನ್ 4ರ ಅಡಿಯಲ್ಲಿ 10 ವರ್ಷಕ್ಕಿಂತ ಮೇಲ್ಪಟ್ಟಿದ್ದರೆ ಅಂತಹ ಹಸುವನ್ನು ವಧೆ ಮಾಡಲು ಅವಕಾಶ ನೀಡುತ್ತದೆ ಆದರೆ ಹೈಕೋರ್ಟ್ ಆದೇಶವು ತಮಿಳುನಾಡು ಪ್ರಾಣಿ ಸಂರಕ್ಷಣಾ ಕಾಯಿದೆ 1958ರ ನಿಯಮಗಳಿಗೆ ವಿರುದ್ಧವಾಗಿದೆ ಎಂದು ರಾಜ್ಯವು ವಾದಿಸಿದೆ. ರಾಜ್ಯ ಸರಕಾರವು ತನ್ನ ಮನವಿಯಲ್ಲಿ, ಹೈಕೋರ್ಟ್ ಗೋಹತ್ಯೆ ನಿಷೇಧವನ್ನು ನಿರ್ದೇಶಿಸುವ ಮೂಲಕ ಕಾನೂನಿನ ಚೌಕಟ್ಟನ್ನು ಮೀರಿದೆ ಎಂದು ವಾದಿಸಿದೆ. ಮೇ 27ರಂದು ನ್ಯಾಯಮೂರ್ತಿ ಜಿಆರ್ ಸ್ವಾಮಿನಾಥನ್ ಮತ್ತು ನ್ಯಾಯಮೂರ್ತಿ ಲಕ್ಷ್ಮೀನಾರಾಯಣ ಅವರ ವಿಭಾಗೀಯ ಪೀಠವು, ಗೊತ್ತುಪಡಿಸಿದ ಕಸಾಯಿಖಾನೆಗಳಲ್ಲಿ ಮಾತ್ರ ಪ್ರಾಣಿ ವಧೆಗೆ ಅವಕಾಶ ನೀಡಬೇಕು. ಬಕ್ರೀದ್ ಅಥವಾ ಇನ್ಯಾವುದೇ ದಿನದಲ್ಲಿ ಗೋಹತ್ಯೆ ಮಾಡದಂತೆ ಕ್ರಮಕೈಗೊಳ್ಳಬೇಕು ಎಂದು ರಾಜ್ಯದ ಮುಖ್ಯ ಕಾರ್ಯದರ್ಶಿ, ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿತ್ತು. ಹಿಂದೂ ಮಕ್ಕಳ್ ಕಚ್ಚಿಯ ಪ್ರಧಾನ ಕಾರ್ಯದರ್ಶಿ ಸೂರ್ಯ ಪ್ರಶಾಂತ್ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ವಿಚಾರಣೆ ನಡೆಸಿದ್ದ ಕೋರ್ಟ್ ಈ ಆದೇಶ ನೀಡಿತ್ತು.

ಅಮೆರಿಕ, ಕೆನಡಾಕ್ಕೂ ಬಿಸಿಗಾಳಿ ಭೀತಿ: ಫಿಫಾ ವಿಶ್ವಕಪ್ ಮೇಲೆ ಪರಿಣಾಮ?

ವಾಷಿಂಗ್ಟನ್: ಯುರೋಪಿನಲ್ಲಿ ದಾಖಲೆ ಮಟ್ಟದ ಬಿಸಿಗಾಳಿ ಆತಂಕ ಸೃಷ್ಟಿಸಿರುವ ಬೆನ್ನಲ್ಲೇ ಅಮೆರಿಕ ಮತ್ತು ಕೆನಾಡದಲ್ಲೂ ಬಿಸಿಗಾಳಿಯ ಎಚ್ಚರಿಕೆ ನೀಡಲಾಗಿದೆ. ಅಮೆರಿಕದಲ್ಲಿ ಸುಮಾರು 12 ಕೋಟಿ ಮಂದಿಗೆ ಬಿಸಿಗಾಳಿಯ ಪರಿಣಾಮ ತಟ್ಟಲಿದೆ ಎಂದು ರಾಷ್ಟ್ರೀಯ ಹವಾಮಾನ ಸೇವೆ ಮುನೆಚ್ಚರಿಕೆ ನೀಡಿದೆ. ಅಮೆರಿಕದ ಪೂರ್ವ ಕರಾವಳಿಯಿಂದ ದೇಶದ ಮಧ್ಯ ಭಾಗದವರೆಗೆ ವ್ಯಾಪಕ ಪ್ರದೇಶದಲ್ಲಿ ಬಿಸಿಗಾಳಿ ತೀವ್ರಗೊಳ್ಳಲಿದೆ. ಹೀಟ್ ಡೋಮ್ ಪರಿಣಾಮದಿಂದ ಉಂಟಾಗಿರುವ ಈ ಬಿಸಿಗಾಳಿಯು ಗುರುವಾರದ ವೇಳೆಗೆ ಮಿಡ್‌ವೆಸ್ಟ್ ಹಾಗೂ ಮಿಸಿಸಿಪ್ಪಿ ಕಣಿವೆ ಪ್ರದೇಶದಲ್ಲಿ ತೀವ್ರವಾಗಲಿದ್ದು, ನಂತರ ಓಹಿಯೊ ಕಣಿವೆ ಮತ್ತು ಪೂರ್ವ ಕರಾವಳಿಯತ್ತ ವಿಸ್ತರಿಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಹಲವು ಪ್ರದೇಶಗಳಲ್ಲಿ 35ರಿಂದ 40.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗುವ ಸಾಧ್ಯತೆ ಇದೆ. ಹೆಚ್ಚಿನ ತೇವಾಂಶದಿಂದ ಜನರು ಅನುಭವಿಸುವ ಉಷ್ಣಾಂಶ (ಹೀಟ್ ಇಂಡೆಕ್ಸ್) 46 ಡಿಗ್ರಿ ಸೆಲ್ಸಿಯಸ್‌ವರೆಗೆ ತಲುಪಬಹುದು ಎಂದು ಮುನ್ಸೂಚನೆ ನೀಡಲಾಗಿದೆ. ಗುರುವಾರ ಮತ್ತು ಶುಕ್ರವಾರ ಹಲವು ನಗರಗಳಲ್ಲಿ ದೈನಂದಿನ ತಾಪಮಾನ ದಾಖಲೆಗಳು ಮುರಿಯುವ ಸಾಧ್ಯತೆ ಇದ್ದು, ಕೆಲವು ಪ್ರದೇಶಗಳಲ್ಲಿ ಮಾಸಿಕ ಹಾಗೂ ಸಾರ್ವಕಾಲಿಕ ದಾಖಲೆಗಳೂ ನಿರ್ಮಾಣವಾಗುವ ನಿರೀಕ್ಷೆ ಇದೆ.


ಆಪ್ ನಿಜವಾದ ಸನಾತನ ಪಕ್ಷ, ಬಿಜೆಪಿ ಮತಕ್ಕಾಗಿ ರಾಮನ ಹೆಸರನ್ನು ಬಳಸಿದೆ

ಹೊಸದಿಲ್ಲಿ: ಆಮ್ ಆದ್ಮಿ ಪಕ್ಷವು ನಿಜವಾದ ಸನಾತನ ಪಕ್ಷವಾಗಿದ್ದು, ಸನಾತನ ಧರ್ಮದ ಮೌಲ್ಯಗಳಿಗಾಗಿ ನಿಜವಾದ ಭಕ್ತಿಯಿಂದ ಕೆಲಸ ಮಾಡಿದೆ ಎಂದು ಆಪ್ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಹೇಳಿದ್ದಾರೆ. ಬಿಜೆಪಿಯು ರಾಜಕೀಯ ಲಾಭಕ್ಕಾಗಿ ರಾಮನ ಹೆಸರನ್ನು ಬಳಸಿಕೊಂಡಿದೆ ಎಂದು ಆರೋಪಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅರವಿಂದ್ ಕೇಜ್ರಿವಾಲ್, ಬಿಜೆಪಿ ನಾಯಕರು ತಮ್ಮ ಭಾಷಣಗಳು ಹಾಗೂ ಚುನಾವಣಾ ಪ್ರಚಾರದಲ್ಲಿ ಶ್ರೀರಾಮ ಮತ್ತು ರಾಮಮಂದಿರದ ಹೆಸರನ್ನು ಆಗಾಗ ಪ್ರಸ್ತಾಪಿಸುತ್ತಾರೆ. ಆದರೆ, ಪಕ್ಷದ ಹಿರಿಯ ನಾಯಕರು ರಾಮಮಂದಿರಕ್ಕೆ ತೆರಳಿ ಶ್ರೀರಾಮನ ದರ್ಶನ ಪಡೆದು ಪ್ರಾರ್ಥನೆ ಸಲ್ಲಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು. ಬಿಜೆಪಿ ಶ್ರೀರಾಮನ ಹೆಸರಿನಲ್ಲಿ ಮತ ಕೇಳುತ್ತದೆ. ಆದರೆ, ಅವರನ್ನು ದೇವರೆಂದು ನಂಬಲ್ಲ. ರಾಮಮಂದಿರದ ದೇಣಿಗೆ ದುರುಪಯೋಗ ಘಟನೆಯಿಂದ ದೇಶದ ಎಲ್ಲ ಸನಾತನಿಗಳಿಗೆ ನೋವುಂಟಾಗಿದೆ. ಇದರ ಪರಿಣಾಮವಾಗಿ ಬಿಜೆಪಿ ಕೇಂದ್ರದಲ್ಲಿ ಹಾಗೂ ಉತ್ತರ ಪ್ರದೇಶದಲ್ಲಿ ಅಧಿಕಾರ ಕಳೆದುಕೊಳ್ಳಲಿದೆ. ರಾಮಮಂದಿರ ಉದ್ಘಾಟನೆಯಾದ ನಂತರ 2 ವರ್ಷಗಳಲ್ಲಿ ಬಿಜೆಪಿಯ ಯಾವುದೇ ಹಿರಿಯ ನಾಯಕ ರಾಮಮಂದಿರಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದು ಹೇಳಿದ್ದಾರೆ.



4 ಭಾರತೀಯ ಕಂಪನಿಗಳ ಮೇಲಿನ ನಿರ್ಬಂಧ ತೆರವುಗೊಳಿಸಿದ ಅಮೆರಿಕ..!

ವಾಷಿಂಗ್ಟನ್: ರಷ್ಯಾದ ಮಿಲಿಟರಿ–ಕೈಗಾರಿಕಾ ವಲಯಕ್ಕೆ ತಂತ್ರಜ್ಞಾನ ಮತ್ತು ಉಪಕರಣಗಳನ್ನು ಪೂರೈಸಿದ ಆರೋಪದ ಹಿನ್ನೆಲೆಯಲ್ಲಿ ಭಾರತದ 4 ಕಂಪನಿಗಳ ಮೇಲೆ ವಿಧಿಸಲಾಗಿದ್ದ ನಿರ್ಬಂಧಗಳನ್ನು ಅಮೆರಿಕ ಸರ್ಕಾರ ಹಿಂತೆಗೆದುಕೊಂಡಿದೆ. ಅಮೆರಿಕದ ಹಣಕಾಸು ಇಲಾಖೆ ಪ್ರಕಟಿಸಿರುವ ಮಾಹಿತಿ ಪ್ರಕಾರ, ಈ 4 ಕಂಪನಿಗಳನ್ನು ಆಫೀಸ್ ಆಫ್ ಫಾರಿನ್ ಅಸೆಟ್ ಕಂಟ್ರೋಲ್‌ನ ಸ್ಪೆಷಲ್ ಡಿಸಿಗ್ನೇಟೆಡ್ ನ್ಯಾಷನಲ್ಸ್ ಅಂಡ್ ಬ್ಲಾಕ್ಡ್ ಪರ್ಸನ್ಸ್) ಪಟ್ಟಿಯಿಂದ ತೆಗೆದುಹಾಕಲಾಗಿದೆ. ಹೈದರಾಬಾದ್ ಮೂಲದ ಆರ್.ಆರ್.ಜಿ ಇಂಜಿನಿಯರಿಂಗ್ ಟೆಕ್ನಾಲಜೀಸ್ ಪ್ರೈ.ಲಿ., ಲೋಕೇಶ್ ಮಷೀನ್ಸ್ ಲಿ., ಅಹಮದಾಬಾದ್‌ನ ಗ್ಯಾಲಕ್ಸಿ ಬೇರಿಂಗ್ಸ್ ಲಿ. ಹಾಗೂ ನವದೆಹಲಿ ಮೂಲದ ಶೌರ್ಯ ಏರೋನಾಟಿಕ್ಸ್ ಪ್ರೈ.ಲಿ. ನಿರ್ಬಂಧಗಳಿಂದ ಮುಕ್ತಗೊಂಡ ಕಂಪನಿಗಳಾಗಿವೆ. ಗ್ಯಾಲಕ್ಸಿ ಬೇರಿಂಗ್ಸ್ ಲಿಮಿಟೆಡ್ ಕಂಪನಿಯು ರಷ್ಯಾದ ಸಂಸ್ಥೆಗಳಿಗೆ ರೋಲರ್ ಬೇರಿಂಗ್‌ಗಳು ಹಾಗೂ ರೋಲರ್ ಅಸೆಂಬ್ಲಿಗಳಂತಹ ದ್ವಿಪಯೋಗಿ ವಸ್ತುಗಳನ್ನು ರಫ್ತು ಮಾಡಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ 2024ರ ಅಕ್ಟೋಬರ್‌ನಲ್ಲಿ ಅಮೆರಿಕ ನಿರ್ಬಂಧ ವಿಧಿಸಿತ್ತು. ಇನ್ನು ಶೌರ್ಯ ಏರೋನಾಟಿಕ್ಸ್ ಪ್ರೈ.ಲಿ. ಕಂಪನಿಯು ರಷ್ಯಾಕ್ಕೆ ರಾಡಾರ್ ಉಪಕರಣಗಳು, ರೇಡಿಯೋ ನ್ಯಾವಿಗೇಷನ್ ವ್ಯವಸ್ಥೆಗಳು, ರಿಮೋಟ್ ಕಂಟ್ರೋಲ್ ಸಾಧನಗಳು ಹಾಗೂ ಇತರೆ ವಿದ್ಯುತ್ ಉಪಕರಣಗಳನ್ನು ಪೂರೈಸಿದೆ ಎಂಬ ಆರೋಪ ಹೊತ್ತಿತ್ತು.



ರಾಮಮಂದಿರದಲ್ಲಿ ಕಳ್ಳತನ ಮಾಡ್ಡೋರು ಕ್ಯಾನ್ಸರ್ ಬಂದು ಸಾಯುತ್ತಾರೆ?

ಉತ್ತರ ಪ್ರದೇಶ: ಅಯೋಧ್ಯೆಯ ರಾಮ ಮಂದಿರದಲ್ಲಿ ದೇಣಿಗೆ ದುರುಪಯೋಗದಲ್ಲಿ ಭಾಗಿಯಾಗಿರುವವರು ಕ್ಯಾನ್ಸರ್‌ನಿಂದ ಬಳಲಿ, ನೋವಿನಿಂದಲೇ ಸಾಯುತ್ತಾರೆ ಎಂದು ಬಿಜೆಪಿ ಶಾಸಕರೊಬ್ಬರು ಹೇಳಿರುವುದು ವೈರಲ್ ಆಗಿದೆ. ಉನ್ನಾವೋ ಜಿಲ್ಲೆಯ ಪೂರ್ವಾ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಅನಿಲ್ ಸಿಂಗ್ ಮೌರವಾನ್‌ನಲ್ಲಿ ನಡೆದ ಬಿಜೆಪಿ ಕಾರ್ಯಕ್ರಮದಲ್ಲಿ ಈ ಹೇಳಿಕೆ ನೀಡಿದ್ದಾರೆ.



ರಾಮನ ದೇವಸ್ಥಾನದಿಂದ ಕಳ್ಳತನ ಮಾಡಿದವರಿಗೆ ನೇರವಾಗಿ ಕ್ಯಾನ್ಸರ್ ಬರುತ್ತದೆ. ಅದು ದೇವರಿಂದ ಮರಣ ದಂಡನೆಯಾಗುತ್ತದೆ. ಒಂದು ವರ್ಷ ಕಾಯಿರಿ, ಅವರಿಗೆ ಕ್ಯಾನ್ಸರ್ ಬರುತ್ತದೆ ಎಂದು ಹೇಳುತ್ತಿರುವುದು ವಿಡಿಯೋದಲ್ಲಿ ಸೆರೆಯಾಗಿದೆ. ಸರ್ಕಾರವು ಹೊಣೆಗಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತದೆ. ಆದರೆ, ರಾಮನು ಅವರನ್ನು ನೋವಿನಿಂದ ಸಾಯುವ ರೀತಿಯಲ್ಲಿ ಶಿಕ್ಷಿಸುತ್ತಾನೆ ಮತ್ತು ಅವರ ಮುಂದಿನ ಏಳು ತಲೆಮಾರುಗಳು ದೇವಾಲಯದಿಂದ ಕಳ್ಳತನದ ಪರಿಣಾಮಗಳನ್ನು ನೆನಪಿಸಿಕೊಳ್ಳುತ್ತವೆ ಎಂದು ಹೇಳಿದ್ದಾರೆ. ಅಯೋಧ್ಯೆಯ ರಾಮ ಮಂದಿರದಲ್ಲಿ ದೇಣಿಗೆ ಕಳ್ಳತನ ನಡೆದಿದೆ ಎಂಬ ಆರೋಪ ಉತ್ತರ ಪ್ರದೇಶದಲ್ಲಿ ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ದೇಣಿಗೆ ದುರುಪಯೋಗದ ಆರೋಪದ ನಂತರ ಜೂನ್ 13 ರಂದು ಯುಪಿ ಸರ್ಕಾರವು ದೇವಾಲಯ ಟ್ರಸ್ಟ್‌ನ ಕೋರಿಕೆಯ ಮೇರೆಗೆ ಎಸ್‌ಐಟಿಯನ್ನು ರಚಿಸಿತು.

ಇಂದು ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನದ ಅಂಗವಾಗಿ 'ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ'ಯು ಜು.2ರ ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್.ಪೊನ್ನಣ್ಣ, ಸಂಸದ ಯದುವೀರ್, ರಾಜ್ಯ ಸಭಾ ಸದಸ್ಯ ಅಜಯ್ ಮಾಕನ್, ವಿಧಾನ ಪರಿಷತ್ ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್.ಅರುಣ್ ಮಾಚಯ್ಯ, ಪಿ.ಕಲಾವತಿ,ಇತರರು ಪಾಲ್ಗೊಳ್ಳಲಿದ್ದಾರೆ.

ವಿಶಾಲ ಚಿಂತನೆಗಳಡಿ ಪತ್ರಕರ್ತರು ಕರ್ತವ್ಯಪರರಾಗಲಿ



ಪತ್ರಿಕಾ ದಿನಾಚರಣೆ ಅಂಗವಾಗಿ ಜಿಲ್ಲಾ ಪತ್ರಕರ್ತರ ಸಂಘ ಉತ್ತಮ ವರದಿಗಾರ ಪ್ರಶಸ್ತಿ ನೀಡಿ ಗೌರವಿಸಿತು.

ಮಡಿಕೇರಿ, ಜು.1–ವಿಶ್ವವೇ ಮೆಚ್ಚುವ ಮಹಾತ್ಮ ಗಾಂಧೀಜಿ ಮತ್ತು ಜ್ಞಾನ ಸಂಪನ್ನರಾದ ಅಂಬೇಡ್ಕರ್ ಅವರ ತತ್ವಾದರ್ಶಗಳಂತೆ ನಾವೆಲ್ಲರೂ ಮನುಜರು ಎನ್ನುವ ವಿಶಾಲ ಚಿಂತನೆಗಳಡಿ ಕರ್ತವ್ಯ ಪರರಾಗಬೇಕೆಂದು ನೆಲ್ಯ ಹುದಿಕೇರಿ ಗ್ರಾಪಂ ಮಾಜಿ ಅಧ್ಯಕ್ಷ ಸಾಬು ವರ್ಗಿಸ್ ತಿಳಿಸಿದರು.

ನಗರದ ಕೊಡಗು ಪತ್ರಿಕಾ ಭವನ ಸಭಾಂಗಣದಲ್ಲಿ ನಡೆದ 'ಪತ್ರಿಕಾ ದಿನಾಚರಣೆ ಮತ್ತು ವಾರ್ಷಿಕ ದತ್ತಿ ಪ್ರಶಸ್ತಿ' ಪ್ರದಾನ ಸಮಾರಂಭವನ್ನು ಉದ್ಘಾಟಿಸಿ, ಅವರ ತತ್ವಾದರ್ಶ ಚಿಂತನೆಗಳಿಗೆ ತಕ್ಕಂತೆ ಪತ್ರಿಕಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರು ಪ್ರಾಮಾಣಿಕ ಸೇವೆಯನ್ನು ಸಮಾಜಕ್ಕೆ ನೀಡುವಂತಾಗಲಿ ಎಂದು ಆಶಿಸಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ. ಮಾತನಾಡಿ, ರಾಜ್ಯದಲ್ಲಿ ಪತ್ರಿಕಾ ಮಾಧ್ಯಮ ಇಲ್ಲಿಯವರೆಗೆ 183 ವರ್ಷಗಳ ಹಾದಿಯನ್ನು ಸವೆಸುವುದರೊಂದಿಗೆ, ಪತ್ರಿಕಾ ಕ್ಷೇತ್ರಕ್ಕೆ ಭದ್ರ ಬುನಾದಿಯನ್ನೆ ಹಾಕಿದೆ. ರಾಜ್ಯವ್ಯಾಪಿ 1252 ಪತ್ರಿಕೆಗಳಿದ್ದು, ಇವುಗಳಲ್ಲಿ 540 ದಿನ ಪತ್ರಿಕೆಗಳು ಹಾಗೂ ಪ್ರಾದೇಶಿಕ ಆವೃತ್ತಿಗಳಿವೆ. ಸುಮಾರು 84 ಪತ್ರಿಕೆಗಳು ಕೋವಿಡ್ ಸಂದರ್ಭದಲ್ಲಿ ಸ್ಥಗಿತಗೊಂಡಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಪತ್ರಿಕಾ ಭವನ ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಕೇಶವ ಕಾಮತ್, ಸಂಘದ ಸ್ಥಾಪಕ ಅಧ್ಯಕ್ಷ ಎಸ್.ಎ.ಮುರಳೀಧರ್, ಸಂಘದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಿ.ವಿ.ರವಿ ಕುಮಾರ್ ಮಾತನಾಡಿದರು.

ಪ್ರಶಸ್ತಿ ಗೌರವ: ಜಿಲ್ಲೆಯ ಉತ್ತಮ ವರದಿಗಾರ ಪ್ರಶಸ್ತಿಗಳನ್ನು ಅಶ್ರಫ್ ಕರಡ, ಎಸ್.ಜಿ. ಉಮೇಶ್, ಸೈಯದ್ ಇರ್ಫಾನ್, ಕುಡೆಕಲ್ ಸಂತೋಷ್, ಟಿ.ಜೆ. ಪ್ರವೀಣ್ ಕುಮಾರ್, ಡಿ.ಪಿ. ಲೋಕೇಶ್, ವಿನೋದ್ ಮೂಡಗದ್ದೆ, ಎಂ.ಎಸ್. ಸುನಿಲ್ ಅವರಿಗೆ ನೀಡಿ ಗೌರವಿಸಲಾಯಿತು. ದಾನಿಗಳಾದ ಮನೆಯ ಪಂಡಕಾಂತಿ ಸತೀಶ್, ಬಿ.ಜಿ. ಅನಂತಶಯನ, ಗುಡ್ಡೆಮನೆ ವಿಶು ಕುಮಾರ್, ಹಿರಿಯ ಪತ್ರಕರ್ತ ಜಿ.ಚಿದ್ವಿಲಾಸ್, ರೋಟರಿ ಮಿಸ್ಟಿ ಹಿಲ್ಸ್ ನಿಯೋಜಿತ ಅಧ್ಯಕ್ಷ ಪಿ.ಆರ್.ರಾಜೇಶ್, ಸಮರ್ಥ ಕನ್ನಡಿಗರು ಸಂಸ್ಥೆ ಸಂಚಾಲಕಿ ಕೆ.ಜಯಲಕ್ಷ್ಮಿ, ಸೌಮ್ಯ ಭಟ್, ಜಾನಪದ ಪರಿಷತ್ ಪದಾಧಿಕಾರಿ ಪ್ರತಿಮಾರೈ, ರಂಜಿನಿ, ಕುಶಾಲನಗರ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಸಿ. ದಿನೇಶ್, ಪೊನ್ನಂಪೇಟೆಯ ರಾಜ್ ಕುಶಾಲಪ್ಪ, ವಿರಾಜಪೇಟೆಯ ಮುದೋಷ್ ಪೂವಯ್ಯ ಹಾಜರಿದ್ದರು.

ಅರಮೇರಿ ಗ್ರಾಮದಲ್ಲಿ ನಡೆಯುತ್ತಿರುವ ಗಣಿಗಾರಿಕೆ ಸ್ಥಗಿತಕ್ಕೆ ಶಾಸಕರ ಆದೇಶ

ವಿರಾಜಪೇಟೆ, ಜು.1–ಶಾಸಕರ ಸೂಚನೆಯಂತೆ ಸಮೀಪದ ಅರಮೇರಿ ಗ್ರಾಮದಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದೆ.

ಅರಮೇರಿ ಮತ್ತು ಕಡಂಗಮೂರುರು ಗ್ರಾಮಸ್ಥರು ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ತಹಶಿಲ್ದಾರ್ ಗಮನಕ್ಕೆ ತಂದ ಬಳಿಕ ಜೂ.29ರಂದು ಕಂದಾಯ ಪರಿವೀಕ್ಷಕ ಹರೀಶ್ ಪರಿಶೀಲನೆ ನಡೆಸಿ ಸದ್ಯಕ್ಕೆ ಗಣಿಗಾರಿಕೆ ನಿಲ್ಲಿಸುವಂತೆ ಸೂಚಿಸಿದ್ದರು. ವಾರದಲ್ಲಿ ಗ್ರಾಮಸ್ಥರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ, ತಹಶಿಲ್ದಾರ್, ಗ್ರಾಪಂ ಅಭಿವೃದ್ಧಿ ಅಧಿಕಾರಿ ಮತ್ತಿತರರ ಸಭೆ ಕರೆದು ಪರಿಹಾರ ಕಂಡುಕೊಳ್ಳ ಲಾಗುತ್ತದೆ ಎಂದರು.



ಅರಮೇರಿ ಗ್ರಾಮದಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ಅಧಿಕಾರಿಗಳು ಮತ್ತು ಸಾರ್ವಜನಿಕರು ವೀಕ್ಷಿಸುತ್ತಿರುವುದು.

ಸ್ಥಳಕ್ಕೆ ಬಂದ ಜಾಗದ ಮಾಲಿಕ ಹಾಗೂ ಇತ್ತಿಚೆಗೆ ಸ್ಥಳದಲ್ಲಿ ಗಣಿಗಾರಿಕೆ ನಡೆಸುತ್ತಿದ್ದವರು ಬಂದು ಗ್ರಾಮಸ್ಥರು ಹಾಗೂ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು. ಆಗ ಗ್ರಾಮಸ್ಥರು ಗಣಿಗಾರಿಕೆಯಿಂದ ಎರಡು ಗ್ರಾಮಕ್ಕೂ ತೊಂದರೆಯಾಗುತ್ತಿರುವುದರಿಂದ ಗ್ರಾಮಸ್ಥರ ಭಾವನೆಯನ್ನು ಅರ್ಥ ಮಾಡಿಕೊಂಡು ಸಹಕರಿಸಿ. ಈ ಹಿಂದೆ ಗಣಿಗಾರಿಕೆ ನಿಂತು ಅನೇಕ ವರ್ಷಗಳಾಗಿರುವಾಗ ಇದನ್ನು ಮತ್ತೆ ಜೀವಂತಗೊಳಿಸುವ ಆಗತ್ಯ ಇಲ್ಲ ಎಂದು ಗ್ರಾಮಸ್ಥರ ಪರವಾಗಿ ಮಾತನಾಡಿದ ಮಂಜುಳ ಅಯ್ಯಪ್ಪ ತಿಳಿಸಿದರು.


ಗ್ರಾಮಸ್ಥರಾದ ಪೂಳಂಡ ಡಾಲು ಪೂಣಚ್ಚ ಪೂಳಂಡ ಮಾಚಯ್ಯ, ಬಾಚೀರ ಬಿದ್ದಪ್ಪ ಬಲ್ಲಟಿಕಾಳಂಡ ಮದನ್, ಕಾಂಗೀರ ಸತೀಶ್, ಬಲ್ಯಂಡ ಸದಾ, ಕೋದಂಡ ಸುರ ಅಯ್ಯಪ್ಪ ಬಲ್ಲಚುಡ ಸುನಿಲ್, ಹಳ್ಳಿಡ ನಂದ, ಪದ್ಮನಾಭ ನಾಯ್ಡು, ಬಲ್ಲಚಂಡ ಚಂಗಪ್ಪ, ಕೋದಂಡ ಪೂವಯ್ಯ, ಬಲ್ಲಟಿ ಕಾಳಂಡ ಮಂಜು ಸುಬ್ಬಯ್ಯ, ಪೂಳಂಡ ತಿಲಕ್ ಇದ್ದರು.

ಜೂಜಾಡುತ್ತಿದ್ದ 28 ಮಂದಿ ಬಂಧನ: 11 ಲಕ್ಷ, 5 ಕಾರು ವಶ

ಮಡಿಕೇರಿ: ತಾಲೂಕಿನ ಕಡಗದಾಳು ಗ್ರಾಮದಲ್ಲಿ ಅಕ್ರಮವಾಗಿ ಜೂಜಾಡುತ್ತಿದ್ದ 28 ಮಂದಿಯನ್ನು ವಶಕ್ಕೆ ಪಡೆದು 11 ಲಕ್ಷ ರೂ. ನಗದು ಸೇರಿದಂತೆ ವಿವಿಧ ವಸ್ತುಗಳನ್ನು ಜಿಲ್ಲಾ ಪೊಲೀಸರು, ವಶಪಡಿಸಿಕೊಂಡಿದ್ದಾರೆ

ಕಡಗದಾಳು ಗ್ರಾಮದಲ್ಲಿ ಸರ್ಕಾರದ ಪರವಾನಗಿ ಇಲ್ಲದೆ ಹಣವನ್ನು ಪಣವಾಗಿಟ್ಟುಕೊಂಡು ಅಕ್ರಮವಾಗಿ ಜೂಜಾಟ ನಡೆಸುತ್ತಿರುವ ಕುರಿತು ಗ್ರಾಮಾಂತರ ಪೊಲೀಸರಿಗೆ ಖಚಿತ ಮಾಹಿತಿ ಮೇರೆಗೆ, ಉಪವಿಭಾಗ ಮಟ್ಟದ ಅಪರಾಧ ಪತ್ತೆ ವಿಶೇಷ ತಂಡದ ಅಧಿಕಾರಿ ಮತ್ತು ಸಿಬ್ಬಂದಿಗಳು ಇಂದು ಮುಂಜಾನೆ ದಾಳಿ ನಡೆಸಿ ಮಂಡ್ಯ ಮತ್ತು ಬೆಂಗ ಳೂರು ದಕ್ಷಿಣ ಜಿಲ್ಲಾ ಮೂಲದ 28 ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು, ಪಣಕ್ಕಿಟ್ಟಿದ್ದ 11,08,130 ರೂ. ನಗದು, 5 ಕಾರು, 1 ದ್ವಿಚಕ್ರ ವಾಹನ, 35 ಮೊಬೈಲ್ ಫೋನ್‌ಗಳನ್ನು ವಶಪಡಿಸಿ ಕೊಂಡಿದ್ದಾರೆ.

ಡಿವೈಎಸ್‌ಪಿ ಸೂರಜ್.ಪಿ.ಎ. ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ, ಗ್ರಾಮಾಂತರ ವೃತ್ತ ನಿರೀಕ್ಷಕ ಹೆಚ್.ವಿ. ಚಂದ್ರಶೇಖರ್, ಉಪವಿಭಾಗದ ಅಪರಾಧ ತನಿಖಾ ದಳದ ಅಧಿಕಾರಿ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.



ವಶಪಡಿಸಿಕೊಂಡಿರುವ ನಗದು, ಮೊಬೈಲ್ ಫೋನ್‌ಗಳು

ಚಾಗಶೆಟ್ಟಹಳ್ಳಿಯಲ್ಲಿ ಮಲತ್ಯಾಜ್ಯ ಸಂಸ್ಕರಣ ಘಟಕ ಉದ್ಘಾಟನೆ

ಪಾಂಡವಪುರ, ಜು.1–ತಾಲೂಕಿನ ಕೆ.ಬೆಟ್ಟಹಳ್ಳಿ ಗ್ರಾಪಂ ವ್ಯಾಪ್ತಿಯ ಚಾಗ ಶೆಟ್ಟಹಳ್ಳಿ ಗ್ರಾಮದ ಹೊರವಲಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿ\ಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಿಪಂ, ತಾಪಂ ಹಾಗೂ ಕೆ.ಬೆಟ್ಟಹಳ್ಳಿ ಗ್ರಾಪಂ ಸಹಯೋಗದಲ್ಲಿ ನಿರ್ಮಿಸಿರುವ ಮಲತ್ಯಾಜ್ಯ ಸಂಸ್ಕರಣ ಘಟಕವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಮಲ ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಿ ಅದರಿಂದ ಸಾವಯವ ಗೊಬ್ಬರ ತಯಾರಿಸಬೇಕೆಂಬ ಉದ್ದೇಶದಿಂದ ಮಲ ತ್ಯಾಜ್ಯ ಸಂಸ್ಕರಣ ಘಟಕ ನಿರ್ಮಿಸಿದ್ದೇವೆ. ಈ ಘಟಕ ಸರಿಯಾದ ರೀತಿ ನಿರ್ವಹಣೆಯಾಗಬೇಕು. ಅಧಿಕಾರಿಗಳು ಜವಾಬ್ದಾರಿ ಹೊತ್ತು ಕೆಲಸ ನಿರ್ವಹಿಸಬೇಕು. ಮಲ ತ್ಯಾಜ್ಯ ಸಂಸ್ಕರಣ ಘಟಕ ನಿರ್ಮಾಣ ವಾಗಿರುವುದರಿಂದ ಸ್ವಚ್ಛತೆ ಜೊತೆಗೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸಿದಂತಾಗುತ್ತದೆ ಎಂದು ಹೇಳಿದರು



ಮಲತ್ಯಾಜ್ಯ ಸಂಸ್ಕರಣಾ ಘಟಕವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಜಿಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿ, ತಾಲೂಕಿನಲ್ಲಿ ನೂತನವಾಗಿ ಆರಂಭಗೊಂಡಿರುವ ಮಲತ್ಯಾಜ್ಯ ಸಂಸ್ಕರಣ ಘಟಕವನ್ನು ವೈಜ್ಞಾನಿಕ, ನಿಯಮಿತವಾಗಿ ನಿರ್ವಹಿಸುವ ಮೂಲಕ ರಾಜ್ಯಕ್ಕೆ ಮಾದರಿಯಾಗಬೇಕು ಎಂದರು.

ಈಗಾಗಲೇ ರಾಜ್ಯದ ವಿವಿಧೆಡೆ ಆರಂಭಗೊಂಡಿರುವ ಮಲತ್ಯಾಜ್ಯ ಸಂಸ್ಕರಣ ಘಟಕಗಳು ಸರಿಯಾದ ನಿರ್ವಹಣೆ ಇಲ್ಲದ ಪರಿಣಾಮ ಸ್ಥಗಿತಗೊಂಡಿರುವ ಉದಾಹರಣೆಗಳಿವೆ. ಆದರೆ, ಈ ಘಟಕ ಹಾಗಾಗಬಾರದು. ಉತ್ತಮವಾಗಿ ನಿರ್ವಹಣೆ ಮಾಡುವ ಮೂಲಕ ರಾಜ್ಯಕ್ಕೆ ಮಾದರಿ ಘಟಕವನ್ನಾಗಿ ಮಾಡಬೇಕು. ಮಲದಲ್ಲಿರುವ ಬ್ಯಾಕ್ಟೀರಿಯಾ ಮನುಷ್ಯನ ದೇಹಕ್ಕೆ ಸೇರಿದರೆ ಅನಾರೋಗ್ಯ ಉಂಟಾ ಗುತ್ತದೆ ಎಂಬ ಕಾರಣಕ್ಕೆ ಮಲವನ್ನು ಒಂದೆಡೆ ಸಂಗ್ರಹಿಸಿ ಸಂಸ್ಕರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಮಲತ್ಯಾಜ್ಯ ಸಂಗ್ರಹಣೆ ಮಾಡುವ ಖಾಸಗಿ ವ್ಯಕ್ತಿಗಳ ದೂರವಾಣಿ ನಂಬರ್‌ಗಳನ್ನು ಸಂಗ್ರಹಿಸಿ ಎಲ್ಲಾ ಘಟಕ ಸಕ್ಕಿಂಗ್ ಯಂತ್ರದ ಮೂಲಕ ಸಂಗ್ರಹಿಸುವ ಮಲವನ್ನು ಸಂಸ್ಕರಣ ಘಟಕಕ್ಕೆ ನೀಡಲು ಮನವರಿಕೆ ಮಾಡಬೇಕು. ಸಂಸ್ಕರಣ ಘಟಕದಲ್ಲೂ ಸಹ ಸುರಕ್ಷಿತವಾಗಿ ನಿಯಮಗಳ ಮೂಲಕ ಮಲವನ್ನು ಸಂಸ್ಕರಣೆ ಮಾಡಬೇಕು. ಇದಕ್ಕೆ ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದರು.

ತಾಪಂ ಇಓ ವೀಣಾ, ಕೆಆರ್‌ಐಡಿಎಲ್ ಇಂಜಿನಿಯರ್ ಸೋಮಶೇಖರ, ಅಭಿವೃದ್ಧಿ ಯೋಜ ನಾಧಿಕಾರಿ ಸುಂದರ ರಾಜು, ಎಇಇ ಚೈತ್ರ, ತಾಪಂ ವ್ಯವಸ್ಥಾಪಕ ಮಂಜು ನಾಥ್, ನರೇಗಾ ಸಹಾಯಕ ನಿರ್ದೇಶಕ ರಮೇಶ್, ಪಂಚಾಯತ್‌ರಾಜ್ ಸಹಾಯಕ ನಿರ್ದೇಶಕ ಮಹೇಶ್, ಸ್ವಚ್ಛ ಭಾರತ್ ಮಿಷನ್ ಯೋಜನೆಯ ಜಿಲ್ಲಾ ಸಂಯೋಜಕ ಶಿವಕುಮಾರ್, ಜಯದೇವ್, ಎನ್‌ಆರ್‌ಎಲ್‌ಎಂ ಸಿಬ್ಬಂದಿ, ಸಂಜೀವಿನಿ ಒಕ್ಕೂಟದ ಸಿಬ್ಬಂದಿ, ನರೇಗಾ ಮತ್ತು ವಸತಿ ಯೋಜನೆ ಸಿಬ್ಬಂದಿ ಇತರರಿದ್ದರು.

ಎಸ್‌ಐಆರ್, ಬಿಎಲ್‌ಎ–2 ಕಾರ್ಯಾಗಾರಕ್ಕೆ ಚಾಲನೆ

ಶ್ರೀರಂಗಪಟ್ಟಣ, ಜು.1– ಎರಡೆರಡು ಕಡೆ ನೋಂದಣಿಯಾಗಿರುವ ಅನರ್ಹ ಮತದಾರರನ್ನು ತೆಗೆದು ಹಾಕಿ ಬೂತ್ ಸ್ವಚ್ಛಗೊಳಿಸುವಲ್ಲಿ ಬಿಎಲ್‌ಓ–2ಗಳ ಜವಾಬ್ದಾರಿ ಹೆಚ್ಚಿದೆ ಎಂದು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.

ತಾಲೂಕಿನ ಶಾಂತಿಕೊಪ್ಪಲು ಗ್ರಾಮದ ತೋಟದ ಸರ್ಕಲ್ ಬಳಿಯ ಖಾಸಗಿ ಕಲ್ಯಾಣ ಮಂಟಪದಲ್ಲಿ ಜೆಡಿಎಸ್ ಪಕ್ಷದಿಂದ ಹಮ್ಮಿಕೊಂಡಿದ್ದ ಎಸ್‌ಐಆರ್, ಬಿಎಲ್‌ಎ–2 ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಮತದಾರರ ಪಟ್ಟಿಯಲ್ಲಿನ ಲೋಪದೋಷಗಳ ಸರಿಪಡಿಸಿಕೊಳ್ಳುವ ಜೊತೆಗೆ ಕೆಲವರು ಮತದಾನದ ಹಕ್ಕಿದ್ದರೂ ಸಹ ಮತದಾನಕ್ಕೆ ನಿರ್ಲಕ್ಷ್ಯ ತೋರುತ್ತಾರೆ. ಹೀಗಾಗಿ ಅಚ್ಚುಕಟ್ಟಾದ ಮತದಾರರ ಪಟ್ಟಿ ತಯಾರಿಸಲು ಆಯೋಗ ಸಿದ್ಧತೆ ನಡೆಸಿದ್ದು, ನಾವು ಅದಕ್ಕೆ ಕೈ ಜೋಡಿಸಬೇಕು ಎಂದರು.



ಕಾರ್ಯಾಗಾರವನ್ನು ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಉದ್ಘಾಟಿಸಿದರು.

ಶ್ರೀರಂಗಪಟ್ಟಣ ಕ್ಷೇತ್ರ ವ್ಯಾಪ್ತಿಯ ಕಸಬಾ ಮತ್ತು ಬೆಳಗೊಳ ಹೋಬಳಿ ಗ್ರಾಮಗಳು ಮೈಸೂರು ನಗರಕ್ಕೆ ಹೊಂದಿಕೊಂಡತಿದ್ದು, ಮೈಸೂರಿನ ರಮ್ಮನಹಳ್ಳಿ, ಕಾಳಿಸಿದ್ದನ ಹುಂಡಿ, ಕಾಮನಕೆರೆಹುಂಡಿ ಸೇರಿದಂತೆ ವಿವಿಧೆಡೆಗಳಲ್ಲಿ ನೆಲೆಸಿರುವ ಕೆಲವರು ಮೈಸೂರು ಹಾಗೂ ನಮ್ಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲೂ ಮತದಾನ ಮಾಡುತ್ತಾರೆ. ಇಂತಹ ಕಾನೂನುಬಾಹಿರ ಕ್ರಮ ತಡೆಯುವುದು ಆಯೋಗದ ಉದ್ದೇಶವೂ ಆಗಿದ್ದು, ಇದಕ್ಕೆ ಸಹಕಾರ ನೀಡಬೇಕು ಎಂದು ಹೇಳಿದರು.

ನೀರು ಹರಿಸಲು ಒತ್ತಾಯ: ಕಾವೇರಿ ಕಣಿವೆ ವ್ಯಾಪ್ತಿ ಬೆಳೆದಿರುವ ಬೆಳೆ ರಕ್ಷಿಸಲು ತಕ್ಷಣ ನಾಲೆಗೆ ನೀರು ಹರಿಸಬೇಕು ಎಂದು ಆಗ್ರಹಿಸಿದರು. ಅಣೆಕಟ್ಟೆಯಲ್ಲಿ 81 ಅಡಿ ನೀರಿದ್ದು, ಈ ಹಿಂದೆ 70 ಅಡಿವರೆಗೂ ನೀರು ಹರಿಸಿರುವ ಉದಾಹಣೆಗಳಿವೆ. ಹೀಗಾಗಿ ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗೆ ತಕ್ಷಣ ನಾಲೆಗೆ ಒಂದು ಕಟ್ಟು ನೀರು ಹರಿಸಬೇಕು. ಇಲ್ಲದಿದ್ದರೆ ಬೆಳೆ ಕೈಗೆ ಬಾರದೆ ರೈತರು ನಷ್ಟ ಅನುಭವಿಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಜೆಡಿಎಸ್ ಪಕ್ಷದ ಎಸ್‌ಐಆರ್ ಮಾಹಿತಿ ಅಧಿಕಾರಿ ಪ್ರಸನ್ನಕುಮಾರ್, ತಾಲೂಕು ಅಧ್ಯಕ್ಷ ದಶರಥ, ಜಿಪಂ ಮಾಜಿ ಸದಸ್ಯ ಮರೀಗೌಡ, ತಾಪಂ ಮಾಜಿ ಸದಸ್ಯ ದೇವೇಗೌಡ, ಮುಖಂಡರಾದ ದೇಮಾಜು, ಪ್ರಸನ್ನ, ತಿಲಕ್, ಸಂಜಯ್, ಪುಟ್ಟಸ್ವಾಮಿ, ಸುರೇಶ್, ನಾರಾಯಣಪ್ಪ, ಅಶ್ವತ್ಥ್, ಬೋರೇಗೌಡ, ಶಂಕರೇಗೌಡ ಸೇರಿದಂತೆ ಇತರರಿದ್ದರು.

ಚಿರತೆ ದಾಳಿಗೆ ಸಾಕು ನಾಯಿ ಬಲಿ

ಭಾರತೀನಗರ, ಜು.1– ಚಿರತೆ ದಾಳಿಗೆ ಸಾಕು ನಾಯಿ ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ದೇವರಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಕುಳ್ಳಪ್ಪ ಅವರ ಸಾಕು ನಾಯಿ ಸಾವನ್ನಪ್ಪಿರುವುದು. ಕುಳ್ಳಪ್ಪ ಅವರು ವ್ಯವಸಾಯದೊಂದಿಗೆ ಮನೆ ಬಳಿ ಹಸು, ಎಮ್ಮೆ, ಕುರಿ, ಕೋಳಿ ಸಾಕಿದ್ದರು. ಅಲ್ಲದೇ ಇವರ ಮನೆ ಗ್ರಾಮದ ಕೊನೆಯಲ್ಲಿರುವುದರಿಂದ ಅಕ್ಕಪಕ್ಕದಲ್ಲಿ ಹೊಲ ಗದ್ದೆಗಳಿದ್ದು, ಮನೆ ಬಳಿ ನಾಯಿ ಸಾಕಿಕೊಂಡಿದ್ದರು. ಎಂದಿನಂತೆ ರಾತ್ರಿ ತಮ್ಮ ಮನೆ ಮುಂದೆ ಇರುವ ಕಂಬಕ್ಕೆ ನಾಯಿ ಕಟ್ಟಿ ಹಾಕಲಾಗಿತ್ತು. ಈ ವೇಳೆ ಮಂಗಳವಾರ ರಾತ್ರಿ ಚಿರತೆ ನಾಯಿ ಮೇಲೆ ದಾಳಿ ನಡೆಸಿ ಬಲಿ ಪಡೆದು ತಿಂದು ಹಾಕಿದೆ.

ಈ ಘಟನೆಯಿಂದ ಗ್ರಾಮಸ್ಥರು ಗಾಬರಿಗೊಂಡು ಅರಣ್ಯ ಇಲಾಖೆಗೆ ವಿಷಯ ತಿಳಿಸಿದ್ದಾರೆ. ಈ ವೇಳೆ ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಗ್ರಾಮಸ್ಥರು ಸೂಕ್ತ ಕ್ರಮ ಕೈಗೊಂಡು ಚಿರತೆ ಸೆರೆಗೆ ಬೋನಿಡುವಂತೆ ಒತ್ತಾಯಿಸಿದರು.

ಮುಂಗಾರು ವೈಫಲ್ಯ: ಪರ್ಯಾಯ ಬೆಳೆ ಬಗ್ಗೆ ಅರಿವು ಮೂಡಿಸಿ

ಮಂಡ್ಯ: ಮುಂಗಾರು ವೈಫಲ್ಯ ಹಿನ್ನೆಲೆಯಲ್ಲಿ ರೈತರಿಗೆ ಪರ್ಯಾಯ ಬೆಳೆಗಳನ್ನು ಬೆಳೆಯುವ ಬಗ್ಗೆ ಅರಿವು ಮೂಡಿಸು ವಂತೆ ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಒಟ್ಟು ಬಿತ್ತನೆ ಗುರಿಯ ಪೈಕಿ ಕೇವಲ ಶೇ.5ರಷ್ಟು ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ಮಳೆ ಕೊರತೆಯಿಂದಾಗಿ ಬಿತ್ತನೆ ಕಾರ್ಯ ನಿಧಾನಗತಿಯಲ್ಲಿದೆ. ಸರಾಸರಿ ಮಳೆಯಲ್ಲಿ ಶೇ.35ರಷ್ಟು ಕೊರತೆ ಉಂಟಾಗಿದೆ ಎಂದರು.

ಮುಂಗಾರು ಮಳೆ ವಿಳಂಬ ಅಥವಾ ಮುಂಗಾರು ವೈಫಲ್ಯವಾದಾಗ ರೈತರು ಹೆಚ್ಚು ನೀರು ಬೇಡದ, ಅಲ್ಪಾವಧಿಯಲ್ಲಿ ಬೆಳೆಯುವ ಭತ್ತದ ತಳಿಗಳನ್ನು ಆರಿಸಿಕೊಳ್ಳುವುದು ಸೂಕ್ತ. ಭತ್ತಕ್ಕೆ ಪರ್ಯಾಯವಾಗಿ ರಾಗಿ, ನವಣೆ, ಮುಸುಕಿನ ಜೋಳ, ಅರ್ಕ, ಹುರುಳಿ, ಅಲಸಂದೆ, ಸೂರ್ಯ ಕಾಂತಿ ಬೆಳೆಯಲು ಕೃಷಿ ಇಲಾಖೆಯಿಂದ ರೈತರಿಗೆ ಅರಿವು ಮೂಡಿಸಿ ಎಂದರು.



ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿದರು.

ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ರೈತರು ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಬೆಳೆಯ ತಳಿಗಳನ್ನು ಆಯ್ಕೆ ಮಾಡಿ, ಪರ್ಯಾಯ ಬೆಳೆ ಹಾಗೂ ಪರ್ಯಾಯ ಬೇಸಾಯ ಕ್ರಮ ಅನುಸರಿಸಬೇಕು ಎಂದರು.

ಮಳೆ ಕಡಿಮೆಯಾದಲ್ಲಿ ಆತಂಕ ಪಡದೆ ಯಾವ ಬೆಳೆ ಬೆಳೆಯಬೇಕು ಎಂಬ ಬಗ್ಗೆ ರೈತ ಸಂಪರ್ಕ ಕೇಂದ್ರಗಳ ಮೂಲಕ ಅಧಿಕಾರಿಗಳು ವ್ಯಾಪಕ ಜಾಗೃತಿ ಮೂಡಿಸಬೇಕು ಹಾಗೂ ತಾಲೂಕು ಮಟ್ಟದಲ್ಲಿ ರೈತರೊಂದಿಗೆ ಕೃಷಿ ಇಲಾಖೆ ಅಧಿಕಾರಿಗಳು ಸಭೆ ನಡೆಸಿ ಅರಿವು ಮೂಡಿಸಿ ಎಂದು ತಿಳಿಸಿದರು.

ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕ ಎಸ್.ಜಯಸ್ವಾಮಿ ಹಾಗೂ ಕೃಷಿ ಇಲಾಖೆ ಉಪ ನಿರ್ದೇಶಕರು, ಕೃಷಿ ಇಲಾಖೆ ಸಹಾಯಕ ನಿರ್ದೇಶಕರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಸ್ಯ, ಪ್ರಾಣಿ ಸಂಕುಲ ಉಳಿದರೆ ಮಾತ್ರ ಜೀವ ಸಂಕುಲ ಉಳಿಯಲು ಸಾಧ್ಯ



ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರು.

ಯಳಂದೂರು, ಜು.1–ಸಸ್ಯ ಸಂಕುಲ ಹಾಗೂ ಪ್ರಾಣಿ ಸಂಕುಲ ಉಳಿದರೆ ಮಾತ್ರ ಜೀವ ಸಂಕುಲಗಳು ಉಳಿಯಲು ಸಾಧ್ಯ ಎಂದು ಪ್ರೊಫೆಸರ್ ಸಿದ್ದರಾಮಯ್ಯ ಅಭಿಪ್ರಾಯಿಸಿದರು.

ಪಟ್ಟಣದ ಎಸ್‌ಡಿವಿಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವೇದಿಕೆ ಹಮ್ಮಿಕೊಂಡಿದ್ದ ಶಿಕ್ಷಣದಲ್ಲಿ ಪರಿಸರ ಪ್ರಜ್ಞೆ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯರು ಗಿಡಮರಗಳನ್ನು ನೋಡಿಕೊಂಡಾಗ ಪರಿಸರ ಕಾಳಜಿ ಬೆಳೆಯುತ್ತದೆ. ಪರಿಸರ ಉಳಿವಿಗೆ ವಿದ್ಯಾರ್ಥಿ ಜೀವನದಲ್ಲೇ ಪರಿಸರ ಪ್ರಜ್ಞೆಯ ಜೊತೆಗೆ ಜಾಗೃತಿ ಅಗತ್ಯವಾಗಿದೆ. ಗಿಡಗಳು ಸುಂದರವಾಗಿ ಪ್ರಕೃತಿ ಮಡಿಲಲ್ಲಿ ಬೆಳೆಯುವಾಗ ಸಹಜ ಪ್ರಕ್ರಿಯೆಯೊಂದಿಗೆ ಸಸ್ಯ ಸಂಕುಲದ ಬೆಳವಣಿಗೆಗೆ ತೊಡಕಾಗಿವೆ. ಈ ಕೀಟಗಳನ್ನು ಕೆಲ ಪಕ್ಷಿಗಳು ನಾಶಪಡಿಸುತ್ತವೆ. ಇದು ಸಸ್ಯಗಳ ಬೆಳವಣಿಗೆಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಆದರೆ ಇಂದು ಪಕ್ಷಿಗಳೇ ಕಣ್ಮರೆಯಾಗುತ್ತಿದೆ ಈ ಬಗ್ಗೆ ವಿದ್ಯಾರ್ಥಿಗಳು ಈ ಬಗ್ಗೆ ಚಿಂತಿಸಬೇಕಾದ ಅನಿವಾರ್ಯತೆ ಇದೆ ಎಂದರು.

ಸಂಸ್ಥೆ ಅಧ್ಯಕ್ಷ ವಿ. ಮಲ್ಲಿಕಾರ್ಜುನ ಸ್ವಾಮಿ ಮಾತನಾಡುತ್ತಾ ವಿದ್ಯಾರ್ಥಿ ದೆಸೆಯಲ್ಲಿ ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಂಡಾಗ ವೈಜ್ಞಾನಿಕ ಚಿಂತನೆ ಬೆಳೆಯಲು ಪೂರಕ ವಾತಾವರಣ ಸೃಷ್ಟಿಯಾಗುತ್ತದೆ. ಈ ನಿಟ್ಟಿನಲ್ಲಿ ಪರಿಸರ ಕಾಳಜಿಗೆ ವಿದ್ಯಾರ್ಥಿಗಳು ಆದ್ಯತೆ ನೀಡಬೇಕೆಂದು ತಿಳಿಸಿದರು. ಪ್ರಾಸ್ತಾವಿಕ ನುಡಿಗಳನ್ನು ಆಡಿದ ಕೆ ವೆಂಕಟರಾಜು ಮಾತನಾಡಿ, ಅಕಾಡೆಮಿಯಿಂದ ಜಿಲ್ಲಾದ್ಯಂತ 18ಪರಿಚಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ವಿದ್ಯಾರ್ಥಿಗಳು ಪರಿಸರದ ಆಸಕ್ತಿ ಬೆಳೆಸುವ ಪುಸ್ತಕಗಳನ್ನು ಓದಿ ಎಂದರು.

ಅಕಾಡೆಮಿ ಸಂಚಾಲಕ ಪ್ರಕಾಶ್ ರಾಜ್ ಮೇವು, ಪ್ರೊ. ಶಿವಸ್ವಾಮಿ,ಮುಖ್ಯ ಶಿಕ್ಷಕಿ ದೀಪ, ರಾಜಶೇಖರ್, ಶಿಕ್ಷಕರಾದ ವೀರಭದ್ರಸ್ವಾಮಿ, ಗುಂಬಳ್ಳಿ ಬಸವರಾಜ್, ರಾಜಶೇಖರ್, ಶಿವಮೂರ್ತಿ, ಮಹದೇವ ಹೆಗ್ಗವಾಡಿಪುರ ಇತರರಿದ್ದರು.

ಜಿಲ್ಲೆಯ ವಿವಿಧ ಭಾಗಗಳಲ್ಲಿ ಜಿಲ್ಲಾಧಿಕಾರಿ ಎಸ್‌ಐಆರ್ ಪ್ರಕ್ರಿಯೆ ಪರಿಶೀಲನೆ

ಚಾಮರಾಜನಗರ, ಜು.1–ಚುನಾವಣಾ ಆಯೋಗದ ನಿರ್ದೇಶಾನುಸಾರ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್.ಐ.ಆರ್) ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿ ಶ್ರೀರೂಪ ಇಂದು ಜಿಲ್ಲೆಯ ವಿವಿಧೆಡೆ ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕಿನ ಉಡಿಗಾಲ, ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ, ತ್ರಿಯಂಭಕಪುರ, ಕಗ್ಗಳ, ಗುಂಡ್ಲುಪೇಟೆ ಪಟ್ಟಣದ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣಾ ಪ್ರಕ್ರಿಯೆ ಕಾರ್ಯವನ್ನು ಖುದ್ದು ವೀಕ್ಷಿಸಿದರು. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಕಾರ್ಯದಲ್ಲಿ ನಿರತರಾಗಿರುವ ಬಿಎಲ್‌ಒ(ಬೂತ್ ಮಟ್ಟದ ಅಧಿಕಾರಿ)ಗಳಿಂದ ವಿವರ ಮಾಹಿತಿ ಪಡೆದುಕೊಂಡರು. ಬೂತ್ ಮಟ್ಟದ ಅಧಿಕಾರಿಗಳೊಂದಿಗೆ ಮತದಾರರ ಮನೆ ಮನೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಗಣತಿ ನಮೂನೆ (ಎನ್ಯೂಮರೇಷನ್ ಫಾರಂ) ಅನ್ನು ವಿತರಿಸಿದರು. ಫಾರಂ ಭರ್ತಿ ಮಾಡಿ ಸಹಿ ಹಾಕಿದ ಬಳಿಕ ಮನೆಗೆ ಭೇಟಿ ನೀಡುವ ಬೂತ್ ಮಟ್ಟದ ಅಧಿಕಾರಿಗಳಿಗೆ ನೀಡಬೇಕು ಎಂದು ತಿಳಿಸಿದರು.



ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವು ಅತ್ಯಂತ ಮಹತ್ವದ್ದಾಗಿದೆ. ಮತದಾನದಿಂದ ಯಾರೂ ವಂಚಿತರಾಗಬಾರದು. ಈ ನಿಟ್ಟಿನಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಗೆ ಎಲ್ಲರೂ ಸಹಕರಿಸಬೇಕು. ಪರಿಷ್ಕರಣೆ ಸಂಬಂಧ ಯಾವುದೇ ಗೊಂದಲಗಳಿದ್ದರೂ ಮತಗಟ್ಟೆ ಮಟ್ಟದ ಅಧಿಕಾರಿಗಳು, ಮೇಲ್ವಿಚಾರಕರು, ಮತದಾರರ ನೋಂದಣಾಧಿಕಾರಿ, ಸಹಾಯಕ ನೋಂದಣಾಧಿಕಾರಿಗಳನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳಬೇಕು ಎಂದು ಮತದಾರರಿಗೆ ಮನವರಿಕೆ ಮಾಡಿಕೊಟ್ಟರು.

ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಪರಿಷ್ಕರಣೆ ಕಾರ್ಯ ಸಂಬಂಧ ವಿವರ ಪಡೆದುಕೊಳ್ಳುವಾಗ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸಬೇಕು. ಮತದಾರರಿಂದ ಗಣತಿ ನಮೂನೆ(ಎನ್ಯೂಮ ರೇಷನ್ ಫಾರಂ)ಯನ್ನು ಸ್ವೀಕರಿಸಿದ ಬಳಿಕ ಡಿಜಟಲೀಕರಣ ಮಾಡಬೇಕೆಂದು ಸೂಚಿಸಿದರು.

ಮತದಾರರ ನೋಂದಣಾಧಿಕಾರಿಗಳು ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿಶ್ವನಾಥ್, ಸಹಾಯಕ ಮತದಾರರ ನೋಂದಣಾಧಿಕಾರಿಗಳು ಹಾಗೂ ತಹಶೀಲ್ದಾರ್ ಗಿರಿಜಾ, ತನ್ಮಯ್, ಇತರೆ ಅಧಿಕಾರಿಗಳು ಇದ್ದರು.

ಗುಜರಾತ್‌ನ ಪ್ರೇರಣಾ ಕಾರ್ಯಕ್ರಮಕ್ಕೆ ಚಾ.ನಗರ ವಿದ್ಯಾರ್ಥಿ ಆಯ್ಕೆ

ಚಾಮರಾಜನಗರ, ಜು.1–ದೆಹಲಿಯ ಮಾನವ ಸಂಪನ್ಮೂಲ ಕೇಂದ್ರ ಸಚಿವಾಲಯ ಗುಜರಾತ್‌ನಲ್ಲಿ ಆಯೋಜಿಸಿರುವ ಪ್ರೇರಣಾ ಕಾರ್ಯಕ್ರಮಕ್ಕೆ ನಗರದ ಸೋಮವಾರಪೇಟೆಯ ಎಂ.ಸಿ.ಎಸ್ ಪಬ್ಲಿಕ್ ಶಾಲೆಯ 10 ನೇ ತರಗತಿ ಧ್ರುವಕುಮಾರ್ ಆಯ್ಕೆಯಾಗಿದ್ದಾನೆ.



ಧ್ರುವಕುಮಾರ್

ಈ ಕಾರ್ಯಕ್ರಮವು ವ್ಯಕ್ತಿತ್ವ ವಿಕಸನ, ವಿವಿಧತೆಯಲ್ಲಿ ಏಕತೆ, ವೈವಿಧ್ಯತೆಗೆ ಗೌರವ ಮುಂತಾದ ಹಿನ್ನೆಲೆಯನ್ನು ಹೊಂದಿದ್ದು, ಸಂಸ್ಥೆಯ ಆಡಳಿತ ಮಂಡಳಿ, ಆಡಳಿತಾಧಿಕಾರಿಗಳು, ಪ್ರಾಂಶುಪಾಲರು, ಸಿಬ್ಬಂದಿ ವರ್ಗ, ವಿದ್ಯಾರ್ಥಿ ವೃಂದ ಶುಭಾಶಯ ಕೋರಿದ್ದಾರೆ.

ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ಗೆ 6 ಎಕರೆ ಕಬ್ಬು ಭಸ್ಮ

ಹನೂರು, ಜು.1–ಬಿರುಗಾಳಿಯ ರಭಸಕ್ಕೆ ವಿದ್ಯುತ್ ತಂತಿ ಒಂದಕ್ಕೊಂದು ಸ್ಪರ್ಶಿಸಿ, ಶಾರ್ಟ್‌ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡು, ಸುಮಾರು 6 ಎಕರೆ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿನ ಬೆಳೆ ನಾಶವಾಗಿರುವ ಘಟನೆ ತಾಲೂಕಿನ ಅಜ್ಜೀಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಪಳನಿಸ್ವಾಮಿ ಎಂಬ ರೈತನಿಗೆ ಸೇರಿದ ಜಮೀನಿನಲ್ಲಿ ಬೆಳೆ ನಾಶವಾಗಿದ್ದು, ಲಕ್ಷಾಂತರ ರೂಪಾಯಿ ನಷ್ಟವಾಗಿದೆ.

ಘಟನೆ ವಿವರ: ಬುಧವಾರ ಮಧ್ಯಾಹ್ನ ಏಕಾಏಕಿ ಬೀಸಿದ ಬಿರುಗಾಳಿಯ ರಭಸಕ್ಕೆ ಪಳನಿಸ್ವಾಮಿ ಎಂಬುವರಿಗೆ ಸೇರಿದ ಜಮೀನಿನ ನಡುವೆ ಹಾದು ಹೋಗಿದ್ದ ವಿದ್ಯುತ್ ತಂತಿಗಳು ಒಂದಕ್ಕೊಂದು ಸ್ಪರ್ಶಿಸಿ ಬೆಂಕಿ ಹೊತ್ತಿಕೊಂಡಿದ್ದು, ಕಬ್ಬಿನ ಬೆಳೆಗೆ ತಾಕಿ ವ್ಯಾಪಿಸಿದೆ. ಬೆಂಕಿಯ ಕೆನ್ನಾಲಿಗೆಯಿಂದ ಸುಮಾರು 6 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಬೆಳೆದಿದ್ದ ಕಬ್ಬು ನಾಶವಾಗಿದೆ. ವಿಷಯ ತಿಳಿದು ಸ್ಥಳೀಯರು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ. ಆದರೆ ಗಾಳಿಯ ರಭಸ ಹೆಚ್ಚು ಇದ್ದ ಕಾರಣ ವಾಹನ ಬರುವ ವೇಳೆಗೆ ಸಾಕಷ್ಟು ಪ್ರಮಾಣದಲ್ಲಿ ಕಬ್ಬು ಬೆಳೆ ಸುಟ್ಟು ಭಸ್ಮವಾಗಿದೆ. ಆದರೂ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ಸಂಪೂರ್ಣ ನಂದಿಸಿದರು.

ಸಾಲ ಮಾಡಿ ಕಬ್ಬು ಬೆಳೆ ಬಿತ್ತನೆ ಮಾಡಿ, ಬೆಳೆ ಕಟಾವಿಗೆ ಬಂದಿತ್ತು. ಆದರೆ, ಘಟನೆಯಿಂದ ಸಂಪೂರ್ಣ 6 ಎಕರೆ ಕಬ್ಬು ನಾಶವಾಗಿದ್ದು, ಲಕ್ಷಾಂ ತರ ರೂಪಾಯಿ ನಷ್ಟವಾಗಿದೆ. ಹಾಗಾಗಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಪಳನಿಸ್ವಾಮಿ ಒತ್ತಾಯಿಸಿದರು.



ಬೆಂಕಿಗೆ ಆಹುತಿಯಾಗಿರುವ ಕಬ್ಬಿನ ಬೆಳೆ.

ಮೈಸೂರು ಮಿತ್ರ

ಡಿಜಿಟಲ್ ಇಂಡಿಯಾವು ದೇಶಕ್ಕೆ ಜಾಗತಿಕ ಮಟ್ಟದಲ್ಲಿ ಹೊಸ ಗುರುತನ್ನು ನೀಡಿದೆ

ನವದೆಹಲಿ: ಕೇಂದ್ರ ಸರ್ಕಾರದ ಡಿಜಿಟಲ್ ಇಂಡಿಯಾ ಉಪಕ್ರಮವನ್ನು ಕೊಂಡಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಆಡಳಿತ, ನಾಗರಿಕ ಸಬಲೀಕರಣ ಮತ್ತು ಜೀವನದ ಎಲ್ಲ ಅಂಶಗಳ ಮೇಲೆ ಪ್ರಭಾವ ಬೀರುವ ಮೂಲಕ ಎಲ್ಲ ವಲಯದ ಅಭಿವೃದ್ಧಿಗೆ ಹೊಸ ವ್ಯಾಖ್ಯಾನ ನೀಡಿದೆ ಎಂದಿದ್ದಾರೆ.



ನರೇಂದ್ರ ಮೋದಿ

11 ವರ್ಷಗಳ ಡಿಜಿಟಲ್ ಇಂಡಿಯಾವು ಜಾಗತಿಕವಾಗಿ ಭಾರತಕ್ಕೆ ಹೊಸ ಗುರುತನ್ನು ತಂದು ಕೊಟ್ಟಿದೆ ಎಂದಿದ್ದಾರೆ.

ಡಿಜಿಟಲ್ ಇಂಡಿಯಾ ಉಪಕ್ರಮ ಆರಂಭಿಸಿ 11 ವರ್ಷ ಕಳೆದಿದೆ. ಈ ಉಪಕ್ರಮವು ಆಡಳಿತ, ನಾಗರಿಕರ ಸಬಲೀಕರಣ ಮತ್ತು ಎಲ್ಲ ವಲಯದ ಬೆಳವಣಿಗೆಯ ವ್ಯಾಖ್ಯಾನವನ್ನು ಬದಲಿಸಿದೆ ಎಂದಿದ್ದಾರೆ.

ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ವಿಸ್ತರಣೆಯು ತಡೆರಹಿತ ಡಿಜಿಟಲ್ ಪಾವತಿ ಮತ್ತು ನೇರ ಹಣ ವರ್ಗಾವಣೆಯ ಮೂಲಕ ಪಾರದರ್ಶಕವಾಗಿ ಫಲಾನುಭವಿಗಳಿಗೆ ಲಾಭ ಪಡೆಯಲು ನೆರವಾಗಿದೆ. ಜೀವನವನ್ನು ಮತ್ತಷ್ಟು ಸುಲಭಗೊಳಿಸುವ ನಿಟ್ಟಿನಲ್ಲಿ ತಂತ್ರಜ್ಞಾನ ಒಂದು ಸಾಧನವಾಗಿದೆ ಎಂದಿದ್ದಾರೆ.

ಡಿಜಿಟಲ್ ಇಂಡಿಯಾವು ನಾವೀನ್ಯದ ಅಲೆಯನ್ನು ವಿಶೇಷವಾಗಿ ಹಳ್ಳಿಗಳು, ಟಯರ್–2 ಮತ್ತು ಟಯರ್–3 ನಗರಗಳೂ ಸೇರಿದಂತೆ ದೇಶದ ಎಲ್ಲ ಭಾಗಗಳಿಗೂ ಕೊಂಡೊಯ್ದಿದೆ ಎಂದಿದ್ದಾರೆ.

ಜನ ಎದುರಿಸುತ್ತಿರುವ ಸಮಸ್ಯೆಗಳಿಗೆ ಯುವ ಉದ್ಯಮಿಗಳು, ಸ್ಟಾರ್ಟಪ್‌ಗಳು ಮತ್ತು ನಾವೀನ್ಯಕಾರರು ದೇಶದ ಪ್ರತಿಯೊಂದು ಭಾಗದಲ್ಲೂ ಪರಿಹಾರ ಕಂಡುಹಿಡಿಯುತ್ತಿದ್ದಾರೆ ಎಂದು ಹೇಳಿದ್ದಾರೆ.

ಈ ಉಪಕ್ರಮವು ಶಿಕ್ಷಣ, ಆರೋಗ್ಯ ವ್ಯವಸ್ಥೆ, ಕೃಷಿ, ವಾಣಿಜ್ಯ ಮತ್ತು ಸಾರ್ವಜನಿಕ ಸೇವೆಗಳ ಪೂರೈಕೆಯನ್ನು ಮತ್ತಷ್ಟು ಬಲಪಡಿಸಿದೆ. ಆಡಳಿತವನ್ನು ಮತ್ತಷ್ಟು ಪಾರದರ್ಶಕ, ದಕ್ಷ ಮತ್ತು ಸುಲಭ ಪ್ರವೇಶಕ್ಕೆ ಅನುವು ಮಾಡಿಕೊಟ್ಟಿದೆ ಎಂದಿದ್ದಾರೆ.

ಡಿಜಿಟಲ್ ಜಗತ್ತಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ದೇಶವು ಎಐ, ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಇತರ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ತ್ವರಿತ ಪ್ರಗತಿಯನ್ನು ಖಚಿತಪಡಿಸಿದೆ ಎಂದು ಮೋದಿ ಹೇಳಿದ್ದಾರೆ.

ಬೆಳವಣಿಗೆ ಮತ್ತು ಅವಕಾಶದ ಹೊಸ ಮಾರ್ಗಗಳನ್ನು ಡಿಜಿಟಲ್ ಇಂಡಿಯಾ ಉಪಕ್ರಮವು ತೆರೆಯುತ್ತಿದೆ. ಮಾನವೀಯತೆ ಆಧರಿತ ತಂತ್ರಜ್ಞಾನ, ಪ್ರತಿಯೊಬ್ಬ ನಾಗರಿಕನ ಸಬಲೀಕರಣ ಮತ್ತು ಸುಸ್ಥಿರ ಅಭಿವೃದ್ಧಿಗೆ ಉತ್ತೇಜನವಿರುವ ಭವಿಷ್ಯ ರೂಪಿಸುವುದು ನಮ್ಮ ಗುರಿಯಾಗಿದೆ.

ದೇಶದ ಅಭಿವೃದ್ಧಿ ಮತ್ತು ಸ್ವಾವಲಂಬನೆಗೆ ಡಿಜಿಟಲ್ ಇಂಡಿಯಾ ಬಲಿಷ್ಠ ಅಡಿಪಾಯ ಎಂದ ಮೋದಿ, ಕಳೆದ 11 ವರ್ಷಗಳಲ್ಲಿ ಜನರ ಬದುಕನ್ನು ಸರಳಗೊಳಿಸುವ ಮೂಲಕ ಬಡವರು ಮತ್ತು ಅವಕಾಶ ವಂಚಿತ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದಿದ್ದಾರೆ.

ಡಿಜಿಟಲ್ ವಹಿವಾಟಿಗೆ ಆಪ್ಟಿಕಲ್ ಫೈಬರ್ ನೆಟ್‌ವರ್ಕ್ ವಿಸ್ತರಣೆಯಿಂದ ಹಿಡಿದು ಡಿಜಿಟಲ್ ಇಂಡಿಯಾ ಉಪಕ್ರಮದ ಅಭೂತಪೂರ್ವ ಯಶಸ್ಸು ಇಡೀ ವಿಶ್ವ ಭಾರತದತ್ತ ನೋಡುವಂತೆ ಮಾಡಿದೆ ಎಂದಿದ್ದಾರೆ.

2015ರ ಮೊದಲು ಜನರು ಯಾವುದೇ ಸೇವೆಗಾಗಿ ಉದ್ದುದ್ದ ಸರತಿ ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಇತ್ತು. ಇಂಟರ್‌ನೆಟ್‌ನ ಲಭ್ಯತೆ ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. ಇಂಟರ್‌ನೆಟ್ ಆಕ್ಸೆಸ್ ಹೆಚ್ಚಿಸುವುದರ ಜೊತೆಗೆ ಸರ್ಕಾರಿ ಸೇವೆಗಳನ್ನು ಆನ್‌ಲೈನ್‌ನಲ್ಲಿ ಒದಗಿಸುವ ಮೂಲಕ ಜನರ ಜೀವನ ಸರಳಗೊಳಿಸಲಾಗಿದೆ ಎಂದರು.

ಕಳೆದ ದಶಕದಲ್ಲಿ ಡಿಜಿಟಲ್ ಇಂಡಿಯಾ ಉಪಕ್ರಮವು ಭಾರತದ ಡಿಜಿಟಲ್ ಆರ್ಥಿಕತೆ ಮತ್ತು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಅಡಿಪಾಯವಾಗಿದ್ದು ಭಾರತವು ಈಗ ಜಾಗತಿಕ ನೈಜ ಸಮಯದ ಪಾವತಿ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿದೆ ಎಂದಿದ್ದಾರೆ.

ಉಚಿತ ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು: ಮೈಸೂರಿನ ಕುವೆಂಪುನಗರದಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ ವತಿಯಿಂದ ಸಿದ್ಧ ಸಮಾಧಿ ಯೋಗ ಶಿಬಿರದ ಪರಿಚಯ ಕಾರ್ಯಕ್ರಮವನ್ನು ಜು.5 ರಂದು ಸಂಜೆ 6 ಗಂಟೆಗೆ ಆದಿ ಚುಂಚನಗಿರಿ ರಸ್ತೆಯ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಆಯೋಜಿಸಲಾಗಿದೆ. ಜು.6 ರಿಂದ 14 ದಿನಗಳ ಸಿದ್ಧ ಸಮಾಧಿ ಯೋಗ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಧ್ಯಾನ, ಪ್ರಾಣಾಯಾಮ, ಆಹಾರ ಕ್ರಮದ ಬಗ್ಗೆ ತರಬೇತಿ, ಅಸ್ತಮಾ, ಮಧುಮೇಹ, ರಕ್ತದೊತ್ತಡ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ: 94484580050, 8618762110 ಮೂಲಕ ಸಂಪರ್ಕಿಸಬಹುದು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 47
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮೈಸೂರು ಮಿತ್ರ

ಬಸವಾದಿ ಶರಣರ ಸಮಾನತೆಯ ಕನಸು ಇನ್ನೂ ನನಸಾಗಿಲ್ಲ

ಜಾತಿ ತಾರತಮ್ಯ ಇನ್ನೂ ಜೀವಂತವಾಗಿದೆ: ಮಾಜಿ ಸಿಎಂ ಸಿದ್ದರಾಮಯ್ಯ ವಿಷಾದ

ನಂಜನಗೂಡು, ಜು.1– ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಜನರಿಗೆ ಜಾಗೃತಿ ಮೂಡಿಸಿದರೂ, ಬಸವಾದಿ ಶರಣರ ಸಾಮಾಜಿಕ ಸಮಾನತೆಯ ಕನಸು ಇನ್ನೂ ನನಸಾಗಿಲ್ಲ. ಜಾತಿ ತಾರತಮ್ಯ ಇನ್ನೂ ಜೀವಂತವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಾದಿಸಿದರು.

ತಾಲೂಕಿನ ದೇವನೂರು ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ಆಯೋಜಿಸಿದ್ದ ಗುರು ಮಲ್ಲೇಶ್ವರರ 127ನೇ ಪುಣ್ಯಾರಾಧನೆ ಮತ್ತು ಬಸವ ಮಹಾದ್ವಾರ ಹಾಗೂ ಕಲ್ಯಾಣಿ ಉದ್ಘಾಟನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಸವಾದಿ ಶರಣರು ಪ್ರಮುಖವಾಗಿ ಮೌಢ್ಯಗಳ ವಿರುದ್ಧ ಹೋರಾಡಿ ಸಮಾನತೆ ಸಾರಿದ್ದರು. ದೇಶ ಕಳೆದ 850 ವರ್ಷಗಳಲ್ಲಿ ಅನೇಕ ಬದಲಾವಣೆ ಕಂಡಿದ್ದರೂ, ಬಸವಾದಿ ಶರಣರ ಕನಸು ಇನ್ನೂ ನನಸಾಗಿಲ್ಲ. ಬಸವಾದಿ ಶರಣರ ಪ್ರೇರಣೆಯಿಂದಾಗಿ ನಾನು ಮುಖ್ಯಮಂತ್ರಿ ಆಗಿದ್ದ ವೇಳೆ ಮೌಢ್ಯ ನಿಷೇಧ ಕಾಯ್ದೆ ಜಾರಿಗೊಳಿಸಿದ್ದೇನೆ. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸಮಾಜದಲ್ಲಿ ಮೌಢ್ಯವನ್ನು ಗಟ್ಟಿಗೊಳಿಸುತ್ತಿದ್ದಾರೆ. ಸಮಾಜದಲ್ಲಿ ಬದಲಾವಣೆ ತರಲು ಜನರಿಗೆ ವೈಜ್ಞಾನಿಕ, ವೈಚಾರಿಕ ಶಿಕ್ಷಣ ಸಿಗಬೇಕು. ಶಿಕ್ಷಣದಿಂದ ಮಾತ್ರ ಪ್ರಗತಿ ಸಾಧ್ಯ ಎಂದರು.

> ಭಾರತವು ಆಧ್ಯಾತ್ಮಿಕತೆ, ಧಾರ್ಮಿಕತೆಯ ಮೂಲಕ ಮನುಕುಲಕ್ಕೆ ಅಗತ್ಯವಾದ ಮಾನವೀಯ ಮೌಲ್ಯಗಳನ್ನು ಬಿತ್ತರಿಸುತ್ತಿರುವುದರಿಂದ ಪಾಶ್ಚಿಮಾತ್ಯ ದೇಶಗಳು ಭಾರತ ದೇಶದತ್ತ ತಿರುಗಿ ನೋಡುವಂತಾಗಿದೆ. 12ನೇ ಶತಮಾನದ ಬಸವಾದಿ ಶರಣರು ಅನುಭವ ಮಂಟಪದ ಮೂಲಕ ಸಮಾನತೆ ತಂದು ಕೊಟ್ಟಿದ್ದಾರೆ. ಬಸವಾದಿ ಶರಣರ ತತ್ವಗಳು, ಸಾಮಾಜಿಕ ಸಂದೇಶಗಳು ಜಾತಿ, ಮತ, ಎಲ್ಲೆ ಮೀರಿ ಎಲ್ಲರಿಗೂ ಬೆಳಕಾಗಿವೆ. ಆದ್ದರಿಂದಲೇ ಬಸವಾದಿ ಶರಣರ ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಶ್ರೀಗುರುಮಲ್ಲೇಶ್ವರರು ಬಸವಾದಿ ಶರಣರ ತತ್ವ ಸಿದ್ಧಾಂತಗಳನ್ನು ಜನರಲ್ಲಿ ಜಾಗೃತಿ ಮೂಡಿಸಿದ ಫಲವಾಗಿ ಎಲ್ಲರ ಮನೆಗಳಲ್ಲಿ ಶಾಶ್ವತವಾಗಿ ನೆಲೆಯೂರಿವೆ. – ಶ್ರೀಸಿದ್ದಲಿಂಗ ಸ್ವಾಮೀಜಿ, ಸಿದ್ದಗಂಗಾ ಮಠ.

ನಮ್ಮ ಊರಿನಲ್ಲಿ ಅನ್ನಕ್ಕಾಗಿ ಬೇರೆಯವರ ಮನೆ ಎದುರು ಬೇಡುತ್ತಿದ್ದವರನ್ನು ನೋಡಿದ್ದೆ. ಆ ಕಾರಣದಿಂದ ಜಗಜ್ಯೋತಿ ಬಸವಣ್ಣನವರ ಪ್ರೇರಣೆಯಿಂದ ಬಡವರು ಹಸಿವಿನಿಂದ ಖಾಲಿ ಹೊಟ್ಟೆಯಲ್ಲಿ ಮಲಗಬಾರದು ಎಂಬ ಆಶಯದಿಂದ ಅನ್ನಭಾಗ್ಯ ಯೋಜನೆ ಜಾರಿಗೆ ತಂದೆ. ನಾನು ಚಿಕ್ಕವನಾಗಿದ್ದಾಗ ಶಾಲೆಗೆ ಸೇರಿ ರಲಿಲ್ಲ. ನನ್ನ ಅಪ್ಪ, ಅಮ್ಮ ಅನಕ್ಷರಸ್ಥರು. ನಾನು ಎಂದರ ಮಕ್ಕಳ ಕುರಿಕೆ ಕಾಯುತ್ತಿದ್ದೆ. ನಮ್ಮ ಊರಿನ ಮಾಸ್ತರ್ ಒಬ್ಬರು ನನ್ನನ್ನು ನೇರವಾಗಿ 5ನೇ ತರಗತಿಗೆ ಸೇರಿಸಿದರು. ವಿದ್ಯಾವಂತನಾದ್ದರಿಂದ ಶಾಸಕನಾದೆ. ಮುಖ್ಯಮಂತ್ರಿಯಾದೆ. ಸಂವಿಧಾನ ಜಾರಿಗೆ ಬಂದ ಮೇಲೆ ದೇಶದಲ್ಲಿ ಶೇ.12 ರಷ್ಟಿದ್ದ ವಿದ್ಯಾವಂತರ ಸಂಖ್ಯೆ ಶೇ.76ಕ್ಕೆ ಏರಿದೆ. ಸಂವಿಧಾನ ಬಂದ ಮೇಲೆ ಎಲ್ಲರಿಗೂ ಸಮಾನ ಅವಕಾಶ ಸಿಕ್ಕಿದೆ. ಎಲ್ಲರೂ ಅಕ್ಷರವಂತರಾಗಬೇಕು. ವಿದ್ಯೆ ಇಲ್ಲದೆ ಪ್ರಗತಿ ಸಾಧ್ಯವಿಲ್ಲ. ಅಂಬೇಡ್ಕರ್ ಹೇಳಿದಂತೆ ಇತಿಹಾಸ ತಿಳಿಯದವರು ಭವಿಷ್ಯ ನಿರ್ಮಾಣ ಮಾಡಲು ಸಾಧ್ಯವಿಲ್ಲ. ನನ್ನ ಗ್ಯಾರಂಟಿ ಯೋಜನೆಗೆ ಬಸವಣ್ಣನವರ ಪ್ರೇರಣೆ ಕಾರಣ. ಗುರು ಮಲ್ಲೇಶ್ವರರು ಬಸವಣ್ಣನವರಿಂದ ಪ್ರೇರಣೆ ಪಡೆದವರಾಗಿದ್ದರು. ಆದ್ದರಿಂದಲೇ ಪ್ರತಿಯೊಬ್ಬರೂ ಶ್ರಮಜೀವಿಗಳಾಗಬೇಕು ಎಂದು ಕಾಯಕದ ಮಹತ್ವ ಸಾರಿದ್ದಾರೆ. ನಾವೆಲ್ಲರೂ ಬಸವಾದಿ ಶರಣರ ತತ್ವ ಆದರ್ಶ, ವೈಚಾರಿಕತೆ, ಕಾಯಕ, ದಾಸೋಹಗಳನ್ನು ಅನುಸರಿಸಿದರೆ ಅದೇ ಗುರುಮಲ್ಲೇಶ್ವರರಿಗೆ ಸಲ್ಲಿಸುವ ಗೌರವವಾಗಿದೆ ಎಂದು ಹೇಳಿದರು.

ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಮಾತನಾಡಿ, ಮನುಷ್ಯತ್ವ ಮೈಗೂಡಿಸಿಕೊಂಡಿದ್ದ ಗುರು ಮಲ್ಲೇಶ್ವರರು ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಕಾಯಕದ ಮಹತ್ವ ಕಲಿಸುವ ಮೂಲಕ ಬಸವಣ್ಣನವರ ಕಾಯಕ ದಾಸೋಹದ ಪರಿಕಲ್ಪನೆಯನ್ನು ಜನರಲ್ಲಿ ಮೂಡಿಸಿದವರು. ಜೊತೆಗೆ ಮೊದಲ ಬಾರಿಗೆ ಭಜನೆ ಪ್ರಾರಂಭಿಸುವ ಮೂಲಕ ಕನ್ನಡ ಸಾಹಿತ್ಯ ಸಂಸ್ಕೃತಿಯ ಉಳಿವಿಗೆ ಬೆಳೆಸುವ ಕೆಲಸಕ್ಕೆ ಬುನಾದಿ ಹಾಕಿದ್ದಾರೆ. ದೇವನೂರು ಗುರುಮಲ್ಲೇಶ್ವರ ಮಠವು ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಜನರಲ್ಲಿ ಪ್ರೀತಿ, ವಿಶ್ವಾಸ, ಶಾಂತಿ, ಸಮಾನತೆ ಮತ್ತು ಸೌಹಾರ್ದತೆಗೆ ಪ್ರೇರಣೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ನಮ್ಮ ಜನ ಶಾಂತಿ ಪ್ರಿಯರು. ಸಮಾಜದಲ್ಲಿ ಸಮಾನತೆ ಇದೆ. ಇಲ್ಲಿ ರಾಜಕೀಯ ಚರ್ಚೆ ನಡೆಯುವುದಿಲ್ಲ. ಈ ಕಾರಣದಿಂದಲೇ ಮಠ ರಾಜ್ಯಾದ್ಯಂತ ಅಪಾರವಾದ ಅಸಂಖ್ಯಾತ ಭಕ್ತರನ್ನು ಹೊಂದಿದೆ. ನಾನು ಓದುವಾಗ ದೇವನೂರು ಮಠದಲ್ಲಿ ಊಟ ಮಾಡಿದ್ದೇನೆ. ನಾನು ಈ ತಾಲೂಕಿನವನು ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಈ ಕಾರಣದಿಂದಲೇ ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ವೇಳೆ ಸಿಎಂ ಸಿದ್ದರಾಮಯ್ಯ ಅವರ ಮನವೊಲಿಸಿ ದೇವನೂರಿನ ಡಿಪ್ಲೊಮಾ ಕಾಲೇಜಿಗೆ ಅನುದಾನ ಮಂಜೂರು ಮಾಡಿಸಿದ್ದೆ ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಗುರುಮಲ್ಲೇಶ್ವರರು ಬಸವಾದಿ ಶರಣರ ಕಾಯಕ, ದಾಸೋಹ, ಸಮಾನತೆಯ ಸಂದೇಶವನ್ನು ಶ್ರೀಮಠದ ಕಾರ್ಯಗಳ ಮೂಲಕ ಅನುಷ್ಠಾನಗೊಳಿಸಿ ಈ ಭಾಗದ ಜನತೆಗೆ ಅಗತ್ಯ ಮಾರ್ಗದರ್ಶನ ನೀಡುವ ಮೂಲಕ ಸನ್ಮಾರ್ಗದಲ್ಲಿ ನಡೆಸುತ್ತಿದ್ದಾರೆ. ಗುರು ಮಲ್ಲೇಶ್ವರರು ಹುಟ್ಟಿದ ದಾಸೋಹದ ಬೆಂಕಿ ಇನ್ನೂ ಆರಿಲ್ಲ. ದಾಸೋಹದ ಜೊತೆಗೆ ಶಿಕ್ಷಣ ದಾಸೋಹ ನಡೆಸಿ ಈ ಭಾಗದ ಜನರಿಗೆ ಶ್ರೀಮಠವು ವರದಾನವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬದನವಾಳು ಖಾದಿ ಕೇಂದ್ರ ಅಭಿವೃದ್ಧಿಗೆ 45 ಕೋಟಿ ರೂ. ಅನುದಾನ ನೀಡಿದ್ದಾರೆ. ಅಲ್ಲದೇ ದೇವನೂರು ಏತ ನೀರಾವರಿ ಯೋಜನೆಗೆ 90 ಕೋಟಿ ರೂ.ಗಳನ್ನು ಮಂಜೂರು ಮಾಡುವ ಮೂಲಕ ನರಸಾಂಬುದಿ ಕೆರೆ ತುಂಬಿಸಿ ಈ ಭಾಗದಲ್ಲಿ ನೀರಾವರಿ ಕಲ್ಪಿಸುವ ಯೋಜನೆಗೆ ಸಹಕಾರಿಯಾಗಿದ್ದಾರೆ ಎಂದು ಹೇಳಿದರು.


ಇದಕ್ಕೂ ಮುನ್ನ ಮಠದ ಆವರಣದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ನೂತನ ಬಸವ ಮಹಾದ್ವಾರ ಹಾಗೂ ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ನೂತನ ಕಲ್ಯಾಣಿ ಉದ್ಘಾಟಿಸಿದರು. ದೇವನೂರಿನ ಮಹಾಂತ ಸ್ವಾಮೀಜಿ, ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಶಾಸಕ ಗಣೇಶ್ ಪ್ರಸಾದ್, ಮಾಜಿ ಶಾಸಕ ಕೇಶವ ಮೂರ್ತಿ, ಕಾಡ ಅಧ್ಯಕ್ಷ ಮರಿಸ್ವಾಮಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ವಾಲ್ಮೀಕ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ, ಎಸ್.ಸಿ. ಬಸವರಾಜು, ಮುಖಂಡರಾದ ಇಂದನ್ ಬಾಬು, ಬುಲೆಟ್ ಮಹದೇವಪ್ಪ, ಶಿವಪ್ಪ ದೇವರು, ಕೆಂಪಣ್ಣ, ಸದಾನಂದ, ಸದಾಶಿವ ಮೂರ್ತಿ, ಜಿ.ರಾಜೇಶ್ ಉಪಸ್ಥಿತರಿದ್ದರು.



ಕಾರ್ಯಕ್ರಮವನ್ನು ಮಾಜಿ ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

ಜಿ.ರಾಮೇಗೌಡ ನಿಧನ



ಭೇರ್ಯ, ಜು.1– ಸಾಲಿಗ್ರಾಮ ತಾಲೂಕಿನ ಮೂಡಲಬೀಡು ಗ್ರಾಮದ ನಿವಾಸಿ ಜಿ. ರಾಮೇಗೌಡ(85) ಬುಧವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಿಗ್ಗೆ 11.30ಕ್ಕೆ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಯೋಗೇಶ್



ಹುಣಸೂರು, ಜು.1– ತಾಲೂಕಿನ ಅಗ್ರಹಾರ ಗ್ರಾಮದ ವಾಜಿ ಛೇರ್ಮನ್ ಲೇ.ನಂಜುಂಡೇಗೌಡರ ಪುತ್ರ ಸರ್ವೇಯರ್ ಯೋಗೇಶ್ (48) ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಮೃತರ ತೋಟದಲ್ಲಿ ನಡೆಯಿತು.

ಚಿದರವಳ್ಳಿ ಪಿಎಸಿಎಸ್‌ಗೆ ಮಹದೇವ ಅಧ್ಯಕ್ಷ

ತಿ.ನರಸೀಪುರ, ಜು.1– ತಾಲೂಕಿನ ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೆಂಪನಪುರ ಮಹದೇವ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಇಂದ್ರೇಶ್ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಸಂಘದ ಆವರಣದಲ್ಲಿ ಉಪಾಧ್ಯಕ್ಷ ಹೆಚ್.ಟಿ.ಮಹದೇವ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ಮಹದೇವ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಸಂಘದ ಸಿಇಓ ಸಿ.ಪಿ. ರಾಜೇಂದ್ರ ಪ್ರಸಾದ್ ಘೋಷಿಸಿದರು. ಈ ವೇಳೆ ಎಲ್ಲಾ 12 ಮಂದಿ ಉಪಸ್ಥಿತರಿದ್ದು, ನೂತನ ಅಧ್ಯಕ್ಷರ ಆಯ್ಕೆಗೆ ಸರ್ವಾನುಮತದ ಅನುಮೋದನೆ ನೀಡಿದರು.

ಈ ವೇಳೆ ಸಂಘದ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಅಲ್ಲದೇ ನೂತನ ಅಧ್ಯಕ್ಷ ಕೆಂಪನಪುರ ಮಹದೇವ ಅವರನ್ನು ಅಭಿನಂದಿಸಿದರು.

ನೂತನ ಅಧ್ಯಕ್ಷ ಕೆಂಪನಪುರ ಮಹದೇವ ಮಾತನಾಡಿ, ರೈತರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಸಹಕಾರ ಸಂಘದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡು ತ್ತೇನೆ. ಅಲ್ಲದೇ ಸಂಘಕ್ಕೆ ದೊರೆಯಬೇಕಿರುವ ಅನುದಾನವನ್ನು ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರೊಂದಿಗೆ ನಿರಂತರ ಸಂಪರ್ಕ ಸಾಧಿಸಿ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ರೈತರು ಹಾಗೂ ಸಂಘದ ಷೇರುದಾರರಿಗೆ ನಿಯಮಾನುಸಾರ ದೊರೆಯುವ ಕೃಷಿ ಸಾಲ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲ ಸೇರಿದಂತೆ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಪಾರದರ್ಶಕವಾಗಿ ತಲುಪಿಸಲು ಬದ್ಧವಾಗಿರುವುದಾಗಿ ತಿಳಿಸಿದರು.

ಸಂಘದ ಆರ್ಥಿಕ ಸ್ಥಿತಿ ಇನ್ನಷ್ಟು ಬಲಪಡಿಸಿ, ಹಿಂದಿಗಿಂತಲೂ ಉತ್ತಮ ಲಾಭಾಂಶದತ್ತ ಕೊಂಡೊಯ್ಯಲು ನಿಟ್ಟಿನಲ್ಲಿ ಎಲ್ಲಾ ನಿರ್ದೇಶಕರ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುವ ಜೊತೆಗೆ ಸಂಘಕ್ಕೆ ಈಗಾಗಲೇ ನಿವೇಶನ ಖರೀದಿಸಿರುವುದರಿಂದ ತಮ್ಮ ಅಧಿಕಾರಾವಧಿಯಲ್ಲಿಯೇ ನೂತನ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಂಡು ರೈತರಿಗೆ ಇನ್ನಷ್ಟು ಉತ್ತಮ ಸೇವೆ ಒದಗಿಸುವ ಗುರಿ ಹೊಂದಿರುವುದಾಗಿ ತಿಳಿಸಿದರು.

ನಿರ್ಗಮಿತ ಅಧ್ಯಕ್ಷ ಇಂದ್ರೇಶ್ ಮಾತನಾಡಿದರು. ಈ ವೇಳೆ ನಿರ್ದೇಶಕರಾದ ಚೌಡಯ್ಯ, ಆರ್.ಜಿ.ಶಿವಮೂರ್ತಿ, ಸಿದ್ದು, ಜಿ.ವಿಜಯಕುಮಾರ್, ಮಹದೇವ, ಸಿ.ಎನ್. ವಿಜಯಕುಮಾರ್, ಗೌರಮ್ಮ, ಬಿ.ಲಕ್ಷ್ಮಿ ಹಾಗೂ ಮೇಲ್ವಿಚಾರಕ ಆರ್.ಅನಿಲ್ ಕುಮಾರ್, ಗ್ರಾಮದ ಮುಖಂಡರು ಯಜಮಾನರು ಉಪಸ್ಥಿತರಿದ್ದರು.



ಚಿದರವಳ್ಳಿ ಪಿಎಸಿಎಸ್ ನೂತನ ಅಧ್ಯಕ್ಷ ಮಹದೇವ ಅವರನ್ನು ನಿರ್ದೇಶಕರು, ಇತರರು ಸನ್ಮಾನಿಸಿದರು.

ಹುಣಸೂರಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆ

ಹುಣಸೂರು, ಜು.1– ರಾಷ್ಟ್ರೀಯ ವೈದ್ಯರ ದಿನದ ಅಂಗವಾಗಿ ಹುಣಸೂರಿನ ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ವತಿಯಿಂದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಕರ್ತವ್ಯ ನಿರತ ವೈದ್ಯರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಆಸ್ಪತ್ರೆ ಒಳ ರೋಗಿಗಳಿಗೆ ಹಣ್ಣು, ಹಂಪಲು ಹಾಗೂ ಬ್ರೆಡ್ ವಿತರಿಸುವ ಮೂಲಕ ವೈದ್ಯರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು ವೈದ್ಯರ ಸೇವೆ ಶ್ಲಾಘಿಸಿ, ಸಮಾಜದಲ್ಲಿ ವೈದ್ಯರ ಪಾತ್ರದ ಮಹತ್ವ ತಿಳಿದುಕೊಂಡರು.

ಈ ವೇಳೆ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಶಿವಶಂಕರ್, ತಾಲೂಕು ಆರೋಗ್ಯಾಧಿಕಾರಿ ಡಾ.ಎ.ರವಿಕುಮಾರ್, ಡಾ.ಸತೀಶ್, ಸರ್ಜನ್ ಅನಂತಶ್ರೀನಿವಾಸ್, ಶುಶ್ರೂಷಕ ಅಧೀಕ್ಷಕಿ ಕಣ್ಣಮ್ಮ, ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ಶಿಕ್ಷಕರಾದ ಲೋಕೇಶ್, ಮಂಜುನಾಥ್, ಸುಧಾಕರ್ ಹಾಗೂ ಎಂಬತ್ತು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ವೈದ್ಯರನ್ನು ಸನ್ಮಾನಿಸಲಾಯಿತು.

ಪಿ.ಎನ್.ನಾಗೇಶ್ವರಿಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ನಿಂಗಮ್ಮ ಸಿ ಬೆಟ್‌ಸೂರ್ ಅವರ ಮಾರ್ಗದರ್ಶನದಲ್ಲಿ ನಾಗೇಶ್ವರಿ.ಪಿ.ಎನ್. ಅವರು ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವ ವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಮೂರನೇ ಪುಟದಿಂದ

ಭಕ್ತರಿಗೆ ಬೆಳಿಗ್ಗೆಯಿಂದ ರಾತ್ರಿವರೆಗೂ ಅವಕಾಶ

ವಾಹನ ತರದಂತೆ ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಗಿದೆ. ಮಹಿಷಾಸುರ ಪ್ರತಿಮೆ ಬಳಿಯಿಂದ ಬ್ಯಾಟರಿ ವಾಹನದಲ್ಲಿ ದೇವಾಲಯದವರೆಗೆ ಅಗತ್ಯವುಳ್ಳವರು ಬರಬಹುದಾಗಿದೆ ಎಂದರು

ಉಚಿತ ಬಸ್ ವ್ಯವಸ್ಥೆ : ಲಲಿತ ಮಹಲ್ ಪ್ಯಾಲೆಸ್ ಮೈದಾನದಿಂದ ಭಕ್ತರನ್ನು ಉಚಿತವಾಗಿ ಬೆಟ್ಟಕ್ಕೆ ಕರೆದೊಯ್ಯಲು ಅಗತ್ಯ ಸಂಖ್ಯೆಯಲ್ಲಿ ಬಸ್ ವ್ಯವಸ್ಥೆ ಮಾಡಲಾಗುತ್ತದೆ. ದೇವಾಲಯಕ್ಕೆ ತೆರಳಲು ಧರ್ಮದರ್ಶನ ಹಾಗೂ 2 ಸಾವಿರ ರೂ. ಟಿಕೆಟ್ ಪಡೆದ ಭಕ್ತರಿಗೆ ಪ್ರತ್ಯೇಕ ಸಾಲಿನ ವ್ಯವಸ್ಥೆ ಮಾಡಲಾಗುತ್ತದೆ.

ಮೆಟ್ಟಿಲು ಮಾರ್ಗದಲ್ಲಿ ಭದ್ರತೆ: ಮೆಟ್ಟಿಲು ಹತ್ತಿ ಬೆಟ್ಟಕ್ಕೆ ಬರುವ ಭಕ್ತರ ಸುರಕ್ಷತೆಗೆ ಕ್ರಮ ಕೈಗೊಳ್ಳಲಾಗುತ್ತದೆ. ವಿದ್ಯುತ್ ದೀಪದ ವ್ಯವಸ್ಥೆ, ಭದ್ರತೆ ಸಿಬ್ಬಂದಿ ನಿಯೋಜನೆ ಮಾಡಲು ಸೂಚಿಸಲಾಗಿದೆ. ಮೆಟ್ಟಿಲು ಹತ್ತಿ ಬರುವವರಿಗೆ ಉಚಿತವಾಗಿ ಡ್ರೈ ಫ್ರೂಟ್ಸ್, ಬಾದಾಮಿ ಹಾಲು ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತದೆ. ಕೆಲವೆಡೆ ಶೌಚಾಲಯ ತೆರೆಯಲಾಗುತ್ತದೆ. ದೇವಿಯ ದರ್ಶನ ಪಡೆಯುವ ಎಲ್ಲ ಭಕ್ತರಿಗೂ ಕುಂಕುಮ ಪ್ರಸಾದ, ಮುತ್ತೈದೆಯರಿಗೆ ಮಡಿಲಕ್ಕಿ ಪ್ಯಾಕೆಟ್‌ಗಳನ್ನು ಉಚಿತವಾಗಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನೀಡಲಾಗುತ್ತದೆ ಎಂದರು.

ಸಭೆಯಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಕ್ ತನ್ವೀರ್ ಆಸಿಫ್, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಎಂ.ಜೆ. ರೂಪ, ಡಿಸಿಪಿಗಳಾದ ಡಾ.ಹರ್ಷ ಪ್ರಿಯಂವದ, ಕೆ.ಎಸ್.ಸುಂದರ್ ರಾಜ್, ಉಪವಿಭಾಗಾಧಿಕಾರಿ ಆಶಪ್ಪ, ತಹಶೀಲ್ದಾರ್ ಮಹೇಶ್‌ಕುಮಾರ್, ದೇವಾಲಯ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಮೋಹನ್, ಸಾರಿಗೆ ಸಂಸ್ಥೆಯ ಗ್ರಾಮಾಂತರ ವಿಭಾಗೀಯ ನಿಯಂತ್ರಣಾ ಧಿಕಾರಿ ಹೆಚ್.ಟಿ.ವೀರೇಶ್, ನಗರ ವಿಭಾಗೀಯ ನಿಯಂತ್ರಣಾಧಿಕಾರಿ ಜಗದೀಶ್‌ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ಬ್ರೇಕ್ ಹಾಕಲು ಸರ್ಕಾರ ನಿರ್ಧಾರ

ನೀಡಲಾಗುವುದು ಎಂಬ ಘೋಷಣೆ ಮಾಡಿದ್ದರು. ಘೋಷಣೆ ವೇಳೆ ಇಂದಿನ ಮುಖ್ಯಮಂತ್ರಿ ಹಾಗೂ ಅಂದಿನ ಉಪ ಮುಖ್ಯಮಂತ್ರಿ ಆಗಿದ್ದ ಡಿ.ಕೆ.ಶಿವಕುಮಾರ್ ಸಹ ವೇದಿಕೆ ಹಂಚಿಕೊಂಡು ಗ್ಯಾರಂಟಿಗಳ ವಾಗ್ದಾನ ಮಾಡಿದ್ದರು. ಇದೀಗ ಕೊಟ್ಟ ಮಾತಿಗೆ ತಪ್ಪಿ, ಶಕ್ತಿ ಯೋಜನೆ ಸೌಲಭ್ಯ ಪಡೆಯುವವರಿಗೆ ಗುರುತಿನ ಚೀಟಿ ನೀಡುವುದಾಗಿ ತಿಳಿಸಿದ ಬೆನ್ನಲ್ಲೇ, ಗೃಹಜ್ಯೋತಿ ಸೌಲಭ್ಯ ಪಡೆಯುತ್ತಿರುವ ಉಳ್ಳವರನ್ನು ಪತ್ತೆ ಹಚ್ಚಲು ಇಂದಿನಿಂದ ರಾಜ್ಯಾದ್ಯಂತ ಪುನರ್ ಪರಿಶೀಲನಾ ಕಾರ್ಯ ಕೈಗೆತ್ತಿಕೊಂಡಿದೆ.

ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಮೀಟರ್ ರೀಡರ್‌ಗಳು ಹಾಗೂ ಸಿಬ್ಬಂದಿ ಗ್ರಾಹಕರ ಮನೆಗಳಿಗೆ ಭೇಟಿ ನೀಡಿ ಫಲಾನುಭವಿಗಳ ದಾಖಲೆ ಪರಿಶೀಲಿಸಲಿದ್ದಾರೆ. ಮೊಬೈಲ್ ಆಪ್ ಹಾಗೂ ಘೋಷಣಾ ಪತ್ರದ ಮೂಲಕ ಅರ್ಜಿ ಭರ್ತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿದ್ದಾರೆ. ಸಿಬ್ಬಂದಿಗಳು ಮನೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆಧಾರ್ ಕಾರ್ಡ್, ಫಲಾನುಭವಿಯ ಪಾಸ್‌ಪೋರ್ಟ್ ಅಳತೆ ಭಾವಚಿತ್ರ ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಹಾಗೂ ಜಾತಿ ಪ್ರಮಾಣ ಪತ್ರ ತೋರಿಸುವುದು ಕಡ್ಡಾಯ. ಬಾಡಿಗೆದಾರರು ಒಪ್ಪಂದ ಪತ್ರದ ನಕಲು ಪ್ರತಿಯನ್ನು ನೀಡುವಂತೆ ಸರ್ಕಾರ ಸುತ್ತೋಲೆ ಹೊರಡಿಸಿದೆ. ಎರಡು ತಿಂಗಳು ಪುನರ್ ಪರಿಶೀಲನಾ ಕಾರ್ಯ ನಡೆಯಲಿದ್ದು, ನಂತರ ಉಚಿತ ವಿದ್ಯುತ್ ಸೌಲಭ್ಯವನ್ನು ಅರ್ಹ ಬಿಪಿಎಲ್ ಪಡಿತರದಾರರಿಗೆ ಸೀಮಿತಗೊಳಿಸಲು ಸರ್ಕಾರ ಮುಂದಾಗಿದೆ.

ಗೃಹಜ್ಯೋತಿ ಮರು ಪರಿಶೀಲನೆಗೆ ಜೆಡಿಎಸ್ ಕಿಡಿ

ಬೆಂಗಳೂರು: ಗೃಹಜ್ಯೋತಿ ಯೋಜನೆಯ ಮರು ಪರಿಶೀಲನೆ ವಿರೋಧಿಸಿ ಜೆಡಿಎಸ್ ಪಕ್ಷವು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ, ಸರ್ಕಾರದ ಕ್ರಮವನ್ನು ಗ್ಯಾರಂಟಿ ಮೋಸ ಎಂದು ಟೀಕಿಸಿದೆ. ಅಲ್ಲದೆ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಉದ್ದೇಶಿಸಿ ಹಲವು ಪ್ರಶ್ನೆಗಳನ್ನು ಕೇಳಿದೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ವೇಳೆ ಎಲ್ಲರಿಗೂ ಉಚಿತ ವಿದ್ಯುತ್, ಯಾವುದೇ ಷರತ್ತು ಇಲ್ಲ ಎಂದು ಭರವಸೆ ನೀಡಿತ್ತು. ಆದರೆ ಈಗ ಗೃಹಜ್ಯೋತಿ ಯೋಜನೆಯನ್ನು ಮರು ಪರಿಶೀಲನೆ ಮಾಡುವ ಮೂಲಕ ಫಲಾನುಭವಿಗಳನ್ನು ಕಡಿಮೆ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಜೆಡಿಎಸ್ ಆರೋಪಿಸಿದೆ.

ಮನೆ–ಮನೆಗೆ ತೆರಳಿ ಎಸ್ಕಾಂ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಈ ವೇಳೆ ವಿವಿಧ ದಾಖಲೆಗಳನ್ನು ಕೇಳಿ ಜನರನ್ನು ಆತಂಕಕ್ಕೆ ದೂಡಲಾಗುತ್ತಿದೆ. ದಾಖಲೆಗಳ ಹೆಸರಿನಲ್ಲಿ ಜನರನ್ನು ಅನಗತ್ಯವಾಗಿ ಅಲೆದಾಡಿಸಲಾಗುತ್ತಿದೆ ಎಂದು ಜೆಡಿಎಸ್ ಪಕ್ಷ ಟೀಕಿಸಿದೆ. ಉಚಿತ ವಿದ್ಯುತ್ ಪಡೆಯಲು ಪಾನ್ ಕಾರ್ಡ್ ಯಾಕೆ ಬೇಕು. ವಿದ್ಯುತ್ ಸಂಪರ್ಕಕ್ಕೂ ಜಾತಿ ಪ್ರಮಾಣ ಪತ್ರಕ್ಕೂ ಏನು ಸಂಬಂಧ ಕರ್ನಾಟಕದ ನಿವಾಸಿ ಎಂದು ದೃಢೀಕರಿಸಲು ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿ ಸಾಕಾಗುವುದಿಲ್ಲವೇ ಎಂದು ಸರ್ಕಾರಕ್ಕೆ ಜೆಡಿಎಸ್ ಪ್ರಶ್ನಿಸಿದೆ.

5 ಕೋಟಿ ಬಿಡುಗಡೆ

ಆಧರಿಸಿ ಶೇ.10ರಷ್ಟೂ ಪರಿಹಾರ ಕೇಂದ್ರದಿಂದ ಸಿಕ್ಕಿಲ್ಲ ಎಂದರು.

ದಾಖಲೆ ವಿತರಣೆಗೆ ಮತ್ತಷ್ಟು ವೇಗ : ಕಂದಾಯ ಇಲಾಖೆಯಲ್ಲಿ ಪೌತಿ ಖಾತೆ, ಹಕ್ಕುಪತ್ರ ವಿತರಣೆ, ಆಕಾರ್ ಬಂದ್, ಕಂದಾಯ ಗ್ರಾಮಗಳ ಘೋಷಣೆ ಕಾರ್ಯ ಕ್ರಮಗಳು ಕಳೆದ ಮೂರು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿವೆ. ಇದಕ್ಕೆ ಮತ್ತಷ್ಟು ವೇಗ ನೀಡಲು ತೀರ್ಮಾನಿಸಿದ್ದು, ಕಾಲ ಮಿತಿಯೊಳಗೆ ಪೂರ್ಣಗೊಳಿಸಲಾಗುವುದು.

ದೇವಸ್ಥಾನ ಆಸ್ತಿ ತೆರವು: ಧಾರ್ಮಿಕ ಇಲಾಖೆಯಲ್ಲಿ ಎ, ಬಿ, ಸಿ ವರ್ಗದ ದೇವಸ್ಥಾನಗಳ ಆಸ್ತಿ ಒತ್ತುವರಿ ಆಗಿರುವುದು ಕಂಡು ಬಂದಿದೆ, ಸರ್ವೆ ನಡೆಸಿ, ಒತ್ತುವರಿ ತೆರವಿಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ದೇವಾಲಯಗಳಲ್ಲಿ ಭಕ್ತರಿಗೆ ದರ್ಶನ ಪಡೆಯಲು, ಪ್ರಸಾದ ಸ್ವೀಕಾರ ಮತ್ತು ವಸತಿಗೆ ತೊಂದರೆ ಆಗಬಾರದು. ದೇವಸ್ಥಾನಕ್ಕೆ ಬರುವ ಹಣವನ್ನು ಪ್ರಾಧಿಕಾರದ ಅನುಮತಿ ಪಡೆದು ಖರ್ಚು ಮಾಡಬೇಕು. ಯಾವುದೇ ಕಾರಣಕ್ಕೂ ಅನಗತ್ಯ ವೆಚ್ಚಕ್ಕೆ ಅವಕಾಶ ನೀಡಬಾರದು. ನಿಯಮ ತಪ್ಪಿದರೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು.

ಕ್ರೀಡೆಗೆ ನೆರವು: ಕ್ರೀಡಾ ಇಲಾಖೆಗೆ ಸಂಬಂಧಿಸಿದಂತೆ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆ ನೀಡಲಿದೆ. ಮೂಲಸೌಕರ್ಯ ವ್ಯವಸ್ಥೆ ಕಡಿಮೆ ಇರುವ ಜಿಲ್ಲಾ ಮಟ್ಟದ ಶಾಲಾ–ಕಾಲೇಜುಗಳಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು. ಕ್ರೀಡಾಪಟುಗಳಿಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು.

ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಗೃಹ ಇಲಾಖೆ ನೇಮಕಾತಿಯಲ್ಲಿ ಶೇ.3ರಷ್ಟು ಮತ್ತು ಇತರೆ ಇಲಾಖೆಗಳ ನೇಮಕಾತಿಯಲ್ಲಿ ಶೇ.2 ರಷ್ಟು ಮೀಸಲಾತಿ ನೀಡಲಾಗುವುದು ಎಂದರು.

ಕಡಿತಗೊಳಿಸಲ್ಲ!

ಹಾಕುವ ಕ್ರಮವಲ್ಲ. ಈಗಾಗಲೇ ಯೋಜನೆಯಡಿ ಉಚಿತ ವಿದ್ಯುತ್ ಸೌಲಭ್ಯ ಪಡೆಯುತ್ತಿರುವವರಲ್ಲಿ ಅರ್ಹರನ್ನು ಗುರುತಿಸಿ, ಅನರ್ಹರು ಸೌಲಭ್ಯ ಪಡೆಯದಂತೆ ನೋಡಿಕೊಳ್ಳುವ ಆಡಳಿತಾತ್ಮಕ ಪ್ರಕ್ರಿಯೆಯಷ್ಟೇ ಎಂದು ಸಚಿವರು ಸ್ಪಷ್ಟಪಡಿಸಿದರು.

ಪ್ರಸ್ತುತ ರಾಜ್ಯದಲ್ಲಿ ಸುಮಾರು 1 ಕೋಟಿ 64 ಲಕ್ಷ ಕುಟುಂಬಗಳು ಗೃಹಜ್ಯೋತಿ ಯೋಜನೆಯ ಲಾಭ ಪಡೆಯುತ್ತಿವೆ. ಯೋಜನೆಯ ಪಾರದರ್ಶಕತೆ ಕಾಪಾಡುವ ಉದ್ದೇಶದಿಂದ ಫಲಾನುಭವಿಗಳ ಮಾಹಿತಿ ಸಂಗ್ರಹಿಸಲಾಗುತ್ತಿದ್ದು, ಅರ್ಹತೆ ಹೊಂದಿರುವ ಯಾರಿಗೂ ಯೋಜನೆಯ ಸೌಲಭ್ಯದಿಂದ ವಂಚಿತರಾಗುವ ಪರಿಸ್ಥಿತಿ ಉಂಟಾಗುವುದಿಲ್ಲ ಎಂದು ಭರವಸೆ ನೀಡಿದರು.

ಅರ್ಜಿಯಲ್ಲಿ ಜಾತಿ ವಿವರಗಳನ್ನು ಕೇಳುತ್ತಿರುವ ಬಗ್ಗೆ ವ್ಯಕ್ತವಾಗಿರುವ ಆಕ್ಷೇಪಗಳಿಗೂ ಪ್ರತಿಕ್ರಿಯಿಸಿ, ಜಾತಿ ಮಾಹಿತಿ ಸಂಗ್ರಹಿಸುವುದು ಕೇವಲ ಆಡಳಿತಾತ್ಮಕ ಮತ್ತು ದಾಖಲಾತಿ ಉದ್ದೇಶಕ್ಕಷ್ಟೇ ಸೀಮಿತ ವಾಗಿದೆ. ಇದರಿಂದ ಯಾವುದೇ ರೀತಿಯ ತಾರತಮ್ಯ ನಡೆಯುವುದಿಲ್ಲ. ಅರ್ಹತೆ ಹೊಂದಿರುವ ಪ್ರತಿಯೊಬ್ಬ ಫಲಾನು ಭವಿಗೂ ಯಾವುದೇ ಭೇದ ಭಾವವಿಲ್ಲದೇ ಗೃಹಜ್ಯೋತಿ ಯೋಜನೆಯ ಸೌಲಭ್ಯ ದೊರೆಯಲಿದೆ ಎಂದರು.

ಮಕ್ಕಳ ಸುರಕ್ಷತೆ ಶಾಲೆಯ ಜವಾಬ್ದಾರಿ

ತಾಯಿಯ ಆರೋಪ: 2025ರ ಆಗಸ್ಟ್ 1ರಂದು ನಡೆದ ಘಟನೆಗೆ ಸಂಬಂಧಿಸಿ ದಂತೆ ವಿದ್ಯಾರ್ಥಿಯ ತಾಯಿ ಸೆಪ್ಟೆಂಬರ್ 5, 2025ರಂದು ಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ತಮ್ಮ ದೂರಿನಲ್ಲಿ, ಈ ದುರ್ಘಟನೆ ಮತ್ತೊಬ್ಬ ಮಗುವಿನ ಪ್ರತ್ಯೇಕ ಕೃತ್ಯದಿಂದ ಮಾತ್ರ ಸಂಭವಿಸಿದ್ದಲ್ಲ. ಶಾಲಾ ಬಸ್‌ನಲ್ಲಿ ಸಮರ್ಪಕ ಮೇಲ್ವಿಚಾರಣೆ ಒದಗಿಸದಿರುವುದು, ಬಸ್‌ನಲ್ಲಿ ಅಟೆಂಡರ್ ಅನ್ನು ನಿಯೋಜಿಸದಿರುವುದು ಹಾಗೂ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳದಿರುವ ಶಾಲಾ ಆಡಳಿತದ ನಿರ್ಲಕ್ಷ್ಯವೇ ಈ ಘಟನೆಗೆ ಕಾರಣ ಎಂದು ಆರೋಪಿಸಿದ್ದರು.

ಶಾಲೆಯ ವಾದ ತಿರಸ್ಕರಿಸಿದ ನ್ಯಾಯಾಲಯ: ಶಾಲೆಯ ಪರ ವಕೀಲರು, ಶಾಲಾ ಸಮಯದ ನಂತರ ಬಸ್‌ನಲ್ಲಿ ನಡೆದ ಮತ್ತೊಬ್ಬ ವಿದ್ಯಾರ್ಥಿಯ ಕೃತ್ಯಕ್ಕೆ ಆಡಳಿತ ಮಂಡಳಿಯನ್ನು ಹೊಣೆಗಾರರನ್ನಾಗಿ ಮಾಡಲಾಗುವುದಿಲ್ಲ. ಬಸ್‌ನಲ್ಲಿ ಅಟೆಂಡರ್ ಇದ್ದರು ಎಂದು ವಾದಿಸಿದರು.

ಆದರೆ ಈ ವಾದವನ್ನು ನ್ಯಾಯಾಲಯ ಒಪ್ಪಲಿಲ್ಲ. ಶಾಲಾ ಆಡಳಿತದ ಹೊಣೆಗಾರಿಕೆ ಎಷ್ಟರ ಮಟ್ಟಿಗೆ ಇದೆ ಎಂಬುದು ತನಿಖೆ ಪೂರ್ಣಗೊಂಡ ನಂತರವೇ ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಹಂತದಲ್ಲಿ ತನಿಖೆಯನ್ನು ತಡೆಯಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಶಾಲೆಗಳ ಹೊಣೆಗಾರಿಕೆ ವಿವರಿಸಿದ ನ್ಯಾಯಾಲಯ: ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದಿಪಡಿಸುವಿಕೆ ಮುಂತಾದವು) (ತಿದ್ದುಪಡಿ) ನಿಯಮಗಳು, 2018 ಪ್ರಕಾರ, ಶಾಲಾ ಸಾರಿಗೆ ಸೇರಿದಂತೆ ಶಿಕ್ಷಣ ಸಂಸ್ಥೆಗಳ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ನ್ಯಾಯಾಲಯ ನೆನಪಿಸಿದೆ. ಶಾಲಾ ಬಸ್‌ನಲ್ಲಿ ಪ್ರಯಾಣಿಸುವ ಮಗುವಿನ ಸುರಕ್ಷತೆ ಶಾಲೆಯ ಜವಾಬ್ದಾರಿಯಾಗಿದೆ. ಮಗು ಮನೆ ತಲುಪು ವವರೆಗೆ, ಅದು ಕೊನೆಯ ನಿಲ್ದಾಣವಾಗಿ ದ್ದರೂ ಸಹ, ಶಾಲೆ ತನ್ನ ಹೊಣೆಗಾರಿಕೆ ಯಿಂದ ಹಿಂದೆ ಸರಿಯಲು ಸಾಧ್ಯವಿಲ್ಲ. ಕಾನೂನು ವಿಧಿಸಿರುವ ಕರ್ತವ್ಯಗಳನ್ನು ಶಾಲೆಗಳು ಉಲ್ಲಂಘಿಸುವಂತಿಲ್ಲ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ.

15 ದಿನ ವಿಸ್ತರಿಸಿದ ಸಿಎಂ ಯೋಗಿ ಸರ್ಕಾರ

ಜೂನ್‌ನಲ್ಲಿ ವಿರೋಧ ಪಕ್ಷಗಳು ಆರೋಪಿಸಿದವು. ಜೂನ್ 13 ರಂದು, ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಈ ಕುರಿತು ಎಸ್‌ಐಟಿ ತನಿಖೆಗೆ ಆದೇಶಿಸುವಂತೆ ಮುಖ್ಯಮಂತ್ರಿಯನ್ನು ಕೋರಿತು. ಸರ್ಕಾರವು ತಕ್ಷಣವೇ ಲಕ್ನೋ ವಿಭಾಗೀಯ ಆಯುಕ್ತ (ಐಎಎಸ್) ವಿಜಯ್ ವಿಶ್ವಾಸ್ ಪಂತ್, ಐಜಿ ಕಿರಣ್ ಎಸ್ ಮತ್ತು ಹಣಕಾಸು ಇಲಾಖೆಯ ವಿಶೇಷ ಕಾರ್ಯದರ್ಶಿ ನೀಲ್ ರತನ್ ಅವರನ್ನು ಒಳಗೊಂಡ ಮೂವರು ಸದಸ್ಯರ ಎಸ್‌ಐಟಿ ರಚಿಸಿತ್ತು.

ಆರಂಭದಲ್ಲಿ, ಎಸ್‌ಐಟಿಗೆ 15 ದಿನಗಳಲ್ಲಿ ಅಂತಿಮ ತನಿಖಾ ವರದಿ ನೀಡಲು ಸೂಚಿಸಲಾಗಿತ್ತು. 7 ದಿನಗಳಲ್ಲಿ ಪ್ರಾಥಮಿಕ ವರದಿಯನ್ನು ಸಲ್ಲಿಸಬೇಕಾಗಿತ್ತು. ಆದರೆ, ಪ್ರಕರಣದಲ್ಲಿ ಹೆಚ್ಚಿನ ಆರೋಪಿಗಳನ್ನು ವಿಚಾರಣೆ ನಡೆಸುವ ಅಗತ್ಯವಿರುವ ಕಾರಣ ಅದರ ಗಡುವನ್ನು ಈಗ ವಿಸ್ತರಿಸಲಾಗಿದೆ ಎಂದು ತಿಳಿಸಿದ್ದಾರೆ.

ಲೆಕ್ಕಾಚಾರ ಸಂಬಂಧ ಹೊಸ ಮಾರ್ಗಸೂಚಿ

ಸಂಬಳ ಪಡೆಯುವ ವ್ಯಕ್ತಿಗಳಿಗೆ, ಹಿಂದಿನ ವರ್ಷದ ಐಟಿಆರ್ ಮಾತ್ರ ವಾರ್ಷಿಕ ಆದಾಯವನ್ನು ಲೆಕ್ಕ ಹಾಕಲು ಸಾಕು. ಹಿಂದಿನ ವರ್ಷವನ್ನು ಮಾತ್ರ ಪರಿಗಣಿಸಲು ಕಾರಣವೆಂದರೆ ಬಡ್ತಿಗಳ ಆರ್ಥಿಕ ಪರಿಣಾಮವು ಗಮನಾರ್ಹವಾಗಿದೆ. ಅದು ಆ ವರ್ಷದ ಐಟಿಆರ್‌ನಲ್ಲಿ ಮಾತ್ರ ಪ್ರತಿಫಲಿಸಬಹು ಎಂದು ಕೋರ್ಟ್ ಹೇಳಿದೆ.

ಆದಾಗ್ಯೂ, ಅಪಘಾತಕ್ಕೆ ಸ್ವಲ್ಪ ಮೊದಲು ಬಡ್ತಿ ಅಥವಾ ವೇತನ ಪರಿಷ್ಕರಣೆ ನಡೆದಿದ್ದು, ಇತ್ತೀಚಿನ ರಿಟರ್ನ್‌ನಲ್ಲಿ ಅದು ಸಂಪೂರ್ಣವಾಗಿ ಪ್ರತಿಫಲಿಸದಿದ್ದರೆ, ನ್ಯಾಯಾಲಯಗಳು ಬಡ್ತಿ ಪತ್ರಗಳು ಮತ್ತು ಇತರ ದೃಢೀಕೃತ ಹಣಕಾಸು ದಾಖಲೆಗಳನ್ನು ಸಹ ಪರಿಗಣಿಸಬಹುದು ಎಂದಿದೆ.

ಸಂತ್ರಸ್ತ ಕುಟುಂಬಕ್ಕೆ ಪರಿಹಾರ ಹೆಚ್ಚಳ: ಶ್ರೀರಾಮ್ ಜನರಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ವಿರುದ್ಧ ನಿರ್ಮಾಣ ಉದ್ಯಮಿ ರಶ್ಮಿರೇಖಾ ತ್ರಿಪಾಠಿ ಅವರ ಕುಟುಂಬ ಸಲ್ಲಿಸಿದ್ದ ಮೇಲ್ಮನವಿಯನ್ನು ತೀರ್ಮಾನಿಸುವಾಗ ಈ ತೀರ್ಪು ಬಂದಿದೆ. ಸುಪ್ರೀಂ ಕೋರ್ಟ್ ಅರ್ಜಿದಾರರಿಗೆ ಪಾವತಿಸಬೇಕಾದ ಪರಿಹಾರ ಮೊತ್ತವನ್ನು ಹೆಚ್ಚಿಸಿದೆ.

ಮೃತ 39 ವರ್ಷದ ನಿರ್ಮಾಣ ಉದ್ಯಮಿ, ಹಿಂದಿನ ಎರಡು ವರ್ಷಗಳಲ್ಲಿ ಸುಮಾರು 11.6 ಲಕ್ಷ ಮತ್ತು 15.06 ಲಕ್ಷ ರೂ.ಗಳ ವಾರ್ಷಿಕ ಆದಾಯವನ್ನು ಬಹಿರಂಗಪಡಿಸಿದ್ದಾರೆ ಎಂದು ಪೀಠವು ಗಮನಿಸಿದೆ.

ಒಡಿಶಾ ಹೈಕೋರ್ಟ್ ಎರಡೂ ರಿಟರ್ನ್‌ಗಳ ಸರಾಸರಿಯನ್ನು ಲೆಕ್ಕಹಾಕಿ ಅವರ ವಾರ್ಷಿಕ ಆದಾಯವನ್ನು 13.33 ಲಕ್ಷ ರೂಪಾಯಿ ಎಂದು ನಿಗದಿಪಡಿಸಿದ್ದರೆ, ಸುಪ್ರೀಂ ಕೋರ್ಟ್ ಮೃತರ ನಿರ್ಮಾಣ ವ್ಯವಹಾರದ ಸ್ವರೂಪವೂ ಪರಿಗಣನೆಗೆ ಅರ್ಹವಾಗಿದೆ ಎಂದು ತೀರ್ಪು ನೀಡಿ ಅವರ ವಾರ್ಷಿಕ ಆದಾಯವನ್ನು 14 ಲಕ್ಷ ರೂಪಾಯಿ ಎಂದು ನಿಗದಿಪಡಿಸಿದೆ.

ಪರಿಣಾಮವಾಗಿ, ನ್ಯಾಯಾಲಯವು ಮೃತರ ಕುಟುಂಬಕ್ಕೆ ನೀಡಬೇಕಾದ ಪರಿಹಾರವನ್ನು ಹೈಕೋರ್ಟ್ ನೀಡಿದ್ದ 1.87 ಕೋಟಿ ರೂ.ಗಳಿಂದ 1.97 ಕೋಟಿ ರೂ.ಗಳಿಗೆ ಹೆಚ್ಚಿಸಿತು. ಇದಕ್ಕೆ ವಾರ್ಷಿಕವಾಗಿ ಶೇಕಡಾ 6ರಷ್ಟು ಬಡ್ಡಿ ನೀಡುವಂತೆಯೂ ಸೂಚಿಸಿತು.

ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡರ ಪತ್ನಿಗೆ ಅಶ್ಲೀಲ ಕಮೆಂಟ್: ದೂರು ದಾಖಲು

ಮೈಸೂರು, ಜು.1–ಹುಣಸೂರು ಶಾಸಕರಾದ ಜಿ.ಡಿ. ಹರೀಶ್‌ಗೌಡರ ಪತ್ನಿ ವರ್ಷ ಹರೀಶ್‌ಗೌಡರಿಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಕಮೆಂಟ್ ಹಾಕಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರು ದಾಖಲಿಸಲಾಗಿದೆ.

ವರ್ಷ ಹರೀಶ್‌ಗೌಡರು ತಮ್ಮ ಇನ್ಸ್ಟಾಗ್ರಾಂ ಅಕೌಂಟ್‌ನಲ್ಲಿ ಹಾಕಿದ್ದ ಪೋಸ್ಟ್‌ಗೆ dkgowda8456 ಹೆಸರಿನ ಅನಾಮಿಕ ಖಾತೆಯಿಂದ ಅಶ್ಲೀಲ ಕಮೆಂಟ್ ಹಾಕಲಾಗಿದೆ. ಇದರಿಂದ ಆಘಾತಕ್ಕೊಳಗಾಗಿರುವ ವರ್ಷ ಹರೀಶ್ ಗೌಡರು, ಅಶ್ಲೀಲ ಕಮೆಂಟ್ ಹಾಕಿ ತಮ್ಮ ಭಾವನೆಗೆ ಧಕ್ಕೆ ಉಂಟು ಮಾಡಿರುವ ಆರೋಪಿಯನ್ನು ಪತ್ತೆ ಮಾಡಿ, ಆತನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ವರ್ಷ ಹರೀಶ್ ಗೌಡರು ಸಾರ್ವಜನಿಕ ವಲಯದಲ್ಲಿ ಸಕ್ರಿಯವಾಗಿದ್ದು, ಹಲವು ಜನಪರ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಆ ಮೂಲಕ ಕ್ಷೇತ್ರದ ಜನರ ಕಷ್ಟ–ಸುಖಗಳಲ್ಲಿ ಭಾಗಿಯಾಗುತ್ತಿದ್ದಾರೆ.

ವರ್ಷ ಅವರ ಈ ಜನಪರ ಕಾರ್ಯವೈಖರಿಯ ಸಹಿಸದ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಈ ರೀತಿಯಾಗಿ ಅಶ್ಲೀಲ ಕಮೆಂಟ್ ಮಾಡುತ್ತಿರುವ ಬಗ್ಗೆ ಶಾಸಕ ಹರೀಶ್‌ಗೌಡರ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಮ್ಮ ದೇಶದಲ್ಲಿ ಮಹಿಳೆಯರನ್ನು ಅತ್ಯಂತ ಗೌರವದಿಂದ ಕಾಣುವುದು ವಾಡಿಕೆ. ಆದರೆ, ಕಿಡಿಗೇಡಿಗಳು ಕೀಳು ಮಟ್ಟದ ತಮ್ಮ ಮನೋಭಾವನೆಯನ್ನ ಸಾಮಾಜಿಕ ಜಾಲತಾಣದಲ್ಲಿ ಪ್ರದರ್ಶಿಸುವ ಮೂಲಕ ಮಹಿಳೆಯರಿಗೆ ಮಾನಸಿಕ ಆಘಾತವುಂಟು ಮಾಡುವುದನ್ನೇ ಪರಿಪಾಟ ಮಾಡಿಕೊಂಡಿದ್ದಾರೆ. ಇಂತಹ ಮೃಗೀಯ ಭಾವನೆಯುಳ್ಳ ವ್ಯಕ್ತಿಗಳಿಗೆ ಕಾನೂನಿನ ತಕ್ಕ ಶಾಸ್ತಿ ಆಗಲೆಂದು ದೂರಿ ನಲ್ಲಿ ವರ್ಷಾ ಅವರು ಒತ್ತಾಯಿಸಿದ್ದಾರೆ.

ನಿತ್ಯಾನಂದ ಹತ್ಯೆ ಪ್ರಕರಣ; ಆರಕ್ಕೇರಿದ ಆರೋಪಿಗಳ ಸಂಖ್ಯೆ

ಸುಶೀಲಾ ಸೇರಿದಂತೆ ಕೃತ್ಯ ನಡೆಸಿದ ಎಲ್ಲರ ಬಂಧನ

ಮೈಸೂರು,ಜು.1(ಪಿಎಂ)– ಕುವೆಂಪುನಗರದ ಹುಡ್ಕೋ ಬಡಾವಣೆ ನಿವಾಸಿ ನಿತ್ಯಾನಂದ ಹತ್ಯೆ ಪ್ರಕರಣ ಹೊಸ ತಿರುವು ಪಡೆದಿದ್ದು, ಕೃತ್ಯದಲ್ಲಿ ಭಾಗಿಯಾದವರ ಸಂಖ್ಯೆ ಒಟ್ಟು 6ಕ್ಕೆ ಏರಿದೆ. ಅಲ್ಲದೆ, ಈ ಎಲ್ಲರನ್ನೂ ಪೊಲೀಸರು ಬಂಧಿಸಿದ್ದಾರೆ.

ಮಂಗಳವಾರದ ವೇಳೆಗೆ ಕೃತ್ಯದಲ್ಲಿ ನಿತ್ಯಾನಂದರ ಪತ್ನಿ ಸುಶೀಲಾ ಒಳಗೊಂಡಂತೆ ಐವರು ಭಾಗಿಯಾಗಿದ್ದಾರೆ ಎನ್ನಲಾಗಿತ್ತು. ಸುಶೀಲಾ ಹಾಗೂ ಈಕೆಯ ಸಹೋದರಿಯ ಪತಿ ಹರೀಶ್ ಮತ್ತು ಮೂವರು ಕೂಲಿ ಕಾರ್ಮಿಕರು ಕೃತ್ಯ ನಡೆಸಿದ್ದಾರೆ ಎಂದು ಹೇಳಲಾಗಿತ್ತು. ವಿವಿಧ ಆಯಾಮಗಳಲ್ಲಿ ಪೊಲೀಸ್ ತನಿಖೆ ಮುಂದುವರೆದಂತೆ ಕೃತ್ಯದಲ್ಲಿ ಭಾಗಿಯಾದವರ ಸಂಖ್ಯೆ 6ಕ್ಕೆ ಏರಿಕೆಯಾಗಿದ್ದು, ಹರೀಶನ ಸ್ನೇಹಿತ ಮಂಜುನಾಥ ಎಂಬಾತನೂ ಹತ್ಯೆಯಲ್ಲಿ ಭಾಗಿಯಾಗಿರುವುದು ಬಹಿರಂಗಗೊಂಡಿದೆ. ಪತಿ ಸಾವಿಗೆ ಹೃದಯಾಘಾತ ಕಾರಣವೆಂಬ ಕಥೆ ಕಟ್ಟಲು ಹೋಗಿ ಸಿಕ್ಕಿ ಬಿದ್ದಿದ್ದ ಸುಶೀಲಾ ಜೊತೆಗೆ ಇದೀಗ ಕೃತ್ಯದಲ್ಲಿ ಭಾಗಿಯಾಗಿದ್ದ 6 ಮಂದಿ ಈಗ ಪೊಲೀಸರ ಅತಿಥಿಯಾಗಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಿಸಿಪಿ ಡಾ.ಹರ್ಷ ಪ್ರಿಯಂವದಾ, ನಿತ್ಯಾನಂದರ ಪತ್ನಿ ಸುಶೀಲಾ ಸೇರಿದಂತೆ ಒಟ್ಟಾರೆ 6 ಮಂದಿ ಕೃತ್ಯದಲ್ಲಿ ಭಾಗಿಯಾಗಿರುವುದು ಈವರೆಗಿನ ತನಿಖೆಯಿಂದ ಗೊತ್ತಾಗಿದೆ. ಈ ಎಲ್ಲರನ್ನೂ ಬಂಧಿಸಲಾಗಿದೆ ಎಂದು ತಿಳಿಸಿದರು.

ಪುಟ್ಟಲಿಂಗಮ್ಮ ನಿಧನ



ಮೈಸೂರು, ಜು.1– ಮೈಸೂರಿನ ಕನ್ನೇಗೌಡನ ಕೊಪ್ಪಲು 7ನೇ ಅಡ್ಡರಸ್ತೆ ನಿವಾಸಿ ಲೇ.ಹೊಗೆಸೊಪ್ಪು ಸಿದ್ದಪ್ಪನವರ ಧರ್ಮಪತ್ನಿ ಪುಟ್ಟಲಿಂಗಮ್ಮ(94) ಬುಧವಾರ ನಿಧನರಾದರು. ಮೃತರು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12 ಗಂಟೆಗೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮಹದೇವು



ಮೈಸೂರು, ಜು.1– ಮೈಸೂರಿನ ಕುವೆಂಪುನಗರ ನಿವಾಸಿ, ಪತ್ರಿಕಾ ವಿತರಕ ಶಿವಲಿಂಗು ಅವರ ಹಿರಿಯ ಸಹೋದರ ಮಹದೇವು(57) ಬುಧವಾರ ನಿಧನರಾದರು.

ಮೃತರು ಕುಟುಂಬ ವರ್ಗ, ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ವೈದ್ಯರು ನಿಜವಾಗಿಯೂ ದೇವರ ಸಮಾನ

● ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅಭಿಮತ ● ಜೆಎಸ್‌ಎಸ್ ಸಂಸ್ಥೆಗಳಿಂದ ವೈದ್ಯರ ದಿನಾಚರಣೆ ● ಮೂರು ಹೊಸ ಕೋರ್ಸ್‌ಗಳ ಉದ್ಘಾಟನೆ

ಮೈಸೂರು, ಜು.1(ಎಸ್‌ಪಿಎನ್)– ಆಪತ್ಕಾಲದಲ್ಲಿ ರೋಗಿಗಳ ಜೀವವನ್ನು ಉಳಿಸುವ ವೈದ್ಯರನ್ನು 'ವೈದ್ಯೋ ನಾರಾಯಣೋ ಹರಿ' ಎಂದು ಕರೆಯುವುದುಂಟು. ಅದು ನಿಜವೂ ಹೌದು ಎಂದು ನಗರಾಭಿವೃದ್ಧಿ ಸಚಿವ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ಧರಾಮಯ್ಯ ಅಭಿಪ್ರಾಯಪಟ್ಟರು.



ಡಾ.ಯತೀಂದ್ರ

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಆಸ್ಪತ್ರೆ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಪ್ರಗತಿ ಮತ್ತು ಉತ್ಕೃಷ್ಟತೆಗಾಗಿ ಕಾರ್ಯೋನ್ಮುಖ ಅಭಿವೃದ್ಧಿ (ಇಡಿಜಿಇ)', 'ಭವಿಷ್ಯತ್ತಿನ ತಂತ್ರಜ್ಞಾನಗಳ ಜಾಗತಿಕ ಸಂಸ್ಥೆ(ಜಿಐಎಫ್‌ಟಿ)', ಹಾಗೂ 'ಆರೋಗ್ಯ ಸೇವೆಯಲ್ಲಿ ಕೃತಕ ಬುದ್ಧಿಮತ್ತೆ ನಿರ್ವಹಣೆ (ಎಐ ಇನ್ ಇಂಡಿಯನ್ ಹೆಲ್ತ್ ಕೇರ್) ತರಬೇತಿ ಕೋರ್ಸ್‌ಗಳ ಲೋಕಾರ್ಪಣೆ ಮತ್ತು ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಏಕೆಂದರೆ, ರೋಗಿಯ ಪ್ರಾಣಕ್ಕೆ ಕುತ್ತು ಬಂದಾಗ ವೈದ್ಯರು ತಮ್ಮ ಕಾರ್ಯ ಕ್ಷಮತೆಯಿಂದ ಅಂತಹ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಿ ಪ್ರಾಣ ಉಳಿಸುತ್ತಾರೆ. ಹಾಗಾಗಿ ಆಪತ್ಕಾಲದಲ್ಲಿ ಜೀವ ಉಳಿಸುವ ವೈದ್ಯರನ್ನು ನಮ್ಮ ಹಿರಿಯರು ದೇವರಿಗೆ ಹೋಲಿಕೆ ಮಾಡಿರುವುದು ಸಮಂಜಸವಾಗಿದೆ ಎಂದರು,



ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿ ಹಿರಿಯ ವೈದ್ಯರಾದ ಡಾ.ಶ್ರೀನಾಥ್ (ಜನರಲ್ ಮೆಡಿಸಿನ್), ಡಾ.ಮಂಜುನಾಥ್ (ನೆಫ್ರಾಲಜಿ), ಡಾ.ಬಾಬು (ಇಎನ್‌ಟಿ), ಡಾ.ಸುಧಾ (ರೇಡಿಯಾಲಜಿ), ಡಾ.ಸುಬ್ರಹ್ಮಣ್ಯ (ರುಮಾಟೋಲಜಿ) ಅವರನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸನ್ಮಾನಿಸಿದರು.

ಪ್ರಸ್ತುತ ತಂತ್ರಜ್ಞಾನ ನಾಗಲೋಟದಲ್ಲಿ ಹೋಗುತ್ತಿದೆ. ಅದು ಆರೋಗ್ಯ ಕ್ಷೇತ್ರವನ್ನೂ ಒಳಗೊಂಡಂತೆ ಎಲ್ಲಾ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಆವರಿಸಿಕೊಳ್ಳುತ್ತಿದೆ. ಹಾಗಾಗಿ ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸಿಬ್ಬಂದಿಗೂ ಎಐ ತಂತ್ರಜ್ಞಾನ ಕುರಿತು ಸೂಕ್ತ ತರಬೇತಿ ನೀಡುವುದು ಅತ್ಯಗತ್ಯ ಎಂದರು.

ಕ್ರಾಂತಿಕಾರಕ ಬದಲಾವಣೆ: ಎಐ ತಂತ್ರಜ್ಞಾನ ಪ್ರತಿಯೊಂದು ಕ್ಷೇತ್ರದಲ್ಲೂ ಕ್ರಾಂತಿಕಾರಕ ಬದಲಾವಣೆ ತರುತ್ತಿದೆ. ಇದನ್ನು ಯಾವುದೇ ಕ್ಷೇತ್ರದಲ್ಲೂ ನಿಲ್ಲಿಸಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ವೈದ್ಯಕೀಯ ಕ್ಷೇತ್ರವೂ ಇದಕ್ಕೆ ಹೊರತಲ್ಲ. ಆದ್ದರಿಂದ ವೈದ್ಯರು, ದಾದಿಯರು ಹಾಗೂ ಆರೋಗ್ಯ ಕ್ಷೇತ್ರದ ಕಾರ್ಯ ಚಟುವಟಿಕೆಗಳಲ್ಲಿ ಎಐ ಮಹತ್ತರ ಬದಲಾವಣೆಗಳನ್ನು ತರಲಿದೆ. ಆದ್ದರಿಂದ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಎಐ ಕುರಿತು ಸೂಕ್ತ ತರಬೇತಿ ಪಡೆಯಬೇಕು ಎಂದು ಸಲಹೆ ನೀಡಿದರು.

ಬದಲಾಗುತ್ತಿರುವ ತಂತ್ರಜ್ಞಾನಕ್ಕೆ ತಕ್ಕಂತೆ ಜೆಎಸ್‌ಎಸ್ ಸಂಸ್ಥೆಯು 'ಎಐ ಇನ್ ಇಂಡಿಯನ್ ಹೆಲ್ತ್ ಕೇರ್' ಎಂಬ ಸರ್ಟಿಫಿಕೇಟ್ ಕೋರ್ಸ್ ಅನ್ನು ಜೆಎಸ್‌ಎಸ್ ಸಂಸ್ಥೆಯಲ್ಲಿ ಆರಂಭಿಸುತ್ತಿರುವುದು ಉತ್ತಮ ಸಂಗತಿ. ಸರ್ಕಾರಿ ಅಥವಾ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿಯೂ ಈ ರೀತಿಯ ಕೋರ್ಸ್ ಆರಂಭವಾಗುತ್ತಿರುವುದು ಸಂತೋಷದ ಸಂಗತಿ. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು, ವೈದ್ಯರ ದಿನಾಚರಣೆ ಕಾರ್ಯಕ್ರಮಕ್ಕೆ ಆಗಮಿಸುವಂತೆ ಆಹ್ವಾನ ನೀಡಿದರು. ಶ್ರೀಗಳು ಯಾವುದೇ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರೂ ಇಲ್ಲ ಎನ್ನಲಾಗುವುದಿಲ್ಲ. ಹಾಗಾಗಿ ಸ್ವಲ್ಪ ತಡವಾಗಿಯಾದರೂ ಕಾರ್ಯಕ್ರಮಕ್ಕೆ ಬಂದಿದ್ದೇನೆ ಎಂದು ತಿಳಿಸಿದರು.

ನಾನು ಸಹ ವೈದ್ಯನಾಗಿರುವುದರಿಂದ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಎಷ್ಟು ಶ್ರಮಪಟ್ಟು ಸಮಾಜದ ಆರೋಗ್ಯ ಕಾಪಾಡುತ್ತಾರೆ. ಅವರು ಎದುರಿಸುವ ಸವಾಲುಗಳು ಎಷ್ಟು ದೊಡ್ಡವು ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ಇಂದಿನ ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟ ವೈದ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ ಹಾಗೂ ಅವರು ಮುಂದಿನ ದಿನಗಳಲ್ಲಿ ಅವರ ಸೇವೆ ಸಮಾಜಕ್ಕೆ ಮತ್ತಷ್ಟು ಲಭ್ಯವಾಗಲಿ ಎಂದು ಆಶಿಸುತ್ತೇನೆ ಎಂದರು.

ಇದಕ್ಕೂ ಮೊದಲು ನೀತಿ ಆಯೋಗದ ಸದಸ್ಯ ಡಾ.ಆರ್.ಬಾಲಸುಬ್ರಮಣ್ಯಂ ಮಾತನಾಡಿ, ಎಐ ತಂತ್ರಜ್ಞಾನ ಅನೇಕ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ನಾಂದಿಯಾಡುತ್ತಿದೆ. ಈ ಬದಲಾವಣೆಗಳನ್ನು ನಾವು ಸಮಸ್ಯೆಯಾಗಿ ನೋಡದೆ ಅವಕಾಶಗಳಾಗಿ ಹೇಗೆ ಪರಿವರ್ತಿಸಬೇಕು. ಎಐ ತಂತ್ರಜ್ಞಾನದಿಂದ ಲಕ್ಷಾಂತರ ಮಂದಿ ಉದ್ಯೋಗ ಕಳೆದುಕೊಳ್ಳುವ ಭೀತಿಯಿದೆ. ಆದರೆ, ಅಂತಹವರಿಗೆ ಹೊಸ ಕೌಶಲ್ಯಗಳನ್ನು ಕಲಿಸಿ, ಮುಂದಿನ ಹಂತದ ಉದ್ಯೋಗಗಳಿಗೆ ಅಣಿಗೊಳಿಸಬೇಕು. ಆದರೆ, ಅಷ್ಟು ಸುಲಭದ ಕೆಲಸವಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ರೋಬೋಟಿಕ್ ನರ್ಸ್: ಜಪಾನ್ ತಂತ್ರಜ್ಞಾನ ಕ್ಷೇತ್ರದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದೆ. ಆರೋಗ್ಯ ಕ್ಷೇತ್ರ ಮೊದಮೊದಲು 200 ರೋಬೋಟಿಕ್‌ಗಳನ್ನು ನರ್ಸ್ ಸೇವೆಗೆ ಬಳಸಲಾಗಿತ್ತು. ಇದೀಗ ಅದರ ಸಂಖ್ಯೆ ಬರೋಬರಿ 20 ಸಾವಿರಕ್ಕೇರಿದೆ. ಈ ರೋಬೋಟಿಕ್ ನರ್ಸ್‌ಗಳು ದಿನದ 24 ಗಂಟೆಯೂ ಸೇವೆ ನೀಡುತ್ತವೆ. ಡೈಪರ್ ಬದಲಾಯಿಸುವುದು, ಮೂತ್ರ ಚೀಲ ಬದಲಾಯಿಸುವುದು, ರೋಗಿಗೆ ನೀರು ಕೊಡುವುದು, ರೋಗಿಯ ಸಾಮಾನ್ಯ ಆರೈಕೆ ಸೇರಿದಂತೆ ಒಬ್ಬ ನರ್ಸ್ ಮಾಡುವ ಅನೇಕ ಕೆಲಸಗಳನ್ನು ಇಂದು ರೋಬೋಟ್‌ಗಳೆ ನಿರ್ವಹಿಸುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಐವರು ವೈದ್ಯರಿಗೆ ಸನ್ಮಾನ: ರಾಷ್ಟ್ರೀಯ ವೈದ್ಯರ ದಿನಾಚರಣೆ ಅಂಗವಾಗಿ ಹಿರಿಯ ವೈದ್ಯರಾದ ಡಾ.ಶ್ರೀನಾಥ್ (ಜನರಲ್ ಮೆಡಿಸಿನ್), ಡಾ.ಮಂಜುನಾಥ್ (ನೆಫ್ರಾಲಜಿ), ಡಾ.ಬಾಬು (ಇಎನ್‌ಟಿ), ಡಾ.ಸುಧಾ (ರೇಡಿಯಾಲಜಿ), ಡಾ.ಸುಬ್ರಹ್ಮಣ್ಯ (ರುಮಾಟೋಲಜಿ) ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಸಮಾಕುಲಾಧಿಪತಿ ಡಾ.ಬಿ.ಸುರೇಶ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜೆ.ಬೆಟಸೂರ ಮಠ, ಜೆಎಸ್‌ಎಸ್–ಎಎಚ್‌ಇಆರ್‌ನ ಕುಲಪತಿ ಡಾ.ಎಚ್.ಬಸವನಗೌಡಪ್ಪ, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಉಪ ಪ್ರಾಂಶುಪಾಲ ಡಾ.ವಿಕ್ರಮ್ ಪಾಟೀಲ್ ಸೇರಿದಂತೆ ಇತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಅಂಗಿಕಾರನ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಬಲರಾಮನ ಆ ದಿನಗಳು (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವೆಲ್‌ಕಮ್ ಟು ದಿ ಜಂಗಲ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬಲರಾಮ(ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾನ್ ಸಿಟಿ (ತ)	4 ಪ್ರದರ್ಶನಗಳು
ಸಂಗಂ	
ವೆಲ್‌ಕಮ್ ಟು ದಿ ಜಂಗಲ್ (ಹಿ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ) + ಒಕ್ಕಡು (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರೈತರ ಮಕ್ಕಳಿಗೆ ಹೆಣ್ಣು ಕೊಡಿ (ಕ) + ಕಾಲಘಟ್ಟ (ಕ)	2+2 ಪ್ರದರ್ಶನಗಳು

ಪತ್ರಿಕಾ ದಿನಾಚರಣೆ ಅಂಗವಾಗಿ ಉಚಿತ ಕನ್ನಡ ದಿನಪತ್ರಿಕೆ ವಿತರಣೆ



ಮೈಸೂರು, ಜು.1– ಮಯೂರ ಕನ್ನಡ ಯುವಕರ ಬಳಗದ ವತಿಯಿಂದ ಹಳೆ ಸಂತೆಪೇಟೆಯಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಕನ್ನಡ ದಿನಪತ್ರಿಕೆಗಳನ್ನು ಉಚಿತವಾಗಿ ವಿತರಿಸಿ ಪತ್ರಿಕಾ ದಿನವನ್ನು ಆಚರಿಸಲಾಯಿತು

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಾಜಿ ಮುಡಾ ಅಧ್ಯಕ್ಷ ಎಚ್ ವಿ.ರಾಜೀವ್, ದಿನಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಲು ಸಲಹೆ ನೀಡಿದರಲ್ಲದೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರತಿದಿನ ಪೈಪೋಟಿ ಹೆಚ್ಚುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು, ವ್ಯವಹಾರ ಜ್ಞಾನ ವೃದ್ಧಿಸಿಕೊಳ್ಳಲು ದಿನಪತ್ರಿಕೆಯನ್ನು ಓದುವ ದಿನಚರಿಯನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು ಎಂದರು

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಪತ್ರಕರ್ತರಿಗೆ ಬಿಡುವು ಎನ್ನುವುದಿಲ್ಲ ಹಗಲು ರಾತ್ರಿ ಎನ್ನದೆ ಕರ್ತವ್ಯ ನಿರ್ವಹಿಸುತ್ತಾರೆ. ಕುಟುಂಬ ಸದಸ್ಯರೊಂದಿಗೆ ಸಮಯ ಕಳೆಯಲು ಅವರಲ್ಲಿ ಸಮಯ ಇರುವುದಿಲ್ಲ. ಒತ್ತಡದ ನಡುವೆಯೇ ಕುಟುಂಬ ಸದಸ್ಯರೆಲ್ಲರೂ ಒಂದೆಡೆ ಸೇರುವ ಹಾಗೆ ಕಾರ್ಯಕ್ರಮ ಏರ್ಪಡಿಸಲು ಪತ್ರಕರ್ತರ ಸಂಘ ಮುಂದಾಗಬೇಕು ಎಂದರು.

ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ ಮಾತನಾಡಿ, ಮೈಸೂರು ನಿಜವಾದ ಅರ್ಥದಲ್ಲಿ ಪತ್ರಿಕೆಗಳ ತವರೂರು, ಮಂಗಳೂರು ಸಮಾಚಾರ ಎಂಬುದು ಕ್ರಿಶ್ಚಿಯನ್ ಮಿಷನರಿಗಳ ಮಾಸಿಕ ಸಂಚಿಕೆ ಮೊದಲಿಗಾಗಿ ಹೊರಹೊಮ್ಮಿದ್ದರೂ ಕೂಡ, ಸಾರ್ವಜನಿಕವಾಗಿ ಪತ್ರಿಕಾ ಮಾಧ್ಯಮ ಮುದ್ರಣ ಪ್ರಪ್ರಥಮವಾಗಿ ಹೊರಹೊಮ್ಮಿದ್ದು ಮೈಸೂರಿನಲ್ಲಿಯೇ. ಹಾಗಾಗಿ ಪತ್ರಿಕಾ ಮಾಧ್ಯಮಕ್ಕೆ ಮೈಸೂರಿನಲ್ಲಿ ವಿಶಿಷ್ಟ ಸ್ಥಾನವಿದೆ. ಅದರಲ್ಲೂ ತಾತಯ್ಯನವರನ್ನು ಮಹಾತ್ಮ ಗಾಂಧಿಯವರು ಪತ್ರಿಕಾರಂಗದ ಭೀಷ್ಮ ಎಂದು ಕರೆದಿದ್ದರು.

ಈ ವೇಳೆ ಕೆಆರ್. ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಮಯೂರ ಕನ್ನಡ ಯುವಕರ ಬಳಗದ ಅಧ್ಯಕ್ಷ ಜಿ.ರಾಘವೇಂದ್ರ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಎಸ್.ಎನ್.ರಾಜೇಶ್, ಹಿರಿಯ ಪತ್ರಿಕಾ ವಿಚಾರಕರಾದ ರಮಾಬಾಯಿ, ರಾಕೇಶ್, ಹರೀಶ್ ನಾಯ್ಡು ಹಾಗೂ ಇತರರು ಹಾಜರಿದ್ದರು

ಚರ್ಚೆಗೆ ಬನ್ನಿ ಅಂತ ನಾನು ಕರೆದರೆ, ನನ್ನನ್ನೇ ಬಿಡದಿಗೆ ಬನ್ನಿ ಅಂತಾರೆ

ಕುಮಾರಸ್ವಾಮಿಗೆ ಸಿಎಂ ಡಿಕೆಶಿ ತಿರುಗೇಟು

ಬೆಂಗಳೂರು: ಬಿಡದಿ ಟೌನ್‌ಶಿಪ್ ಕುರಿತು ಚರ್ಚೆ ಮಾಡಲು ವಿಧಾನಸೌಧಕ್ಕೆ ಬರುವಂತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನಾನೇ ಆಹ್ವಾನಿಸಿದೆ. ಆದರೆ, ಅವರು ನನ್ನನ್ನು ಬಿಡದಿಗೆ ಬರಲು ಪಂಥಾಹ್ವಾನ ನೀಡಿದರು. ಈ ಧೋರಣೆ ಸರಿಯೇ. ನಾನು ಅಲ್ಲಿಗೆ ಹೋಗುವುದು ಸರಿಯೇ. ಅವಕಾಶ ಕೊಟ್ಟಾಗ ಚರ್ಚಿಸಬೇಕಿತ್ತಲ್ಲವೇ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.



ಗೃಹ ಕಚೇರಿ ಕೃಷ್ಣಾದಲ್ಲಿ ಇಂದು ರಾಮನಗರದಿಂದ ಬಂದಿದ್ದ ರೈತರು ಹಾಗೂ ನಾಗರಿಕರ ಅಹವಾಲು ಆಲಿಸಿ ಮಾತನಾಡಿ, ಬಿಡದಿಯಲ್ಲಿ ಟೌನ್ ಶಿಪ್ ಯೋಜನೆ ನಾನು ಮಾಡಿದ್ದೆನಾ. ಬಿಡದಿ ಕೈಗಾರಿಕಾ ಪ್ರದೇಶ ನಾನು ಮಾಡಿಲ್ಲವಲ್ಲ. ಅವರೇ (ಕುಮಾರಸ್ವಾಮಿ) ಮಾಡಿ ಈಗ ವಿರೋಧ ಮಾಡುತ್ತಿದ್ದಾರೆ. ಅಲ್ಲಿ ಟೌನ್ ಶಿಪ್ ನಿರ್ಮಾಣವಾದರೆ ರಾಮನಗರ, ಮಾಗಡಿ, ಕನಕಪುರದವರಿಗೂ ಲಾಭ ಅಲ್ಲವೇ. ದೇವನಹಳ್ಳಿಗೆ ವಿಮಾನ ನಿಲ್ದಾಣ ಬಂದ ಕಾರಣಕ್ಕೆ ದೊಡ್ಡಬಳ್ಳಾಪುರದವರೆಗೂ ಅನುಕೂಲವಾಗಿಲ್ಲವೇ. ಟೌನ್ ಶಿಪ್ ಅವರೇ ಡಿನೋಟಿಫಿಕೇಶನ್ ಮಾಡಬಹುದಾಗಿತ್ತು. ಆದರೆ, ಮಾಡಲಿಲ್ಲ. ಚರ್ಚೆ ಮಾಡಿ ಬನ್ನಿ ಎಂದು ನಾನು ಕರೆದರೆ, ನಾನು ಬಿಡದಿಗೆ ಹೋಗಬೇಕಂತೆ. ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾನು ಯಾರನ್ನೂ ಒಕ್ಕಲೆಬ್ಬಿಸಲ್ಲ: ಕ್ಷೇತ್ರ ಬಿಟ್ಟು ಹೋದವರು ಈಗ ಮರಳಿ ಬಂದು ವಿರೋಧ ಮಾಡುತ್ತಿದ್ದಾರೆ. ನಮ್ಮ ಕೈಲಾದಷ್ಟು ಒಳ್ಳೆಯ ಕೆಲಸ ಮಾಡುತ್ತೇವೆ. ನಾನು ಯಾವ ಊರನ್ನೂ ಒಕ್ಕಲೆಬ್ಬಿಸುವುದಿಲ್ಲ. ಎಲ್ಲ ಊರುಗಳು ಅಲ್ಲೇ ಇರುತ್ತವೆ. ಆ ಊರುಗಳು ಅಭಿವೃದ್ಧಿಯಾಗುತ್ತವೆ. ಆ ಭಾಗದ ಜನರಿಗೆ ಪರಿಹಾರ ನೀಡಲಾಗುವುದು. ಎರಡು ಮೂರು ಹಳ್ಳಿಗಳನ್ನು ಸೇರಿ ಅಧಿಸೂಚನೆ ಹೊರಡಿಸುತ್ತಿದ್ದೇವೆ ಎಂದರು.

ಕೆಲವರು ರಾಜಕಾರಣ ಮಾಡುತ್ತಿದ್ದಾರೆ. ಹಾಸನದ ರೈತರು ಬಂದು ಅವರ ಕಷ್ಟ ಹೇಳಿಕೊಂಡರು. ಹಾಸನ ಪಟ್ಟಣದ ಪಕ್ಕ ಭೂಸ್ವಾಧೀನಪಡಿಸಿಕೊಂಡಿದ್ದು ಯಾಕೆ. ತಮ್ಮ ಕಾರ್ಯಕರ್ತನ 11 ಎಕರೆ ಬಿಟ್ಟು ಉಳಿದವುಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಈ ಬಗ್ಗೆ ಈಗ ಚರ್ಚೆ ಬೇಡ. ನಿಮ್ಮೆಲ್ಲರಿಗೂ ಒಳ್ಳೆಯದಾಗಲಿ ಎಂದು ಈ ಹಿಂದೆ ದಳ ಹಾಗೂ ಬಿಜೆಪಿ ಕಾಲದಲ್ಲಿದ್ದ ಈ ಯೋಜನೆ ನಾನು ಮುಂದುವರಿಸುತ್ತಿದ್ದೇನೆ ಎಂದು ವಿವರಿಸಿದರು.

ವಿಪಕ್ಷದವರಿಗೆ ಸಹಿಸಲು ಆಗುತ್ತಿಲ್ಲ: ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿದ ನಂತರ ಹೇಗೆ ಗೌರವ ಬಂದಿದೆ ಎಂದು ನೀವು ಗಮನಿಸಿದ್ದೀರಿ. ಜನ ನಿಮ್ಮನ್ನು ಹೇಗೆ ನೋಡುತ್ತಿದ್ದಾರೆ. ನಿಮ್ಮ ಆಸ್ತಿ ಮೌಲ್ಯ ಎಷ್ಟಾಗಿದೆ ಎಂಬುದು ನಿಮಗೆ ಗೊತ್ತಿದೆ. ನೀವುಗಳು ಎಲ್ಲ ಜನರನ್ನು ವಿಶ್ವಾಸಕ್ಕೆ ಪಡೆದು ಕೆಲಸ ಮಾಡಿ. ಬೇರೆ ಪಕ್ಷದವರು ಸಂಪರ್ಕ ಮಾಡಲು ಇಚ್ಛಿಸುತ್ತಿದ್ದಾರೆ. ಅವರನ್ನು ಸೇರಿಸಿಕೊಂಡು ಮುಂದಿನ ಚುನಾವಣೆ ಸುಗಮವಾಗಿ ನಡೆಯುವಂತೆ ಮಾಡಿ. ನಾವು ಅಧಿಕಾರಕ್ಕೆ ಬಂದಿರುವುದು ವಿರೋಧ ಪಕ್ಷದವರಿಂದ ಸಹಿಸಲು ಆಗುತ್ತಿಲ್ಲ. ನಿಮಗೆ ಒಳ್ಳೆಯದಾಗುವಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಶುಭಾಶಯ



ಶ್ರೀ ನಾಡಪ್ರಭು ಕೆಂಪೇಗೌಡ 517ನೇ ಜಯಂತ್ಯೋತ್ಸವ ಮೆರವಣಿಗೆ ಸಮಿತಿ ಅಧ್ಯಕ್ಷರು ಹಾಗೂ ನಿವೃತ್ತ ಎಸ್‌ಐ ಮರೀಗೌಡ ಅವರ ಜನ್ಮದಿನದ ಪ್ರಯುಕ್ತ ಸಮಿತಿಯ ಅಧ್ಯಕ್ಷ ಹಾಗೂ ಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್ ಗೌಡ, ಮೋಹನ್ ಕುಮಾರ್ ಗೌಡ, ಎ.ರವಿ, ಚೇತನ್, ಬೋರೇಗೌಡ, ರವಿ ರಾಜಕೀಯ, ಗಿರೀಶ್ ಗೌಡ, ಗುರುರಾಜ್, ಹೇಮಂತ್ ಗೌಡ, ಸತೀಶ್ ಗೌಡ, ಗಂಗಾಧರ್ ಗೌಡ, ಹೊಸಹುಂಡಿ ರಘು, ಕೃಷ್ಣೇಗೌಡ, ಬಂಡಿಪಾಳ್ಯ ಬೋರೇಗೌಡ ಇತರರು ಶುಭಾಶಯ ಕೋರಿದರು

ಸಿಗ್ಮಾ ಆಸ್ಪತ್ರೆಯಲ್ಲಿ ವೈದ್ಯರ ದಿನಾಚರಣೆ



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಸಿಗ್ಮಾ ತಜ್ಞ ವೈದ್ಯರಾದ ಡಾ.ಪದ್ಮಿನಿ, ಡಾ.ಕಂಚಿಲ್, ಡಾ.ಸೋಮಣ್ಣ, ಡಾ.ಹರೀಶ್, ಡಾ.ಸೌಮಿತ್, ಡಾ.ಅಂಜಿತ್, ಡಾ.ರಾಜೇಶ್ವರಿ ಮಾದಪ್ಪ, ಡಾ.ಅನಿಕೇತ್, ಡಾ.ರಾಕೇಶ್, ಡಾ.ಮಾದಪ್ಪ, ಡಾ.ಶರತ್‌ಚಂದ್ರ, ಡಾ.ಅಖಿಲ, ಡಾ.ಕನ್ಯಾ, ಡಾ.ತೇಜಸ್ವಿನಿ, ಡಾ.ನಯನ, ಡಾ.ಶ್ರೀದೇವಿ, ಡಾ.ಕೃಷ್ಣ ಇತರರು ಉಪಸ್ಥಿತರಿದ್ದರು.

ಶ್ರೀ ಕುದೇರು ಮಠದಲ್ಲಿ ವಾರ್ಷಿಕ ಗಣಾರಾಧನೆ

ಮೈಸೂರು,ಜು.1–ಮೈಸೂರಿನ ಬಸವೇಶ್ವರ ರಸ್ತೆಯಲ್ಲಿರುವ ಶ್ರೀ ಕುದೇರು ಮಠದಲ್ಲಿ ಜು.8 ಹಾಗೂ 9 ರಂದು ಶ್ರೀ ಗುರು ಮಲ್ಲೇಶ್ವರ ಮಹಾಪ್ರಭುಗಳ 127ನೇ ಗಣಾರಾಧನೆ, ಲಿಂಗೈಕ್ಯ ಶ್ರೀ ಗುರುಲಿಂಗಸ್ವಾಮಿಗಳ 35ನೇ ವಾರ್ಷಿಕ ಗಣಾರಾಧನೆ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಜು.8 ರಂದು ಶ್ರೀ ಬಸವೇಶ್ವರ ಮೂರ್ತಿ, ಮಹಾತ್ಮ ಶ್ರೀ ಗುರುಮಲ್ಲೇಶ್ವರ ಮೂರ್ತಿಯ ಮೆರವಣಿಗೆ ನಡೆಯಲಿದೆ. ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕನಕಪುರದ ಶ್ರೀ ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಮಹಾಸ್ವಾಮೀಜಿ, ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಮಹಾಸ್ವಾಮೀಜಿ, ಮಹಾಂತಸ್ವಾಮಿಗಳು, ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಶ್ರೀ, ಮಲ್ಲನಮೂಲೆ ಮಠದ ಇಮ್ಮಡಿ ಸಿದ್ಧಲಿಂಗಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಜು.9 ರಂದು ಮಠದಲ್ಲಿ ವಿಶೇಷ ಪೂಜೆ, ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾ ಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಮಾಜದಲ್ಲಿ ತೊನ್ನು ರೋಗಿಗಳ ಬಗ್ಗೆ ಇರುವ ತಾರತಮ್ಯ ತೊಲಗಬೇಕು



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ತೊನ್ನು ರೋಗ ದಿನಾಚರಣೆಯಲ್ಲಿ ಗಣ್ಯರು ಮಾತನಾಡುತ್ತಿರುವುದು.

ಮೈಸೂರು, ಜು. 1– ಸಮಾಜದಲ್ಲಿ ತೊನ್ನು ರೋಗಿಗಳ ಬಗ್ಗೆ ಇರುವ ತಾರತಮ್ಯ ನಿಲ್ಲಬೇಕು ಎಂದು ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚರ್ಮರೋಗಶಾಸ್ತ್ರ ವಿಭಾಗ ಮತ್ತು ಮಾನಸಿಕ ಆರೋಗ್ಯ ವಿಭಾಗದ ವತಿಯಿಂದ ಆಯೋಜಿಸಿದ್ದ ವಿಶ್ವ ತೊನ್ನು ರೋಗ ದಿನಾಚರಣೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವ ತೊನ್ನು ದಿನಾಚರಣೆಯು ಒಂದು ಜಾಗೃತಿ ಕಾರ್ಯಕ್ರಮವಾಗಿದ್ದು ಚರ್ಮದ ಮೇಲಿನ ಬಿಳಿ ಮಚ್ಚೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು, ಮೂಢನಂಬಿಕೆಗಳನ್ನು ತೊಡೆದುಹಾಕಲು ಮತ್ತು ರೋಗಿಗಳಿಗೆ ಮಾನಸಿಕ ಬೆಂಬಲ ನೀಡಲು ಉದ್ದೇಶಿಸಲಾಗಿದೆ. ತೊನ್ನು ಇತರರಿಗೆ ಹರಡುವ ಸಾಂಕ್ರಾಮಿಕ ರೋಗವಲ್ಲ, ಇದು ಸೋಂಕು ಅಥವಾ ಕಳಪೆ ನೈರ್ಮಲ್ಯದಿಂದ ಬರುವುದಿಲ್ಲ, ಮೂಢನಂಬಿಕೆಗಳಿಗೆ ಆಸ್ಪದವಿಲ್ಲ ಇದು ಯಾವುದೇ ಶಾಪ, ಹಿಂದಿನ ಜನ್ಮದ ಕರ್ಮ ಅಥವಾ ಕೆಟ್ಟ ರಕ್ತದ ಪರಿಣಾಮ ಅಲ್ಲ, ಆಧುನಿಕ ವೈದ್ಯಕೀಯ ಪದ್ಧತಿಯಲ್ಲಿ ತೊನ್ನು ರೋಗಕ್ಕೆ ಫೋಟೋಥೆರಪಿ ಮತ್ತು ಕಸಿ ಚಿಕಿತ್ಸೆಗಳು ಲಭ್ಯವಿದ್ದು, ಚರ್ಮದ ಮೂಲ ಬಣ್ಣವನ್ನು ಮರಳಿ ಪಡೆಯಲು ಸಾಧ್ಯವಿದೆ ಎಂದು ತಿಳಿಸಿದರು.

ಚರ್ಮರೋಗಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಸ್.ವೀರಣ್ಣ ಮಾತನಾಡಿ, ತೊನ್ನು ಎಂಬುದು ಚರ್ಮದ ಬಣ್ಣವನ್ನು ಉತ್ಪಾದಿಸುವ ಮೆಲನೊಸೈಟ್ ಕೋಶಗಳು ನಾಶವಾಗುವ ಒಂದು ಸ್ವಯಂ ನಿರೋಧಕ ಸ್ಥಿತಿಯಾಗಿದೆ. ಇದರಿಂದಾಗಿ ಚರ್ಮದ ಮೇಲೆ ಬಿಳಿ ಮಚ್ಚೆಗಳು ಉಂಟಾಗುತ್ತವೆ. ಇದು ಸಾಂಕ್ರಾಮಿಕವಲ್ಲ ಮತ್ತು ಜೀವಕ್ಕೆ ಯಾವುದೇ ಅಪಾಯವನ್ನು ಉಂಟು ಮಾಡುವುದಿಲ್ಲ, ಇತ್ತೀಚೆಗೆ ತೊನ್ನು ಕಾಯಿಲೆಗೆ ಅತ್ಯಾಧುನಿಕ ಚಿಕಿತ್ಸೆಗಳು ಲಭ್ಯವಿದ್ದು, ಫೋಟೋಥೆರಪಿ, ಲೇಸರ್ ಚಿಕಿತ್ಸೆ ಮುಂತಾದ ಚಿಕಿತ್ಸೆಗಳು ಲಭ್ಯವಿದ್ದು ರೋಗಿಗಳು ಆತಂಕ ಪಡದೆ ಪ್ರಾರಂಭದಲ್ಲೇ ಚಿಕಿತ್ಸೆ ಪಡೆದು ಉತ್ತಮ ಫಲಿತಾಂಶ ಪಡೆಯಬಹುದು ಎಂದರು.

ಚರ್ಮರೋಗಶಾಸ್ತ್ರ ವಿಭಾಗದ ಡಾ. ವಿನುತ ರಂಗಪ್ಪ ಮತ್ತು ಮಾನಸಿಕ ಆರೋಗ್ಯ ವಿಭಾಗದ ಡಾ. ಅಕ್ಷತಾ ಮಾತನಾಡಿ, ತೊನ್ನು ರೋಗವು ದೈಹಿಕ ನೋವನ್ನು ಉಂಟುಮಾಡದಿದ್ದರೂ, ಸಮಾಜದಲ್ಲಿನ ಕಳಂಕ ಮತ್ತು ಬದಲಾಗುವ ದೇಹದ ಆಕೃತಿಯಿಂದಾಗಿ ತೀವ್ರವಾದ ಖಿನ್ನತೆ, ಆತಂಕ, ಕಳಪೆ ಸ್ವಾಭಿಮಾನ ಮತ್ತು ಸಾಮಾಜಿಕ ಹಿಂಜರಿಕೆಗೆ ಕಾರಣವಾಗಬಹುದು. ಇದಕ್ಕೆ ಭಯಪಡದೆ ಸೂಕ್ತ ಚಿಕಿತ್ಸೆ ಮತ್ತು ಸಮಾಲೋಚನೆಯನ್ನು ಪಡೆದು ಸಾಮಾನ್ಯರಂತೆ ಜೀವನ ನಡೆಸಬಹುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ತೊನ್ನು ರೋಗಿಗಳಿಗೆ ಉಚಿತ ಫೋಟೋಥೆರಪಿ ಚಿಕಿತ್ಸಾ ಮತ್ತು ಮಾನಸಿಕ ಆರೋಗ್ಯ ಸಮಾಲೋಚನೆ ಅಭಿಯಾನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಶಿಬಿರದಲ್ಲಿ ಸುಮಾರು 70 ರೋಗಿಗಳು ಸದುಪಯೋಗವನ್ನು ಪಡೆದುಕೊಂಡರು.

ವೈದ್ಯರ ದಿನಾಚರಣೆ ಪ್ರಯುಕ್ತ ವೈದ್ಯರಿಗೆ ಸನ್ಮಾನ

ಜ್ಞಾನ–ಸೇವೆ ಬದುಕಿನಲ್ಲಿದ್ದರೆ ಪ್ರಗತಿ ಹೊಂದಬಹುದು

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅಭಿಮತ

ಮೈಸೂರು,ಜು.1(ಪಿಎಂ)– ಜ್ಞಾನದ ಕಡೆಗೆ ಗಮನ ನೀಡುವ ಜೊತೆಗೆ ಸೇವೆಯಲ್ಲಿ ತೊಡಗಿಸಿಕೊಂಡವರು ಸಹಜವಾಗಿಯೇ ತಮ್ಮ ಜೀವನದಲ್ಲಿ ಪ್ರಗತಿ ಹೊಂದುತ್ತಾರೆ ಎಂದು ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಹೇಳಿದರು.

ಮೈಸೂರಿನ ಗೋಕುಲಂನ ಸಾಂಸ್ಕೃತಿಕ ಭವನದಲ್ಲಿ ಸ್ಫಟಿಕ ಹೆಲ್ತ್ ಅಂಡ್ ಎಜುಕೇಷನ್ ಟ್ರಸ್ಟ್ ಹಾಗೂ ಎಸ್‌ಬಿಎಂ ಸ್ನೇಹ ಬಳಗದ ವತಿಯಿಂದ ವೈದ್ಯರ ದಿನಾಚರಣೆ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ವೈದ್ಯರಿಗೆ ಸನ್ಮಾನ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಜೀವನವನ್ನು ಜ್ಞಾನ ಕೇಂದ್ರೀತವಾಗಿ ರೂಪಿಸಿಕೊಳ್ಳಬೇಕು. ಸ್ವಾಮಿ ವಿವೇಕಾನಂದರು ಇದನ್ನೇ ಹೇಳಿದ್ದಾರೆ. ಜ್ಞಾನದ ಕಡೆಗೆ ಹೆಚ್ಚು ಗಮನ ನೀಡುವವರು ಸಹಜವಾಗಿ ಜೀವನದಲ್ಲಿ ಪ್ರಗತಿ ಹೊಂದುತ್ತಾರೆ. ಅಂತೆಯೇ ಸ್ವಾರ್ಥ ತ್ಯಜಿಸಿ ನಾವು ಸಮಾಜಮುಖಿಯಾಗಿ ಸೇವೆ ಸಲ್ಲಿಸುವುದು ಅತೀ ಮುಖ್ಯ ಎಂದರು.



ವೈದ್ಯರ ದಿನಾಚರಣೆ ಅಂಗವಾಗಿ ವೈದ್ಯರನ್ನು ಸನ್ಮಾನಿಸಲಾಯಿತು.

ಭಾರತ ಜ್ಞಾನಾಧಾರಿತ ಕೇಂದ್ರವಾದ ದೇಶ. ಸನಾತನ ಸಂಸ್ಕೃತಿ ಅವಲೋಕಿಸಿದರೆ ಜ್ಞಾನರಾಶಿ ಕಾಣಬಹುದು. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ವೈಯಕ್ತಿಕ ಬದುಕಿನ ಸೂಕ್ತ ನಿರ್ವಹಣೆ ಜೊತೆಗೆ ನಾವು ಸಮಾಜಮುಖಿಯಾಗಿ ಸೇವೆ ಸಲ್ಲಿಸಿದರೆ ಅದೇ ಭಗವಂತನಿಗೆ ಅರ್ಪಿಸುವ ಬಹುದೊಡ್ಡ ಪೂಜೆ. ಇದನ್ನು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ನಮ್ಮ ಜೀವನದಲ್ಲಿ ಸಮಾಜದ ಅಭ್ಯುದಯಕ್ಕಾಗಿ ಸೇವೆ ಮಾಡಬೇಕು. ಈ ನಿಟ್ಟಿನಲ್ಲಿ ಸಮಾಜಮುಖಿಯಾಗಿ ಸೇವೆ ಸಲ್ಲಿಸುತ್ತಿರುವ ವೈದ್ಯರನ್ನು ಇಂದು ಸನ್ಮಾನಿಸಿರುವುದು ಅತ್ಯಂತ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರತಿಯೊಬ್ಬರು ಕೆಲ ದಶಕಗಳ ಕಾಲ ಈ ಭೂಮಿ ಮೇಲೆ ಇದ್ದು ಮರೆಯಾಗುತ್ತೇವೆ. ಅಂತಹ ನಮ್ಮ ಬದುಕಿನಲ್ಲಿ ಆತ್ಮಸ್ವರೂಪಿಯಾದ ಭಗವಂತ ಸದಾ ಇದ್ದಾನೆ ಎಂಬುದನ್ನು ಅರಿಯಬೇಕು. ದೇವರನ್ನು ಸಾಕ್ಷಾತ್ಕಾರಿಸಿಕೊಳ್ಳುವುದು ಜೀವನದ ಉದ್ದೇಶವಾಗಬೇಕು. ಅದರ ಕಡೆಗೆ ಗಮನ ಕೊಡಬೇಕು ಎಂಬುದನ್ನು ಸನಾತನ ಹಿಂದೂ ಧರ್ಮ ಸಂಸ್ಕೃತಿ ಕರೆಯಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ವೈದ್ಯರಾದ ಡಾ.ಟಿ.ಎ.ವೀಣಾ, ಡಾ.ಬಾಪಟ್ (ವಾಮನ್ ರಾವ್ ಬಾಪಟ್), ಡಾ.ಕೆ.ಎಸ್.ಸದಾನಂದ (ಮೈಸೂರು ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರು), ಡಾ.ರಾಜ್‌ಕುಮಾರ್ ಪ್ರಾಣ್ನಾತ್ ವಾಧ್ವ, ಡಾ.ಹರಿದಾಸ್ ಉಪಾಧ್ಯ, ಡಾ.ಸಿ.ಸುಹಾಸ್, ಡಾ.ಜಿ.ಆದರ್ಶ, ಡಾ.ಎಲ್.ನಿಶ್ಚಲ್ ರಾಜ್ ಅವರನ್ನು ಸನ್ಮಾನಿಸಲಾಯಿತು.

ಅಲ್ಲದೆ, ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಟ್ರಸ್ಟ್ ಅಧ್ಯಕ್ಷರೂ ಆದ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ವಿವಿ ಪಿಹೆಚ್‌ಡಿ ಫೆಲೋಶಿಪ್ ನೀಡುವಾಗ ಒಳಮೀಸಲಾತಿ ಅನುಸರಿಸಬೇಕು

ಹಿರಿಯ ವಕೀಲ ಅರುಣ್ ಕುಮಾರ್ ಆಗ್ರಹ



ವಕೀಲ ಅರುಣ್ ಕುಮಾರ್, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮೈಸೂರು, ಜು.1(ವಿವಿಹೆಚ್)– 2025ರ ಒಳಮೀಸಲಾತಿ ಅಳವಡಿಸಿಕೊಂಡು ಪಿಹೆಚ್‌ಡಿ ಫೆಲೋಶಿಪ್ ನೀಡಬೇಕೆಂದು ಹಿರಿಯ ವಕೀಲ ಅರುಣ್ ಕುಮಾರ್, ಮೈಸೂರು ವಿವಿಯನ್ನು ಆಗ್ರಹಿಸಿದರು.

ನಗರದ ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಮುಂಭಾಗ ಪಿಹೆಚ್‌ಡಿ ಫೆಲೋಶಿಪ್‌ಗಾಗಿ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ಪರವಾಗಿ, ಮೈಸೂರು ವಿವಿ ಕುಲಪತಿ ಪ್ರೊ.ಎಂ.ಕೆ.ಲೋಕನಾಥ್ ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿದ ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದರು.

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಆಧಾರದಲ್ಲಿ ಶಿಷ್ಯವೇತನ ನೀಡಬೇಕು. ಆದರೆ ಮೈಸೂರು ವಿವಿಯಲ್ಲಿ ಧಮ್ಕಿ, ದೌಲತ್, ದೌರ್ಜನ್ಯದಿಂದ ಕೆಲವರು ಶಿಷ್ಯವೇತನ ಪಡೆಯುತ್ತಿದ್ದಾರೆ. ಆದರೆ ನಾವು ಕಾನೂನಾತ್ಮಕವಾಗಿ, ಸರ್ಕಾರದ ಆದೇಶದಂತೆ ಒಳಮೀಸಲಾತಿ ಅನ್ವಯ ಶಿಷ್ಯವೇತನ ನೀಡಬೇಕು. ಮಾದಿಗ ಸಮುದಾಯಕ್ಕೆ ಬೇಕಾದ ಸ್ಥಾನಮಾನದ ಬಗ್ಗೆ ಮಾತ್ರವೇ ಪ್ರಶ್ನಿಸುತ್ತಿದ್ದೇವೆ ಎಂದರು.

ಇನ್ನೂ ಮೈಸೂರು ವಿವಿಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಹಿಡಿತ, ಆಡಳಿತ ಇದೆಯಾ ಎಂದು ವಿವಿಯನ್ನು ಪ್ರಶ್ನಿಸಿದ್ದೇವೆ. ಕಾನೂನು ಬಾಹಿರವಾದ ಯಾವುದೇ ಕೆಲಸ ನಡೆದರೂ ಮುಂದಿನ ದಿನಗಳಲ್ಲಿ ಮಾದಿಗ ಸಮಾಜ ವಿವಿಗೆ ಮುತ್ತಿಗೆ ಹಾಕುತ್ತದೆ ಎಂದು ಎಚ್ಚರಿಕೆ ನೀಡಿದರು.

ನಮಗೆ ಬೇಕಿರುವುದು ನ್ಯಾಯ. ನಮ್ಮ ಮಾದಿಗ ಸಮುದಾಯದ ವಿದ್ಯಾರ್ಥಿಗಳಿಗೆ ಒಳಮೀಸಲಾತಿ ಮೂಲಕವೇ ಶಿಷ್ಯವೇತನ ಸಿಗಬೇಕು ಎಂದು ನಾವು ಬೇಡಿಕೆ ಇಟ್ಟಿದ್ದು, ಈ ಬಗ್ಗೆ ಕುಲಪತಿಗಳು ಜು.10ರ ಒಳಗೆ ಕೆಇಎ ಮಾರ್ಗಸೂಚಿ ಬಿಡುಗಡೆಯಾಗಲಿದೆ. ಅದಾದ ನಂತರ ಒಳಮೀಸಲಾತಿ ಹಂಚಿಕೆ ಪ್ರಕ್ರಿಯೆಯ ಮಾಡೆಲ್ ನೋಡಿಕೊಂಡು ಹಂಚುವುದಾಗಿ ತಿಳಿಸಿದ್ದಾರೆ ಎಂದರು.

ಮುಂದುವರಿದು, ವಿವಿಯ ಬಾಬು ಜಗಜೀವನರಾಂ ಅಧ್ಯಯನ ಕೇಂದ್ರದಲ್ಲಿ ಮಾದಿಗ ಸಮುದಾಯದ ವಿದ್ಯಾರ್ಥಿಗಳಿಗೆ ಪಿಹೆಚ್‌ಡಿ ಮಾಡಲು ಅವಕಾಶ ನೀಡಿದ್ದಾರೆ. ಆದರೆ ಅವರಿಗೆ ಮಾರ್ಗದರ್ಶಕರಾಗಿ ನಂಜನಗೂಡಿನ ಪ್ರಾಧ್ಯಾಪಕರನ್ನು ನೇಮಿಸಲಾಗಿದೆ. ನಂ.ಗೂಡು ವಿವಿ ಅಧೀನದಲ್ಲಿಲ್ಲ ಎಂಬ ನೆಪವೊಡ್ಡಿ ಅವರಿಗೆ ಫೆಲೋಶಿಪ್ ನೀಡುತ್ತಿಲ್ಲ. ಅವರ ಭವಿಷ್ಯದೊಂದಿಗೆ ಆಟವಾಡುತ್ತಿದ್ದಾರೆ ಎಂದು ಬೇಸರಿಸಿದರು.

ವಿವಿ ಕಾನೂನು ಬಾಹಿರ ಆದೇಶಗಳನ್ನು ಮಾಡಿ ಮಾದಿಗ ಸಮುದಾಯದ ವಿದ್ಯಾರ್ಥಿಗಳನ್ನು ಬೀದಿಯಲ್ಲಿ ನಿಲ್ಲಿಸುವ ಕೆಲಸ ಮಾಡುತ್ತಿದ್ದಾರೆ. ಇದು ಹೀಗೆ ಮುಂದುವರಿದಲ್ಲಿ ವಿವಿ ಆದೇಶ ಹೊರಡಿಸುವ ತಂಡದಲ್ಲಿ ಎಸ್‌ಸಿಯ ಹೊಲೆಯ, ಮಾದಿಗರ ಸ್ಥಾನಮಾನಗಳೆಷ್ಟು ಎಂದು ಪ್ರಶ್ನಿಸುವ ಮೂಲಕ ಕಾನೂನಾತ್ಮಕ ಹೋರಾಟದ ಎಚ್ಚರಿಕೆ ನೀಡಿದರು.

ಈ ವೇಳೆ ಮಾಜಿ ಸಿಂಡಿಕೇಟ್ ಸದಸ್ಯ ಹಾಗೂ ವಕೀಲ ದಾಸಪ್ಪ ವಕೀಲ ಕಾಳಪ್ಪ ಜೊತೆಯಲ್ಲಿದ್ದರು. ಬಳಿಕ ಪ್ರತಿಭಟನಾ ನಿರತ ವಿದ್ಯಾರ್ಥಿಗಳನ್ನು ಭೇಟಿಮಾಡಿದ ವಕೀಲ ಅರುಣ್ ಕುಮಾರ್, ದಲಿತರನ್ನು ಒಡೆಯುವ ಕೆಲಸ ಮಾಡಲಾಗುತ್ತಿದೆ. ಇದನ್ನು ಇಂದಿನ ಪೀಳಿಗೆ ಅರ್ಥೈಸಿಕೊಂಡು ಒಗ್ಗಟ್ಟಾಗಿ ಹೋರಾಟ ಮಾಡಬೇಕಾಗಿದೆ. ಶಿಷ್ಯವೇತನದಲ್ಲಿಯೂ ಹೋರಾಟ ಮಾಡಬೇಕಿರುವ ದುಸ್ಥಿತಿ ಎದುರಾಗಿದ್ದು, ಒಳಮೀಸಲಾತಿ ಅನ್ವಯವೇ ಶಿಷ್ಯವೇತನ ನೀಡುವಂತೆ ಮನವಿ ಮಾಡಿರುವುದಾಗಿ ತಿಳಿಸಿದರು.

ಚೋಳನೂರು ಶಿವಣ್ಣ, ಹಿರಿಯ ಹೋರಾಟಗಾರ್ತಿ ಶಶಿಕಲಾ, ಸರಸ್ವತಿ ಚಾರಿಟಬಲ್ ಟ್ರಸ್ಟ್‌ನ ನಿರ್ದೇಶಕಿ ಮತ್ತು ಆಪ್ತ ಸಮಾಲೋಚಕಿ ಎಂ.ಸರಸ್ವತಿ ಪ್ರತಿಭಟನಾನಿರತ ವಿದ್ಯಾರ್ಥಿಗಳು ಇದ್ದರು.

> ಅರುಣ್ ಕುಮಾರ್ ಅವರು ಶಿಷ್ಯವೇತನಕ್ಕಾಗಿ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಕಾನೂನಾತ್ಮಕವಾಗಿ ನ್ಯಾಯ ಒದಗಿಸಿಕೊಡಿ, ಅದರಲ್ಲೂ ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಒಳಮೀಸಲಾತಿ ಅನ್ವಯ ಫೆಲೋಶಿಪ್ ನೀಡುವಂತೆ ಮನವಿ ಮಾಡಿದರು. ಶಿಷ್ಯವೇತನದಲ್ಲಿನ ಗೊಂದಲ ನಿವಾರಣೆ ಮಾಡುವಾಗ ಒಳಮೀಸಲಾತಿ ಆಧಾರದಲ್ಲಿ ಮಾಡಿ ಎಂದು ತಿಳಿಸಿದ್ದಾರೆ.
> –ಪ್ರೊ.ಎನ್.ಕೆ.ಲೋಕನಾಥ್, ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ.

19 ಕೆಜಿ ವಾಣಿಜ್ಯ ಸಿಲಿಂಡರ್ ದರದಲ್ಲಿ 177 ರೂ. ಇಳಿಕೆ

• ಈಗ ಈ ಸಿಲಿಂಡರ್ ದರ 3,001 ರೂ. • 1,750 ರೂ.ಗೆ ಇಳಿಸಲು ಮೈಸೂರು ಹೋಟೆಲ್ ಮಾಲೀಕರ ಸಂಘ ಒತ್ತಾಯ



ಮೈಸೂರು, ಜು.1(ಪಿಎಂ)– ಮೂರು ತೈಲ ಕಂಪನಿಗಳಿಂದ ವಾಣಿಜ್ಯ ಸಿಲಿಂಡರ್ ಬೆಲೆ ಇಳಿಸಿದ್ದು, 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆಯಲ್ಲಿ 177 ರೂ. ಇಳಿಕೆಯಾಗಿದೆ. ಬುಧವಾರದಿಂದ (ಜು.1) ಈ ಪರಿಷ್ಕೃತ ದರ ಜಾರಿಗೆ ಬಂದಿದೆ.

ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಪಟೇಲ್ 'ಮೈಸೂರು ಮಿತ್ರ'ನಿಗೆ ಈ ವಿಷಯ ತಿಳಿಸಿದರು. ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಹಾಗೂ ಹಿಂದೂಸ್ತಾನ್ ಪೆಟ್ರೋಲಿಯಂ ಸೇರಿದಂತೆ ಮೂರು ತೈಲ ಕಂಪನಿಗಳು ಸೇರಿ ದರ ಇಳಿಸಿ ನಿರ್ಧಾರ ಕೈಗೊಂಡಿವೆ. 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆಯು 3,132 ರೂ.ನಿಂದ ಕಳೆದ ಜೂ.1ರಿಂದ ಅನ್ವಯವಾಗುವಂತೆ 3,178 ರೂ.ಗೆ ಪರಿಷ್ಕರಣೆಗೊಂಡಿತ್ತು. ಆ ಮೂಲಕ 46 ರೂ. ಹೆಚ್ಚಳಗೊಂಡಿತ್ತು. ಇದೀಗ ಜು.1 ರಿಂದ ಅನ್ವಯವಾಗುವಂತೆ 177 ರೂ. ಕಡಿಮೆ ಮಾಡಲಾಗಿದ್ದು, ಈಗ ಈ ಸಿಲಿಂಡರ್ ದರ 3,001 ರೂ. ಆಗಿದೆ.


ಐದು ಕೆಜಿ ಎಫ್‌ಟಿಎಲ್ (ಫ್ರೀ ಟ್ರೇಡ್ ಎಲ್‌ಪಿಜಿ) ಸಿಲಿಂಡರ್‌ಗೆ 877 ರೂ. ಇತ್ತು. ಇದೀಗ 834 ರೂ. ಆಗಿದ್ದು, 43 ರೂ. ಇಳಿಕೆಯಾಗಿದೆ. 35 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆಯು 5,854 ರೂ. ಇತ್ತು. ಈಗ 5,528.50 ರೂ. ಆಗಿದೆ. ಅಲ್ಲಿಗೆ 325.50 ರೂ. ಇಳಿಕೆಯಾಗಿದೆ. 47 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆಯು 7,940.50 ರೂ. ಇತ್ತು. ಈಗ 7,499 ರೂ. ಆಗಿದ್ದು, ಇದರಲ್ಲಿ 441.50 ರೂ. ಇಳಿಕೆಯಾಗಿದೆ. ಗೃಹಬಳಕೆ ಸಿಲಿಂಡರ್ (14.2 ಕೆಜಿ) ಬೆಲೆಯಲ್ಲಿ (917.50 ರೂ.) ಯಾವುದೇ ವ್ಯತ್ಯಯವಾಗಿಲ್ಲ ಎಂದು ಅವರು ತಿಳಿಸಿದರು.

1,750 ರೂ.ಗೆ ಇಳಿಸಲು ಮೈಸೂರು ಹೋಟೆಲ್ ಮಾಲೀಕರ ಸಂಘ ಒತ್ತಾಯ: ಯುದ್ಧದ ಪರಿಣಾಮ ಕಳೆದ 4 ತಿಂಗಳಲ್ಲಿ 19 ಕೆಜಿ ವಾಣಿಜ್ಯ ಅನಿಲ ಸಿಲಿಂ ಡರ್ ಬೆಲೆಯನ್ನು 1,500 ರೂ.ವರೆಗೆ ಹೆಚ್ಚಿಸಲಾಗಿತ್ತು. ಈಗ ಈ ಸಿಲಿಂಡರ್ ದರದಲ್ಲಿ 177 ರೂ. ಮಾತ್ರ ಇಳಿಕೆಯಾಗಿದ್ದು, ಇದರ ಜೊತೆಗೆ ದೇಶದ ಅತಿದೊಡ್ಡ ಖಾಸಗಿ ತೈಲೋತ್ಪನ್ನ ಮಾರಾಟ ಕಂಪನಿ ನಯಾರಾ ಎನರ್ಜಿ ಪೆಟ್ರೋಲ್ ದರದಲ್ಲಿ 5 ರೂ., ಡೀಸೆಲ್ ದರದಲ್ಲಿ 3 ರೂ. ಇಳಿಕೆ ಮಾಡಿರುವುದು ಸ್ವಾಗತಾರ್ಹ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ.

ಆದರೂ 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆ ಸಂಬಂಧ 4 ತಿಂಗಳಲ್ಲಿ ದುಪ್ಪಟ್ಟು ಅಂದರೆ 1,500 ರೂ.ಗಳಿಗೆ ಏರಿಸಿ ಈಗ ಕೇವಲ 177 ರೂ. ಇಳಿಸಿದ್ದು, ಇದರಿಂದ ಆತಿಥ್ಯ ಉದ್ಯಮಕ್ಕೆ ಹೆಚ್ಚು ಅನುಕೂಲವಾಗದು. ಕೇಂದ್ರ ಸರ್ಕಾರವು ಹೆಚ್ಚಿಸಿರುವ ವಾಣಿಜ್ಯ ಅನಿಲ ಸಿಲಿಂಡರ್ ಬೆಲೆ ಇನ್ನಷ್ಟು ಇಳಿಸಬೇಕು. ಈ ಹಿಂದೆ ಇದ್ದಂತಹ ಮೂಲಬೆಲೆಯಾದ 1,750 ರೂ.ಗೆ ಇಳಿಸಬೇಕೆಂದು ನಮ್ಮ ಸಂಘವು ಒತ್ತಾಯಿಸುತ್ತದೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಗೃಹ ಬಳಕೆ ಸಿಲಿಂಡರ್‌ಗೆ ಹೊಸ ಸಂಪರ್ಕಕ್ಕೆ ಅರ್ಜಿ ಸಲ್ಲಿಸಬಹುದು

ಆದರೆ ಸಂಪರ್ಕ ಕಲ್ಪಿಸಲು ಅನುಮತಿಸಿಲ್ಲ; ಎಲ್‌ಡಿಎಐ ರಾಜ್ಯಾಧ್ಯಕ್ಷ ಮೆಹುಲ್ ಪಟೇಲ್ ಮಾಹಿತಿ



ಮೈಸೂರು,ಜು.1(ಪಿಎಂ)– ಗೃಹ ಬಳಕೆ ಸಂಬಂಧ ಹೊಸ ಎಲ್‌ಪಿಜಿ ಸಂಪರ್ಕಕ್ಕಾಗಿ ಗ್ರಾಹಕರಿಂದ ಅರ್ಜಿ ಸ್ವೀಕರಿಸಲು ಏಜೆನ್ಸಿಗಳಿಗೆ ತೈಲ ಕಂಪನಿಗಳು ಸೂಚಿಸಿವೆ ಎಂದು ಎಲ್‌ಡಿಎಐ ರಾಜ್ಯಾಧ್ಯಕ್ಷ ಮೆಹುಲ್ ಪಟೇಲ್ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಯುದ್ಧದ ಬಿಕ್ಕಟು ಮತ್ತು ಹಾರ್ಮುಜ್ ಜಲಸಂಧಿಯ ಮಾರ್ಗದಲ್ಲಿನ ಅಡಚಣೆಯಿಂದ ದೇಶದಲ್ಲಿ ಎಲ್‌ಪಿಜಿ ಆಮದಿಗೆ ಹಿನ್ನಡೆಯಾಗಿದೆ. ಪರಿಸ್ಥಿತಿ ನಿಭಾಯಿಸಲು ಹಾಗೂ ಈಗಾಗಲೇ ಇರುವ ಗ್ರಾಹಕರಿಗೆ ನಿರಂತರವಾಗಿ ಅನಿಲ ಪೂರೈಕೆ ಖಚಿತಪಡಿಸಲು ಸರ್ಕಾರ ಹೊಸ ಎಲ್‌ಪಿಜಿ ಸಂಪರ್ಕ ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಆದರೆ ಹೊಸ ಸಂಪರ್ಕ ಪಡೆಯುವ ಸಂಬಂಧ ಇದೀಗ ಅರ್ಜಿ ಸ್ವೀಕರಿಸಲು ಮಾತ್ರ ಅನುಮತಿ ನೀಡಿದ್ದು, ಸಂಪರ್ಕ ಕಲ್ಪಿಸುವ ಪ್ರಕ್ರಿಯೆಗೆ ಅನುಮತಿಸಿಲ್ಲ ಎಂದು ಹೇಳಿದರು.

ಜುಲೈ ತಿಂಗಳಲ್ಲಿ ಹೊಸ ಸಂಪರ್ಕ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಹಾರ್ಮುಜ್ ಜಲಸಂಧಿಯ ಮಾರ್ಗದಲ್ಲಿ ಭಾರತದ 150 ತೈಲ ಸಂಗ್ರಹ ಹಡಗುಗಳು ಪ್ರಯಾಣ ಸ್ಥಗಿತಗೊಳಿಸುವಂತಹ ಸನ್ನಿವೇಶ ಹಲವು ದಿನಗಳಿಂದಲೂ ಇದೆ. ಯುದ್ಧ ಸಂಬಂಧ ಶಾಂತಿ ಒಪ್ಪಂದ ಸಫಲವಾದರೆ ಸದರಿ ಹಡಗುಗಳು ಭಾರತ ತಲುಪಲು ಅನುಕೂಲವಾಗಲಿದೆ. ಇತ್ತೀಚೆಗೆ ಈ ಹಡಗುಗಳು ಭಾರತದತ್ತ ಪ್ರಯಾಣಿಸಲು ಅನುಕೂಲಕರ ವಾತಾವರಣ ಸೃಷ್ಟಿಯಾಗಿದೆ ಎನ್ನಲಾಗುತ್ತಿದ್ದು, ಶಾಂತಿ ಒಪ್ಪಂದ ಆದಲ್ಲಿ ದೇಶದಲ್ಲಿನ ಗೃಹ ಬಳಕೆ ಸಿಲಿಂಡರ್‌ಗಳ ಹೊಸ ಸಂಪರ್ಕ ಕಲ್ಪಿಸುವ ಪ್ರಕ್ರಿಯೆ ಆರಂಭಗೊಳ್ಳಲಿದೆ ಎಂದು ತಿಳಿಸಿದರು.

ಹಿಂದೂ ವಿವಾಹಕ್ಕೆ ನೋಂದಣಿ ಸಾಕಾಗಲ್ಲ; ಸಪ್ತಪದಿ ಸೇರಿ ಧಾರ್ಮಿಕ ವಿಧಿವಿಧಾನ ಕಡ್ಡಾಯ

ಗುಜರಾತ್ ಹೈಕೋರ್ಟ್ ಮಹತ್ವದ ತೀರ್ಪು



ಗಾಂಧಿನಗರ: ಹಿಂದೂ ವಿವಾಹಕ್ಕೆ ಕೇವಲ ವಿವಾಹ ನೋಂದಣಿ ಪ್ರಮಾಣ ಪತ್ರವಿದ್ದರೆ ಸಾಕಾಗುವುದಿಲ್ಲ. ಸಪ್ತಪದಿ ಸೇರಿದಂತೆ ಅಗತ್ಯ ಧಾರ್ಮಿಕ ವಿಧಿವಿಧಾನಗಳು ನಡೆದಿದ್ದರೆ ಮಾತ್ರ ವಿವಾಹಕ್ಕೆ ಕಾನೂನುಬದ್ಧ ಮಾನ್ಯತೆ ಸಿಗುತ್ತದೆ ಎಂದು ಗುಜರಾತ್ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಬ್ರಿಟನ್‌ನಲ್ಲಿ ನೆಲೆಸಿರುವ ವ್ಯಕ್ತಿಯೊಬ್ಬರು ತಮ್ಮ ಹೆಸರಿನಲ್ಲಿ ನೋಂದಾಯಿಸಲಾದ ವಿವಾಹವನ್ನು ಅಮಾನ್ಯ ಎಂದು ಘೋಷಿಸುವಂತೆ ಸಲ್ಲಿಸಿದ್ದ ಮೇಲ್ಮನವಿಯನ್ನ ವಿಚಾರಿಸಿದ ನ್ಯಾಯಮೂರ್ತಿಗಳಾದ ಇಲೇಶ್ ಜೆ. ವೋರಾ ಮತ್ತು ಆರ್.ಟಿ. ವಚಾನಿ ಅವರ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ಪ್ರಕರಣದ ವಿಚಾರಣೆ ವೇಳೆ, ಪ್ರತಿವಾದಿ ಮಹಿಳೆ ಸ್ವತಃ ನ್ಯಾಯಾಲಯದ ಮುಂದೆ ಯಾವುದೇ ವಿವಾಹ ವಿಧಿವಿಧಾನಗಳು ನಡೆದಿಲ್ಲ ಎಂದು ಒಪ್ಪಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಕೇವಲ ವಿವಾಹ ನೋಂದಣಿ ಪ್ರಮಾಣಪತ್ರದ ಆಧಾರದ ಮೇಲೆ ವಿವಾಹ ಮಾನ್ಯವಾಗಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ನ್ಯಾಯಾಲಯವು ಹಿಂದೂ ವಿವಾಹ ಕಾಯ್ದೆ–1955ರ ಸೆಕ್ಷನ್ 7 ಅನ್ನು ಉಲ್ಲೇಖಿಸಿದ್ದು, ಹಿಂದೂ ವಿವಾಹವು ಆಯಾ ಕುಟುಂಬ ಅಥವಾ ಸಮುದಾಯದ ಸಂಪ್ರದಾಯದಂತೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೆರವೇರಬೇಕು ಎಂದು ತಿಳಿಸಿದೆ. ವಿಶೇಷವಾಗಿ ಸಪ್ತಪದಿ ಸೇರಿದಂತೆ ಅಗತ್ಯ ಆಚರಣೆಗಳು ನಡೆದಾಗ ಮಾತ್ರ ವಿವಾಹಕ್ಕೆ ಧಾರ್ಮಿಕ, ಸಾಮಾಜಿಕ ಹಾಗೂ ಕಾನೂನುಬದ್ಧ ಮಾನ್ಯತೆ ದೊರೆಯುತ್ತದೆ ಎಂದು ಹೇಳಿದೆ.

ತೀರ್ಪಿನಲ್ಲಿ ನ್ಯಾಯಾಲಯ ಮಹತ್ವದ ಅಭಿಪ್ರಾಯವನ್ನೂ ವ್ಯಕ್ತಪಡಿಸಿದೆ. ವಿವಾಹ ಎನ್ನುವುದು ಕೇವಲ ಸಂಭ್ರಮಾಚರಣೆ ಅಥವಾ ಆಚರಣೆಯ ಕಾರ್ಯಕ್ರಮವಲ್ಲ. ಅದು ಪವಿತ್ರ ಸಂಸ್ಕಾರ ಮತ್ತು ಜೀವಮಾನದ ಬಾಂಧವ್ಯವಾಗಿದೆ. ಯುವಜನರು ವಿವಾಹದ ಪಾವಿತ್ರ್ಯತೆಯ ಹಾಗೂ ಅದರ ಜವಾಬ್ದಾರಿಯನ್ನು ಅರಿತು ವೈವಾಹಿಕ ಜೀವನಕ್ಕೆ ಕಾಲಿಡಬೇಕು ಎಂದು ನ್ಯಾಯಪೀಠ ತಿಳಿಸಿದೆ.